BROWN BOOK

# THE BOOK WAS DRENCHED

# TEXT PROBLEM WITHIN THE BOOK ONLY

UNIVERSAL LIBRARY
OU_198256
UNIVERSAL LIBRARY

# ಎಲ್ಲರ ಮೈಗೂ ಅಂದ !

# ಎಲ್ಲರ ಕಣ್ಣಿಗೂ ಚೆಂದ !!

**ಉಡುಗೆ ತೊಡಿಗೆ ಹಾಗಿರಬೇಕು.**

★

ನಮ್ಮ ಬಟ್ಟೆಗಳನ್ನು ಎಲ್ಲರೂ ಮೆಚ್ಚುತ್ತಿದ್ದಾರೆ.

ಎಲ್ಲರೂ ಬಳಸುತ್ತಿದ್ದಾರೆ

# ಟಿ. ಆರ್. ಮಿಲ್ಸ್

(ಟೆಕ್ಸ್‌ಟೈಲ್ ಮ್ಯಾನ್ಯುಫ್ಯಾಕ್ಚರರ್ಸ್)

ಒಂದು ಸಲ ಪರೀಕ್ಷಿಸಿ ನೋಡಿ

ನಿಮಗೇ ತಿಳಿಯುತ್ತದೆ.

## ಬಲು ಅಗ್ಗ ! ಬಾಳಿಕೆ ! ಅಂದ !

ಚಾಮರಾಜಪೇಟೆ, ಬೆಂಗಳೂರು.

—ಟಿ. ಆರ್. ರಾಧಾಕೃಷ್ಣಯ್ಯ ಮಾಲೀಕರು

ಗಾಂಧೀ ಸಾಹಿತ್ಯ-೮

# ನನ್ನ ಜೊತೆಗಾರರು

ಮೋ. ಕ. ಗಾಂಧೀ

ಅನುವಾದಕರು.
ಸಿದ ವನಹಳ್ಳಿ ಕೃಷ್ಣಶರ್ಮ

೧೯೫೩.

ರಾಮನ ಲಕ್ಷ್ಮಣ, ಬುದ್ಧನ ಆನಂದ

ಕ್ರೈಸ್ತನ ಪೀಟರ್, ಪೈಗಂಬರನ ಆಲಿ

ಗಾಂಧೀಜಿಯ ನೆರಳು

**ಮಹದೇವ ಭಾಯಿಯ**

**ಸವಿ ನೆನಪಿಗಾಗಿ**

# ಮಗನಲಾಲ ಗಾಂಧೀ

ನನ್ನ ಸರ್ವಸ್ವಕ್ಕೂ ಉತ್ತರಾಧಿಕಾರಿಯೆಂದು ಯಾರನ್ನು ನಾನು ಆರಿಸಿಕೊಂಡಿದ್ದೆನೋ ಅವನು ಇನ್ನಿಲ್ಲ. ಮಗನಲಾಲ ಗಾಂಧೀ ನನ್ನ ಚಿಕ್ಕಪ್ಪನೊಬ್ಬಾತನ ಮೊಮ್ಮಗ. ೧೯೦೪ ರಿಂದಲೂ ಮಗನಲಾಲ ನನ್ನ ಜೊತೆಯಲ್ಲೇ ಕೆಲಸಮಾಡುತ್ತಿದ್ದ. ಅವನ ತಂದೆ ತನ್ನ ಮಕ್ಕಳೆಲ್ಲರನ್ನೂ ನಮ್ಮ ಚಳುವಳಿಗೆ ಸಮರ್ಪಿಸಿಬಿಟ್ಟರು. ಈ ತಿಂಗಳ ಮೊದಲಲ್ಲಿ ಜಮನಾಲಾಲ ಸೇಠರ ಜೊತೆಗೆ ಮಗನಲಾಲ ಬಂಗಾಲಕ್ಕೆ ಹೋದ. ಬಿಹಾರಕ್ಕೆ ಬಂದು ಅಲ್ಲಿ ಕೆಲಸ ಮಾಡುತ್ತಿರುವಾಗ ತೀಕ್ಷ್ಣವಾದ ಜ್ವರ ತಗಲಿ, ೯ ದಿನ ಬೇನೆಯಿಂದ ಮಲಗಿ, ವ್ರಜಕಿಶೋರ ಪ್ರಸಾದರ ಕ.ಹಿನ ತಂಪು ನೆರಳಲ್ಲಿ ಪಾಟ್ನಾದಲ್ಲಿ ಕಣ್ಮರೆಯಾದ. ಪ್ರೀತಿ, ಕೌಶಲ್ಯಗಳು ಸಲ್ಲಿಸಬಹುದಾದ ಶ್ರದ್ಧೆಯು ಅರ್ಹತೆಯೆಲ್ಲವೂ ಮಗನಲಾಲನಿಗೆ ಇತ್ತು. ಆದರೇನು ?

ತಕ್ಕಮಟ್ಟಿಗೆ ಐಶ್ವರ್ಯವನ್ನು ಗಳಿಸಿಕೊಳ್ಳಬೇಕೆಂಬ ಆಸೆಯಿಂದ ಮಗನಲಾಲ ೧೯೦೩ರಲ್ಲಿ ನನ್ನೊಡನೆ ದಕ್ಷಿಣ ಆಫ್ರಿಕಾಕ್ಕೆ ಬಂದ. ಒಂದು ವರ್ಷದ ದಿನವಾದರೂ ಅವನು ತನ್ನ ಕಿರಾಣಿ ಅಂಗಡಿ ನಡೆಸಿದನೋ ಇಲ್ಲವೋ, ಬಡತನದ ವ್ರತವನ್ನು ತೊಡಿರೆಂದು ನಾನು ಮಾಡಿದ ಉಪದೇಶಕ್ಕೆ ಮನಗೊಟ್ಟು ಫೀನಿಕ್ಸ್ ಆಶ್ರಮಕ್ಕೆ ಬಂದು ಸೇರಿದ. ಆಗ ನನ್ನ ಕೈಹಿಡಿದವನು ಒಂದು ಸಲವಾದರೂ ತಪ್ಪಿದನೆ ? ತಡವರಿಸಿದನೆ ? ನಾಡಿನ ಸೇವೆಗಾಗಿ ತನ್ನ ಬಾಳನ್ನು ಅರ್ಪಿಸದೆ ಇದ್ದಿದ್ದರೆ ಅವನು ಕುಬೇರನಾಗಬಹುದಾಗಿತ್ತು. ಅಚ್ಚುಕೂಟದಲ್ಲಿ ಬಿಟ್ಟರೆ ಬಹುಬೇಗನೆ ಅಚ್ಚುಮಾಡುವ ಕಲೆಯ ಒಳಗುಟ್ಟನ್ನೆಲ್ಲ ಸುಲಭವಾಗಿಯೆ ಚೆನ್ನಾಗಿ ತಿಳಿದುಕೊಂಡ. ಅವನ ನಿಸ್ಸಂದೇಹವಾದ ಯೋಗ್ಯತೆ, ನಿರಂತರ ಪರಿಶ್ರಮ ಅಂಥದು. ಹುಟ್ಟಿದಂದಿನಿಂದ ಒಂದು ಯಂತ್ರವನ್ನಾಗಲಿ ಯಂತ್ರೋಪಕರಣವನ್ನಾಗಲಿ ಕಂಡವನಲ್ಲದಿದ್ದರೂ ಇಂಜಿನ್ ಕೋಣೆಯಲ್ಲಾಗಲಿ, ಅಚ್ಚು ಯಂತ್ರದ ಬಳಿಯಾಗಲಿ, ಮೊಳೆ ಜೋಡಿಸುವ ಕೆಲಸದಲ್ಲಾಗಲಿ, ಎಲ್ಲಿ ಬಿಟ್ಟರೂ ಸರಾಗವಾಗಿ ಕೆಲಸಮಾಡುತ್ತಿದ್ದ. 'ಇಂಡಿಯನ್ ಒಪಿನಿಯನ್' * ನ ಗುಜರಾತಿ ವಿಭಾಗದ ಸಂಪಾದಕೀಯ ಕಾರ್ಯವೂ ಅವನಿಗೆ ಅಷ್ಟೇ ಸರಾಗವಾಗಿತ್ತು. ಫೀನಿಕ್ಸ್ ಆಶ್ರಮದ ಏರ್ಪಾಡಿನಲ್ಲಿ ಬೇಸಾಯವೂ ಸೇರಿತ್ತಷ್ಟೆ. ಸರಿ, ಮಗನಲಾಲ ಒಳ್ಳೇ ಬೇಸಾಯಗಾರನೂ ಆದ. ಆಶ್ರಮದ ಬೇಸಾಯದ ಪಟ್ಟಿಗಳಲ್ಲಿ ಅವನದೇ ಅತ್ಯುತ್ತಮವಾಗಿತ್ತೆಂದು

---

* ದಕ್ಷಿಣ ಆಫ್ರಿಕಾದಲ್ಲಿದ್ದಾಗ ಹೊರಡಿಸುತ್ತಿದ್ದ ವಾರ ಪತ್ರಿಕೆ.

ನನಗೆ ಅನಿಸುತ್ತದೆ. 'ಯಂಗ್ ಇಂಡಿಯಾ' * ಪತ್ರಿಕೆಯನ್ನು ಅಹಮದಾಬಾದಿನಿಂದ ಹೊರಡಿಸಿದಾಗ ಅದರ ಮೊದಲನೆಯ ಸಂಚಿಕೆಯಲ್ಲೇ ಅವನ ಕೈವಾಡದ-ಎಷ್ಟು ಅಗತ್ಯವಾಗಿತ್ತೊ, ಆಗ ಆ ಮುದ್ರಿತ-ಗುರುತು ಇದೆ ಎಂಬ ಸಂಗತಿ ಜನರಿಗೆ ತಿಳಿದಿಲ್ಲ.

ಮಗನಲಾಲನದು ದೃಢಕಾಯ. ತಾನು ನೆಚ್ಚಿಕೊಂಡ ಚಳುವಳಿಯ ಏಳಿಗೆಗಾಗಿ ಅವನು ತನ್ನ ಆ ವಜ್ರ ಶರೀರವನ್ನು ತೇದುಕೊಟ್ಟ. ನನ್ನ ಆಧ್ಯಾತ್ಮ ಜೀವನದಲ್ಲಿ ಅವನಿಗೆ ತುಂಬ ಆಸ್ಥೆ. ಸದಾ ಸೂಕ್ಷ್ಮವಾಗಿ ಪರಿಶೀಲಿಸುತ್ತಲೇ ಇದ್ದ. ಸತ್ಯಶೋಧನೆಯ ಹಾದಿಯಲ್ಲಿ ಗೃಹಸ್ಥಾಶ್ರಮಿಗಳಿಗೂ ಕೂಡ ಬ್ರಹ್ಮಚರ್ಯವ್ರತಪಾಲನೆ ಅಗತ್ಯವೆಂದು ನನ್ನ ಒಡನಾಡಿಗಳಿಗೆ ನಾನು ತಿಳಿಸಿದಾಗ ಆ ಮಹಾವ್ರತದ ಚೆಲುವನ್ನೂ ಅವಶ್ಯಕತೆಯನ್ನೂ ಮೊಟ್ಟಮೊದಲು ಗ್ರಹಿಸಿದವನು ಮಗನಲಾಲ. ನಾನು ಕಂಡ ಹಾಗೆ ಅದರಿಂದ ಅವನ ಪಾಲಿಗೆ ಘೋರ ತಪೋಜೀವನದ ಕಠಿಣ ಕದನವೇ ಬಂದೊದಗಿದರೂ ವ್ರತವನ್ನು ನಡೆಸುವುದರಲ್ಲಿ ಗೆದ್ದ; ತನ್ನ ಹೆಂಡತಿಗೂ—ಬಲಾತ್ಕಾರವಾಗಿಯಲ್ಲ, ನಲ್ಮೆಯಿಂದ ತಿಳಿಸಿ ಹೇಳಿ-ಆ ದೀಕ್ಷೆ ಕೊಡಿಸಿ ಗೆದ್ದ.

ಸತ್ಯಾಗ್ರಹ ಮೊದಲು ಪ್ರಾರಂಭವಾದಾಗ ಮಗನಲಾಲ ಮುಂಭಾಗದಲ್ಲಿದ್ದ. ದಕ್ಷಿಣ ಆಫ್ರಿಕದಲ್ಲಿ ನಾವು ಹೂಡಿದ್ದ ಕದನಕ್ಕೆ ಸರಿಯಾದ ಅರ್ಥಗೌರವವುಳ್ಳ ಶಬ್ದ ಸಿಗದೆ ಅರ್ಥ ಸಾಲದ, ಅಪಾರ್ಥಕ್ಕೂ ಎಡೆಕೊಡಬಹುದಾದ Passive Resistance ಎಂಬ ಮಾತನ್ನು ಅದರ ಹೆಸರಿಗಾಗಿ ಬಳಸಲು ಅವಕಾಶ ಕೊಟ್ಟೆ. ಆ ಕದನದ ಅಂತರಾರ್ಥಕ್ಕೆ ಸರಿಹೋಗುವ, ಅದರ ಗೊತ್ತು ಗುರಿಗಳನ್ನು ಸಂಪೂರ್ಣವಾಗಿ ತಿಳಿಸುವ ಹೆಸರಿಗಾಗಿ ನಾನು ಪ್ರಯಾಸ ಪಡುತ್ತಿದ್ದಾಗ ಅವನೇ ನನಗೆ ಆ ಮಾತನ್ನು ಕೊಟ್ಟವನು 'ಸದಾಗ್ರಹ' ಎಂಬ ಹೆಸರನ್ನು ಸೂಚಿಸಿ, ಅದಕ್ಕೆ ತಕ್ಕ ಕಾರಣಗಳನ್ನು ಕೊಟ್ಟು ನನಗೆ ಆಗ ಅವನು ಬರೆದ ಕಾಗದ ಇದ್ದಿದ್ದರೆ ಒಪ್ಪಿಸುತ್ತಿದ್ದೆ. ಸದಾಗ್ರಹವನ್ನು ನಾನು ಸತ್ಯಾಗ್ರಹವೆಂದು ಬದಲಾಯಿಸಿದೆ. ಆ ಚಳುವಳಿಯ ತಾತ್ವಿಕ ಸಿದ್ಧಾಂತವನ್ನೆಲ್ಲ ಮೆಟ್ಟಿಲು ಮೆಟ್ಟಿಲಾಗಿ ಚರ್ಚಿಸಿ ತಾನು ಆರಿಸಿದ ಹೆಸರೇ ಸರಿ ಎಂಬ ನಿಲುಕಿಗೆ ಆ ಕಾಗದ ಓದಿದವರನ್ನೆಲ್ಲ ಬಿಡದ ಹಾಗೆ ತಂದು ನಿಲ್ಲಿಸುತ್ತಿದ್ದ. ಹೀಗಿದ್ದರೂ ಆ ಕಾಗದ ನಂಬಲಿಕ್ಕೂ ಆಗದಷ್ಟು ಚಿಕ್ಕದಾಗಿತ್ತು; ಸಂದರ್ಭಕ್ಕೆ ಎಷ್ಟು ಬೇಕೊ ಅಷ್ಟೇ ಮಾತು. ಅವನ ಕಾಗದಗಳೇ ಯಾವಾಗಲೂ ಹಾಗೆ.

ಜೀವನಕಾಲದಲ್ಲಂತೂ ಅವನು ಯಾವಾಗಲೂ ಬಳಲಿದ್ದಿಲ್ಲ; ಯಾವ ಕೆಲಸಕ್ಕೂ ಹಿಂಜರಿದಿದ್ದಿಲ್ಲ. ಅವನ ದಿಟ್ಟತನದಿಂದ ಅವನ ಸುತ್ತಲಿನ ಜನಕ್ಕೆ ಧೈರ್ಯೋತ್ಸಾಹಗಳು ತುಂಬಿ ಬರುತ್ತಿದ್ದವು. ಎಲ್ಲರೂ ಸೆರೆಮನೆಗೆ ಹೋದಾಗ, ಫೀನಿಕ್ಸಿನಲ್ಲಿ ಸೆರೆಮನೆಗೆ

* 'ನವಜೀವನ' ಹೊರಡುವ ಮೊದಲು ಗಾಂಧೀಜೀ ಹೊರಡಿಸುತ್ತಿದ್ದ ವಾರ ಪತ್ರಿಕೆ.

ಹೋಗುವುದೆಂದರೆ ಒಂದು ಬಹುಮಾನ ಗೆದ್ದಂತೆ ಎಂಬ ಹಾಗೆ ಆಗಿದ್ದಾಗ, ನನ್ನ ಇಷ್ಟದಂತೆ ಹಿಂದುಳಿದು ಅದಕ್ಕಿಂತ ಕಷ್ಟತರವಾದ ಕೆಲಸವನ್ನು ವಹಿಸಿಕೊಂಡ. ಹೆಂಗಸರ ದಳಕ್ಕೆ ಸೇರಲು ತನ್ನ ಹೆಂಡತಿಯನ್ನು ಕಳಿಸಿದ.

ನಾವು ಹಿಂದುಸ್ಥಾನಕ್ಕೆ ಹಿಂದಿರುಗಿದ ಮೇಲೆ ಈ ಆಶ್ರಮ*ಸ್ಥಾಪನೆ; ಆ ಪವಿತ್ರ ತಪೋಮಯ ವಾತಾವರಣದಲ್ಲಿ ಅದನ್ನು ಸ್ಥಾಪಿಸಲು ಸಾಧ್ಯವಾದುದು ಅವನಿಂದಲೇ. ಇಲ್ಲಿ ಆವನ ಪಾಲಿಗೆ ಬಂದ ಕರ್ತವ್ಯ ತೀರ ಹೊಸತರದ್ದು, ಬಹಳ ಕಠಿಣವಾದದ್ದು. ಆದರೆ ಅದಕ್ಕೂ ಅವನು ಜಗ್ಗಲಿಲ್ಲ, ಸಾಧಿಸಿದ. ಅಸ್ಪೃಶ್ಯತೆ ಅವನಿಗೊಂದು ಕಠಿನ ಪರೀಕ್ಷೆಯೇ ಆಯಿತು. ಒಂದು ಗಳಿಗೆಯ ಮಟ್ಟಿಗೆ ಅವನ ಮನಸ್ಸು ಸೋಲಿನ ಅಂಚಿಗೆ ಮುಟ್ಟುವಂತೆ ಹೊಯ್ದಾಡಿತು. ಒಂದೇ ಗಳಿಗೆ ! ಒಡನೆಯೆ ಒಲವಿಗೆ ಬೇಲಿಯಿಲ್ಲ ವೆಂಬುದನ್ನು ಅರಿತುಕೊಂಡ. ಅಸ್ಪೃಶ್ಯರ ಬಾಳಿನ ಭವಣೆಯನ್ನು ತಾನೂ ಅನುಭವಿಸಬೇಕೆಂದು ಗ್ರಹಿಸಿದ. ಮೇಲಿನ ವರ್ಣದವರೇ ತಾನೆ ಅವರ ಭವಣೆಗೆ ಕಾರಣ !

ಈ ಆಶ್ರಮದ ಯಂತ್ರಶಾಲೆ ಫೀನಿಕ್ಸಿನ ರೀತಿಯದಲ್ಲ. ಇಲ್ಲಿ ನಾವು ನೂಲುವುದು, ನೇಯುವುದು, ಹಿಂಜುವುದೂ, ಹಾಸುಬಿಡಿಸುವುದು ಇವನ್ನು ಕಲಿಯಬೇಕಾಗಿತ್ತು. ಮತ್ತೆ ಮಗನಲಾಲನನ್ನೇ ಮೊರೆಹೋದೆ. ವಿಚಾರ, ಹಂಚಿಕೆಯೇನೋ ನನ್ನವಾದರೂ ಅದನ್ನು ಮಾಡಿ ತೋರಿಸಿದ್ದು ಅವನ ಕೈಗಳು. ನೇಯುವುದನ್ನೂ, ಹತ್ತಿಯು ಖಾದಿ ಅರಿವೆಯಾಗುವುದಕ್ಕೆ ಬೇಕಾಗುವ ಎಲ್ಲ ವಿಧಾನಗಳನ್ನೂ ಅವನು ಕಲಿತುಕೊಂಡ. ನಿಜವಾಗಿ ಮಗನಲಾಲ ಹುಟ್ಟು ಯಾಂತ್ರಿಕ.

ಆಶ್ರಮದಲ್ಲಿ ಗೋಪಾಲನೆಯನ್ನು ಪ್ರಾರಂಭಮಾಡಿದೆವು. ಅತ್ಯುತ್ಸಾಹದಿಂದ ಮಗನಲಾಲ ಆ ಕೆಲಸಕ್ಕೆ ತೊಡಗಿದ. ಗೋಪಾಲನೆಯ ಸಾಹಿತ್ಯವನ್ನು ಓದಿದ. ಪ್ರತಿಯೊಂದು ಹಸುವಿಗೂ ಒಂದು ಹೆಸರು ಇಟ್ಟ. ಆಶ್ರಮದ ದನಗಳೆಲ್ಲಕ್ಕೂ ಗೆಳೆಯನಾದ.

ಚರ್ಮಾಲಯದ ಪ್ರಾರಂಭವಾದಾಗಲೂ ಅವನು ಮುನಿಯಲಿಲ್ಲ. ಕೊಂಚ ಉಸಿರಾಡಿಸುವಷ್ಟು ಬಿಡುವು ದೊರೆತರೆ ಸಾಕು, ಚರ್ಮ ಹದಮಾಡುವ ಕಲೆಯ ವಿವರಗಳನ್ನೆಲ್ಲ ಕಲಿಯಬೇಕೆಂದು ಸಂಕಲ್ಪ ಮಾಡಿದ. ರಾಜಕೋಟೆಯ ಹೈಸ್ಕೂಲಿನಲ್ಲಿ ಪಡೆದ ಶಿಕ್ಷಣದ ಜೊತೆಗೆ ಅವನಿಗೆ ಅನುಭವದ ನಿಷ್ಠುರ ಶಾಲೆಯಲ್ಲಿ ಅನೇಕ ವಿಷಯಗಳು ಬಹಳ ಚೆನ್ನಾಗಿ ತಿಳಿದುಬಂದುವು. ಹಳ್ಳಿಯ ಬಡಗಿಗಳು, ನೇಕಾರರು, ರೈತರು, ಕುರುಬರು ಮುಂತಾದ ಸಾಧಾರಣ ಜನರಿಂದ ಅವನು ತಿಳಿವನ್ನು ಸಂಪಾದಿಸಿದ

---

* ಸಾಬರಮತಿ ಆಶ್ರಮ.

ಅಖಿಲ-ಭಾರತ ಚರಖಾ ಸಂಘದ Technical ಶಾಖೆಗೆ ಮಗನಲಾಲ ಅಧ್ಯಕ್ಷನಾಗಿದ್ದ. ಮೊನ್ನೆ ಮೊನ್ನೆ ಗುಜರಾತಿನಲ್ಲಿ ನೆರೆಯ ಹಾವಳಿಯಾದಾಗ ಹೊಸದಾಗಿ ಕಟ್ಟಿದ ವಿಠಲಪುರದ ನಿರ್ಮಾಣಕಾರ್ಯಕ್ಕೆ ವಲ್ಲಭಭಾಯಿ ಅವನನ್ನೇ ಆರಿಸಿದ್ದ.

ಮಗನಲಾಲ ಒಳ್ಳೆ ಮಾದರಿ ತಂದೆ. ತನ್ನ ಇಬ್ಬರು ಹುಡುಗಿಯರನ್ನೂ ಒಬ್ಬ ಹುಡುಗನನ್ನೂ—ಯಾರಿಗೂ ಇನ್ನೂ ಮದುವೆಯಾಗಿಲ್ಲ—ದೇಶಸೇವೆಗೆ ಮುಡಿಪಾಗಿ ಸಲ್ಲಿಸಲು ಯೋಗ್ಯರಾಗುವಂತೆ ತಯಾರು ಮಾಡಿದ. ಅವನ ಮಗ ಕೇಶು ತನ್ನ ತಂದೆಯ ಹಾಗೆಯೆ ತಾನೂ ಸಾಮಾನ್ಯರಾದ ಬಡಗಿ ಕಮ್ಮಾರರನ್ನು ನೋಡಿ ಕಲಿತ ಯಂತ್ರಶಿಲ್ಪದಲ್ಲಿ ಚಲೋ ಯೋಗ್ಯತೆಯನ್ನು ತೋರಿಸುತ್ತಿದ್ದಾನೆ. ಅವನ ಹಿರಿಯ ಮಗಳು ರಾಧೆ ಹದಿನೆಂಟು ವರುಷದ ಹುಡುಗಿ. ಆದರೂ ಮೊನ್ನೆ ಮೊನ್ನೆ ಸ್ತ್ರೀಸ್ವಾತಂತ್ರ್ಯದ ವಿಷಯವಾಗಿ ನಾಜೂಕಾದ, ಕಷ್ಟವಾದ ಕೆಲಸವೊಂದನ್ನು ವಹಿಸಿಕೊಂಡು ಬಿಹಾರಿಗೆ ಹೋಗಿದ್ದಳು. ರಾಷ್ಟ್ರೀಯ ಶಿಕ್ಷಣವೆಂದರೇನು ಎಂಬುದನ್ನು ಮಗನಲಾಲ ಚೆನ್ನಾಗಿ ತಿಳಿದುಕೊಂಡಿದ್ದ. ಅನೇಕ ಸಲ ಈ ವಿಷಯವಾಗಿ ಅವನು ಉಪಾಧ್ಯಾಯರೊಡನೆ ಶ್ರದ್ಧಾಪೂರ್ಣವಾದ, ವಿಮರ್ಶಾತ್ಮಕವಾದ ಚರ್ಚೆಗಳನ್ನು ನಡೆಸುತ್ತಿದ್ದ.

ಅವನಿಗೆ ರಾಜಕೀಯ ವಿಚಾರವೇನೂ ಗೊತ್ತಿರಲಿಲ್ಲವೆಂದು ಓದುಗರು ತಿಳಿಯಬಾರದು. ಅವನಿಗೆ ಗೊತ್ತಿತ್ತು. ಆದರೆ ಅವನು ಆರಿಸಿಕೊಂಡದ್ದು ಸ್ವಾರ್ಥರಹಿತವಾದ ರಚನಾತ್ಮಕ ಕಾರ್ಯ ಮಾರ್ಗ.

ಮಗನಲಾಲ ನನ್ನ ಕೈಯಾಗಿದ್ದ. ನನ್ನ ಕಾಲೂ ಕಣ್ಣೂ ಅವನೇ ಆಗಿದ್ದ. ನನ್ನ ಶ್ರೇಷ್ಠತೆ ಎಷ್ಟರಮಟ್ಟಿಗೆ ಸ್ವಾರ್ಥತ್ಯಾಗಿ ಸಮರ್ಥರೂ ಪವಿತ್ರರೂ ಆದ ಕಾರ್ಯಕರ್ತರ ಸದ್ದಿಲ್ಲದ ದುಡಿತ, ತಪಶ್ಚರ್ಯೆಗಳು ಎಷ್ಟರಮಟ್ಟಿಗೆ ಆಧಾರವೋ ಪ್ರಪಂಚಕ್ಕೇನು ಗೊತ್ತು? ಅವರಲ್ಲಿ ಗಂಡಸರೂ ಉಂಟು, ಹೆಂಗಸರೂ ಉಂಟು. ಅವರೆಲ್ಲರಲ್ಲಿ ಮಗನಲಾಲನೇ ನನ್ನ ಪಾಲಿಗೆ ಶ್ರೇಷ್ಠರಲ್ಲಿ ಶ್ರೇಷ್ಠ, ಉತ್ತಮರೊಳಗುತ್ತಮ, ಪರಿಶುದ್ಧರಲ್ಲಿ ಪರಿಶುದ್ಧ.

ಈ ಸಾಲುಗಳನ್ನು ಬರೆಯುತ್ತಿರುವಾಗ ತನ್ನ ಒಲವಿನ ಗಂಡನ ಸಾವಿಗಾಗಿ ಮರುಗುತ್ತಿರುವ ವಿಧವೆಯ ಅಳು ಕೇಳಿಸುತ್ತಿದೆ. ಅವಳಿಗಿಂತ ಹೆಚ್ಚು ನಾನೇ ವಿಧವನಾದೆ ಎಂಬುದನ್ನು ಪಾಪ, ಅವಳೇನು ಬಲ್ಲಳು? ಮಗನಲಾಲ ನನ್ನ ಮಕ್ಕಳಿಗಿಂತ ನನಗೆ ಹೆಚ್ಚು ಪ್ರೀತಿಪಾತ್ರನಾಗಿದ್ದ, ಒಮ್ಮೆಯಾದರೂ ನನಗೆ ಅವನು ಮೋಸ ಮಾಡಿಲ್ಲ; ಎಂದೂ ಕೈ ಬಿಟ್ಟಿಲ್ಲ. ಸತತೋದ್ಯೋಗದ ಮೂರ್ತಿಮಂತರೂಪ ಅವನು. ಆಶ್ರಮದ ಧನಸಂಪತ್ತಿ, ನೀತಿಸಂಪತ್ತಿ, ಅಧ್ಯಾತ್ಮಸಂಪತ್ತಿಗಳಿಗೆ ಅಧಿದೇವತೆಯಾಗಿದ್ದವನು ಅವನು. ದೇವರಲ್ಲಿ ನನಗಿರುವ ದೃಢವಾದ ನಂಬಿಗೆಯೇ

ನನ್ನ ಕಾಪು. ಇಲ್ಲದಿದ್ದರೆ ಮಗನಲಾಲನಂಥ ಜೀವಿಯನ್ನು ಕಳೆದುಕೊಂಡ ನನಗೆ ಹುಚ್ಚು ಹಿಡಿಯಬೇಕಾಗಿತ್ತು. ಅವನ ಬಾಳು ನನಗೊಂದು ಸ್ಫೂರ್ತಿ; ನೀತಿಧರ್ಮದ ಸಾಮರ್ಥ್ಯ, ಶ್ರೇಷ್ಠತೆಗಳ ಶಾಶ್ವತ ಪ್ರಮಾಣ. ತನ್ನ ಬಾಳಿನಲ್ಲಿ ಒಂದೆರಡು ದಿನವಲ್ಲ, ಒಂದೆರಡು ತಿಂಗಳಲ್ಲ, ಇಪ್ಪತ್ತುನಾಲ್ಕು ವರ್ಷಗಳ ದೀರ್ಘಕಾಲದವರೆಗೆ — ಆದರೆ ಈಗೆಲ್ಲಿ? ಎಷ್ಟು ಅಲ್ಪ ಕಾಲ!—ನಾಡ ಸೇವೆ, ಲೋಕಸೇವೆ, ಆತ್ಮ ಸಾಕ್ಷಾತ್ಕಾರ, ಬ್ರಹ್ಮಜ್ಞಾನ ಎಲ್ಲವೂ ಒಂದೇ ಅರ್ಥದ ಬೇರೆಬೇರೆ ಮಾತು ಎಂಬುದನ್ನು ಮಗನಲಾಲ ನನ್ನ ಕಣ್ಣಿಗೆ ಕಾಣುವ ಹಾಗೆ ಪ್ರಮಾಣಿಸಿ ತೋರಿಸಿದ.

ಮಗನಲಾಲ ಮರೆಯಾದ. ಆದರೆ ಅವನ ಕೃತಿಗಳಲ್ಲಿ ಬದುಕಿದಾನೆ. ಕಣ್ಣುಳ್ಳವರಿಗೆ ಆಶ್ರಮದ ಧೂಳಿಯ ಕಣಕಣದಲ್ಲಿಯೂ ಅವನ ಕೃತಿಯ ಗುರುತು ಕಂಡೀತು.

ಏಪ್ರಿಲ್ ೨೬, ೧೯೨೮

---

# ಲಾಲಾಜೀ ಚಿರಕಾಲ ಬಾಳಲಿ

ಲಾಲಾ ಲಜಪತರಾಯರು ದೇಹವಿಟ್ಟರು. ಲಾಲಾಜೀ ಚಿರಕಾಲ ಬದುಕಲಿ. ಹಿಂದೂಸ್ಥಾನದಲ್ಲಿ ಲಾಲಾಜಿಯಂಥ ಜೀವರು ಮುಗಿಲಲ್ಲಿ ಸೂರ್ಯ ಬೆಳಗುತ್ತಿರುವ ತನಕ ಸಾಯಲಾರರು. ಲಾಲಾಜಿಯೆಂದರೆ ಒಂದು ಸಂಸ್ಥೆಯಿದ್ದ ಹಾಗೆ. ಹರೆಯದಿಂದಲೂ ತಾಯ್ನಾಡ ಸೇವೆಯೇ ಅವರಿಗೆ ಧರ್ಮವಾಗಿತ್ತು. ಅವರ ದೇಶಾಭಿಮಾನವಾದರೂ ಸಂಕುಚಿತ ಶ್ರದ್ಧೆಯಾಗಿರಲಿಲ್ಲ. ಇಡೀ ಜಗತ್ತನ್ನೆ ಅವರು ಪ್ರೀತಿಸುತ್ತಿದ್ದರು. ಅವರ ರಾಷ್ಟ್ರೀಯತೆಯೆಂದರೆ ಅಂತರ-ರಾಷ್ಟ್ರೀಯತೆಯೇ ಸರಿ. ಯೂರೋಪಿನ ಜನರ ಮನಸ್ಸಿನ ಮೇಲೆ ಅವರಿಗಿದ್ದ ಹಿಡಿತಕ್ಕೆ ಅದೇ ಕಾರಣ. ಅಮೆರಿಕಾದಲ್ಲೂ ಯೂರೋಪಿನಲ್ಲೂ ಅವರಿಗೆ ಬೇಕಾದಷ್ಟು ಜನ ಗೆಳೆಯರು. ಆ ಗೆಳೆಯರೆಲ್ಲ ಅವರನ್ನು ಚೆನ್ನಾಗಿ ಬಲ್ಲರು. ಅಂತೇ ಅವರಿಗೆ ಲಾಲಾಜಿಯ ಮೇಲೆ ಪ್ರೀತಿ.

ಅವರು ಮಾಡಿದ ಕೆಲಸ ನಾನಾ ತರದು. ಸಂಘಸುಧಾರಣೆ, ಧರ್ಮವ್ಯವಸ್ಥೆಯಲ್ಲಿ ಅವರಿಗೆ ತುಂಬಾ ಉತ್ಸಾಹ. ನಮ್ಮಲ್ಲನೇಕರಿಗೆ ಬಂದಂತೆ ಅವರ ಸಂಘಸುಧಾರಣೆಯ, ಧರ್ಮೋಜ್ಜೀವನದ ಉತ್ಸಾಹವೇ ಅವರನ್ನು ರಾಜಕೀಯ ರಂಗಕ್ಕೆ ಹತ್ತಿಸಿತು. ಅವರು ರಾಜಕಾರಣಿಯಾಗಲು ಅದೇ ಕಾರಣ. ಪರದೇಶೀಯರ ಅಧಿಕಾರದಿಂದ ನಾಡಿಗೆ ಮುಕ್ತಿ ದೊರೆಯದೆ, ತಾವು ಬಯಸಿದಂಥ ಸುಧಾರಣೆ ನಾಡಿನಲ್ಲಿ ಆಗುವುದು ಸಾಧ್ಯವಿಲ್ಲವೆಂದು ತಮ್ಮ ಸಾರ್ವಜನಿಕ ಜೀವನದ ಪ್ರಾರಂಭದಲ್ಲೇ ಅವರಿಗೆ ತಿಳಿಯಿತು. ನಮ್ಮಲ್ಲನೇಕರಿಗೆ ಅನಿಸಿದ ಹಾಗೆಯೆ, ಅದು ನಮ್ಮ ಬದುಕು ಬಾಳುವೆಯ ಎಲ್ಲ ಅಂಗಗಳಲ್ಲೂ ಹರಡಿ ಕೆಡಿಸುತ್ತಿರುವ ವಿಷ ಎಂದು ಅವರಿಗೆ ಅನಿಸಿತು.

ಲಾಲಾಜೀ ಇರದೆಯಿದ್ದ ಸಾರ್ವಜನಿಕ ಚಳುವಳಿ ಒಂದಾದರೂ ಇಲ್ಲ. ಅಷ್ಟು ತಣಿವಿಲ್ಲದುದು ಅವರ ಸೇವಾಸಕ್ತಿ. ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು'; ದಲಿತ ಜನರಿಗೆ ಗೆಳೆಯರಾದರು; ದಾರಿದ್ರ್ಯವನ್ನು ಕಂಡ ಕಡೆಯಲ್ಲೆಲ್ಲ ತಮ್ಮ ಕೈ ನೀಡಿದರು. ಯುವಕರ ಮೇಲಂತೂ ಅಸಾಧಾರಣ ಪ್ರೇಮವನ್ನು ಕರೆಯುತ್ತಿದ್ದರು. ಅವರ ಸಹಾಯವನ್ನು ಬೇಡಿ ಇಲ್ಲವೆನಿಸಿಕೊಂಡು ಹಿಂದಿರುಗಿದ ಯುವಕನೇ ಇಲ್ಲ. ಲಾಲಾಜಿಯಿಲ್ಲದೆ ರಾಜಕೀಯ ರಂಗದಲ್ಲಿ ಏನೂ ನಡೆಯುವ ಹಾಗೆ ಇರಲಿಲ್ಲ. ತಮ್ಮ ಮನಸ್ಸಿನ ಅಭಿಪ್ರಾಯವನ್ನು ನಿರ್ಭಯವಾಗಿ ಹೇಳಿಬಿಡುತ್ತಿದ್ದರು. ಅದರಿಂದ ಅವರಿಗೆ ತೊಂದರೆಯಾಯಿತು. ಕಷ್ಟ ಸಹನವು ನಮ್ಮವರಿಗೆ ರೂಢಿಯಾಗುವ ಮೊದಲೆ, ಅದೊಂದು ಸಾರ್ವಜನಿಕ ಪದ್ಧತಿಯಾಗುವ ಮೊದಲೆ ಅವರು ಕಷ್ಟಕ್ಕೆ ಗುರಿಯಾದರು ಲಾಲಾಜಿಯದು ಮುಕ್ತ ಮನಸ್ಸಿನ ಬಾಳು. ಮಾತಿನಲ್ಲಿ ಅತಿ ಸ್ಪಷ್ಟಭಾಷಿ. ಅವರ ಆ ಸ್ಪಷ್ಟ ಭಾಷೆಯಿಂದ ಅನೇಕ ಸಲ ಅವರ ಗೆಳೆಯರಿಗೇ ಕಠಿನವಾಗುತ್ತಿತ್ತು. ಅವರನ್ನು ಟೀಕಿಸಿದವರನ್ನಂತೂ ಅದು ಸ್ತಂಭಿಸಿಬಿಡುತ್ತಿತ್ತು.

ನನ್ನ ಮುಸಲ್ಮಾನ್ ಗೆಳೆಯರು ಏನೇ ಹೇಳಲಿ, ನಾನೇನೋ ಖಂಡಿತವಾಗಿ ಹೇಳುತ್ತೇನೆ: ಲಾಲಾಜೀ ಇಸ್ಲಾಮ್ ಧರ್ಮ ವಿರೋಧಿಯಾಗಿರಲಿಲ್ಲ. ಹಿಂದೂ ಧರ್ಮವನ್ನು ಪರಿಶುದ್ಧಗೊಳಿಸಬೇಕೆಂಬದು ಅವರ ಬಯಕೆ. ಈ ಬಯಕೆಯನ್ನು ಇಸ್ಲಾಮ್ ದ್ವೇಷ, ಮುಸಲ್ಮಾನರ ಮೇಲೆ ಹಗೆತನ ಎಂದು ಅಪಾರ್ಥ ಮಾಡಬಹುದೆ ? ಹಿಂದೂ ಮುಸ್ಲಿಂ ಗೆಳೆತನ ಬೆಳೆಯಬೇಕು ಎಂಬದು ಅವರ ಆಸೆ ; ಬೆಳೆಸಬೇಕು ಎಂಬದು ಅವರ ಶ್ರದ್ಧೆ. ಅವರಿಗೆ ಬೇಕಾಗಿದ್ದುದು ಹಿಂದೂ ರಾಜ್ಯವಲ್ಲ, ಭಾರತೀಯ ರಾಜ್ಯ. ಅದರಲ್ಲಿ ಅವರಿಗೆ ಅಮಿತೋತ್ಸಾಹ. ಭಾರತೀಯರು ಎಂದವರಿಗೆಲ್ಲ ಸಂಪೂರ್ಣ ಸಮಾನತೆಯಿರಬೇಕೆಂದು ಅವರ ಅಭಿಪ್ರಾಯ. ಲಾಲಾಜಿಯ ಸಾವಿನಿಂದಲಾದರೂ ನಾವು ಒಬ್ಬರನ್ನೊಬ್ಬರು ನಂಬಲು ಕಲಿಯಬೇಕೆಂದು ನಾನು ಬಯಸುತ್ತೇನೆ. ಭಯವೊಂದನ್ನು ಬಿಟ್ಟರೆ ಸಾಕು, ಅದನ್ನು ನಾವು ಸುಲಭವಾಗಿ ಕಲಿಯಬಹುದು.

ನಾಡಿನಲ್ಲಿ ಲಾಲಾಜಿಯ ಸ್ಮಾರಕವೊಂದು ಬೇಕೆಂದು ಜನ ಕೇಳಬಹುದು. ಹಾಗೆ ಕೇಳುವುದು ವಿಧಾಯಕ. ಸ್ಮಾರಕಗಳನ್ನೂ ನಾವು ಏರ್ಪಡಿಸಬಹುದು. ಆದರೆ ಲಾಲಾಜೀ ಯಾವುದಕ್ಕಾಗಿ ಬದುಕಿದರೋ ಯಾವುದಕ್ಕಾಗಿಯೆ ಪ್ರಾಣತ್ಯಾಗ ಮಾಡಿದರೋ ಆ ಸ್ವಾತಂತ್ರ್ಯವನ್ನು ಸಾಧಿಸಿಯೇ ತೀರುತ್ತೇವೆಂಬ ಸಂಕಲ್ಪವನ್ನು ಕೈಕೊಳ್ಳದೆ ಯಾವ ಸ್ಮಾರಕವೂ ಸಂಪೂರ್ಣವಾಗದು ಎಂದು ನನ್ನ ಸವಿನಯ ಅಭಿಪ್ರಾಯ. ಅವರ ಕಡೆಯ ಬಯಕೆ ಎಂಥದು ನಮಗೆ ತಿಳಿದುಬಂದಿದ್ದನ್ನು ನೆನೆದುಕೊಳ್ಳೋಣ. ಹಿಂದುಸ್ಥಾನದ ಸ್ವಾತಂತ್ರ್ಯ, ಗೌರವಗಳನ್ನು ಕಾಪಾಡುವ ಕಾರ್ಯವನ್ನು ಯುವಕರ ಪಾಲಿಗೆ ಬಿಟ್ಟುಹೋಗಿದ್ದಾರೆ ಲಾಲಾಜೀ. ತಮ್ಮಲ್ಲಿ ಲಾಲಾಜೀ ಇಟ್ಟುಕೊಂಡಿದ್ದ ನಂಬಿಗೆಗೆ 'ಅರ್ಹರು ಎನಿಸಿಕೊಳ್ಳುವ

ರೇನುಯುವಕರು ? ಅವರ ಹಿಂದೆ ಉಳಿದಿರುವ ಹಿರಿಯರೆನಿಸಿಕೊಂಡ ನಾವು, ಗಂಡಸರು ಹೆಂಗಸರು, ನಮ್ಮ ದೇಶಭಕ್ತರ ಸಾಲಿಗೆ ಸಾಲೇ ಕಂಡ ಕನಸನ್ನು–ಅವರಲ್ಲಿ ಲಾಲಾಜಿಯೂ ಒಬ್ಬ ಶ್ರೇಷ್ಠ ವ್ಯಕ್ತಿ–ನನಸಾಗಿ ಮಾಡಲು ಎಲ್ಲರೂ ಸೇರಿ ಮತ್ತೊಮ್ಮೆ ಹೊಸದಾಗಿ ಸರ್ವಪ್ರಯತ್ನವನ್ನೂ ಮಾಡೋಣವೆ ? ಹಾಗೆ ಮಾಡಿ ಲಾಲಾಜೀ ನಮ್ಮ ನಾಡಿಗರಾಗಿದ್ದುದರ ಗೌರವವನ್ನು ನಾವು ಕಾಯ್ದುಕೊಳ್ಳಬೇಕವೆ ?

ತಾಯಿನಾಡಿನ ಏಳಿಗೆಗಾಗಿ ಮಾಡುತ್ತಿದ್ದ ತಮ್ಮ ಸರ್ವ ಪ್ರಯತ್ನಗಳ ಸಾಧನೆಗೆಂದು ಅವರು ಸ್ಥಾಪಿಸಿದ Servants of Peoples Society “ಲೋಕಸೇವಕ ಸಂಘ”ವನ್ನು ನಾವು ಮರೆಯಲಾದೀತೇ ? ಆ ಸಂಘದ ಬಗ್ಗೆ ಅವರು ಇಟ್ಟುಕೊಂಡಿದ್ದ ಆಸೆ ಬಹಳ ದೊಡ್ಡದು. ಹಿಂದುಸ್ಥಾನದ ಎಲ್ಲ ಪ್ರಾಂತದ ಯುವಕರೂ ಕೆಲವರು ಒಟ್ಟಿಗೆ ಸೇರಿ ಒಂದೇ ಗುರಿಗಾಗಿ ಒಂದೇ ಮನಸಿನಿಂದ ದುಡಿಯಬೇಕೆಂದು ಅವರು ಬಯಸಿದರು. ಆ ಸಂಘ ಇನ್ನೂ ಎಳೆಯದು. ಹುಟ್ಟಿ ಬಹಳ ವರ್ಷವಾಗಿಲ್ಲ. ತಮ್ಮ ಈ ಶ್ರೇಷ್ಠ ಕೃತಿಯನ್ನು ಪೃಥಗೊಳಿಸಲು ಅವರಿಗೆ ಸಾಕಷ್ಟು ಕಾಲ ದೊರೆಯಲಿಲ್ಲ. ಇದು National Trust–ರಾಷ್ಟ್ರದ ಸೊತ್ತು. (ರಾಷ್ಟ್ರವು ಅದನ್ನು ನೋಡಿಕೊಳ್ಳಬೇಕು, ಕಾಪಾಡಬೇಕು) ಅದರ ರಕ್ಷಣೆ, ಪಾಲನೆ ರಾಷ್ಟ್ರದ ಕರ್ತವ್ಯ.

೨೨–೧೧–೨೮

---

## ವಿನೋಬಾ

ಯಾರು ಈ ವಿನೋಬಾ? ನಾನು ಸ್ವದೇಶಕ್ಕೆ ಮರಳಿ ಬಂದಮೇಲೆ, ೧೯೧೬ರಲ್ಲಿ, ಕಾಲೇಜು ಬಿಟ್ಟ ಅಂಡರ್ ಗ್ರ್ಯಾಜುಯೇಟ್. ದೊಡ್ಡ ಸಂಸ್ಕೃತ ಪಂಡಿತ. ಸಾಬರಮತಿ ಆಶ್ರಮ ಸ್ಥಾಪನೆಮಾಡ ಕಾಲಕ್ಕೇ ಆತ ಅದರಲ್ಲಿ ಸೇರಿದ್ದ. ಆಶ್ರಮ ವಾಸಿಗಳಲ್ಲಿ ಮೊದಲಿಗರೊಳಗೊಬ್ಬ. ಇನ್ನೂ ಹೆಚ್ಚಿಗೆ ಅಧ್ಯಯನ ಮಾಡಬೇಕೆಂದು ಒಂದು ವರ್ಷ ರಜ ತೆಗೆದುಕೊಂಡು ಸಂಸ್ಕೃತಾಭ್ಯಾಸ ಮಾಡಿದ. ಮರಳಿ ಒಂದು ವರ್ಷದ ತರುವಾಯ ಸುಮಾರು ಅದೇ ಹೊತ್ತಿಗೆ ಸರಿಯಾಗಿ, ಎಂದರೆ ರಜ ತೆಗೆದುಕೊಂಡು ಆತ ಆಶ್ರಮದಿಂದ ಪಯಣ ಬೆಳೆಸಿದ ಗಂಟೆಗೆ ಸರಿಯಾಗಿ, ಸದ್ದಿಲ್ಲದೆ ಆಶ್ರಮದೊಳಗೆ ಕಾಲಿಟ್ಟ. ಆದಿನ ಆತ ಬರುವ ದಿನ ಎಂಬುದು ನನಗೆ ಮರೆತುಹೋಗಿತ್ತು. ಆಶ್ರಮದಲ್ಲಿ ಶೌಚಕೂಪವನ್ನು ಬಳಿಯುವುದರಿಂದ ಮೊದಲು ಮಾಡಿಕೊಂಡು ಅಡಿಗೆ ಮಾಡುವುದರವರೆಗೆ ಎಲ್ಲ ಕ್ಷುದ್ರಕಾರ್ಯಗಳನ್ನು ವಿನೋಬಾ ಮಾಡಿದಾನೆ. ಆತನ ನೆನಪಿನ ಬಲ ಅದ್ಭುತವಾದುದು. ಸ್ವಭಾವತಃ ವಿದ್ಯಾಸಕ್ತ. ಆದರೂ ನೂಲಲಿಕ್ಕೆ ತನ್ನ ವೇಳೆಯಲ್ಲಿ ಬಹಳ ಭಾಗ ಉಪಯೋಗಿಸಿದಾನೆ ಅವನ ಹಾಗೆ ನೂಲುವುದರಲ್ಲಿ ನಿಪುಣರಾದವರು ಕಡಮೆ. ಅವನಿಗೆ ಎಲ್ಲರೂ ನೂಲಬೇಕು ಎಂಬ ತತ್ವದಲ್ಲಿ ನಂಬಿಗೆಯಿದೆ. ಆದರಿಂದ ಹಳ್ಳಿಗಳ ಬಡತನ ಕಳೆದು, ಆ ನಿರ್ಜೀವ ವಸ್ತುಗಳಲ್ಲಿ

ಕಳೆ ತುಂಬಿಬಂದೀತು ಎಂದು ಅವನ ಆಸೆ. ವಿನೋಬಾ ಹುಟ್ಟು ಶಿಕ್ಷಕ. ಕೈಗಾರಿಕೆಯ ದ್ವಾರಾ ಶಿಕ್ಷಣ ಕೊಡುವ ಯೋಜನೆಯನ್ನು ರೂಪುಗೊಳಿಸುವುದಕ್ಕೆ ಗಾಂಧೀಜಿಗೆ ಬಹಳ ಹೆಚ್ಚಾಗಿ ನೆರವಾಗಿದ್ದಾನೆ. ನೂಲುವುದನ್ನು ಕೈಗಾರಿಕೆಯಾಗಿ ತಿಳಿದುಕೊಂಡು ಒಂದು ಪರ್ಯ ಪುಸ್ತಕವನ್ನೇ ಬರೆದಿದ್ದಾನೆ ವಿನೋಬಾ. ಅದರ ವಿಚಾರ ಸರಣಿ ತೀರಾ ಸ್ವತಂತ್ರ, ತುಂಬಾ ಹೊಸದು. ನೂಲುವುದನ್ನು ನೋಡಿ ಅಣಕವಾಡುತ್ತಿದ್ದವರಿಗೆಲ್ಲ ಮೂಲಶಿಕ್ಷಣಕ್ಕೆ [ಬೇಸಿಕ್ ಶಿಕ್ಷಣ] ಒಳ್ಳೆ ಉಪಯೋಗಕರವಾದ ಕೈಗಾರಿಕೆಯಲ್ಲಿ ಅತ್ಯುತ್ತಮವಾದುದಿದೇ ಎಂಬುದು ಮನಮುಟ್ಟುವಂತೆ ಮಾಡಿದ್ದಾನೆ. ಕದರಿನಿಂದ [ತಕಲಿ] ನೂಲು ತೆಗೆಯುವುದರಲ್ಲಿ ದೊಡ್ಡ ಕ್ರಾಂತಿ ಮಾಡಿ ಅದರಲ್ಲಿ ಅಡಕವಾಗಿದ್ದ ಸಾಮರ್ಥ್ಯವನ್ನು ಬಯಲಿಗೆಳೆದಿದ್ದಾನೆ. ನೂಲುವುದರಲ್ಲಿ ಅವನಷ್ಟು ಪೂರ್ಣ ಸಮರ್ಥರು ಇಡೀ ಹಿಂದೂಸ್ಥಾನದಲ್ಲಿಯೂ ಇಲ್ಲ. ಅಂಥ ಅದ್ವಿತೀಯ.

ತನ್ನ ಹೃದಯದಿಂದ ಅಸ್ಪೃಶ್ಯತಾ ಪಂಕವನ್ನು ಎಳ್ಳಷ್ಟೂ ಉಳಿಯದಂತೆ ತೊಳೆದಿದ್ದಾನೆ. ಜಾತಿಜಾತಿಗಳ ಸ್ನೇಹ ಐಕ್ಯಗಳಲ್ಲಿ ನನಗಿದ್ದಷ್ಟೇ ಶ್ರದ್ಧೆ ಅವನಿಗೆ ಇದೆ ಎನ್ನುವ ಉತ್ತಮೋತ್ತಮ ಭಾವಗಳನ್ನು ತಿಳಿದುಕೊಳ್ಳಬೇಕೆಂದು ಕುರಾನಿನ ಮೂಲ ಗ್ರಂಥವನ್ನೋದಲು ಒಂದು ವರ್ಷ ಮೀಸಲಿಟ್ಟಿದ್ದ. ಅದಕ್ಕಾಗಿ ಅರಬೀ ಭಾಷೆಯನ್ನು ಕಲಿತ. ತನ್ನ ನೆರೆಹೊರೆಯ ಮುಸ್ಲಿಮರ ಸಂಗಡ ಸರಸ ಸೌಹಾರ್ದವಿಡಲು ಈ ಭಾಷಾ ಭ್ಯಾಸ ಅವನಿಗೆ ಅಗತ್ಯವಾಯಿತು.

ಆತ ಹೇಳಿದರೆ ಸಾಕು, ಎಂಥ ತ್ಯಾಗವನ್ನಾದರೂ ಮಾಡಬಲ್ಲ ಶಿಷ್ಯರೂ ಸಂಗಾತಿಗಳೂ ಅನೇಕರಿದ್ದಾರೆ ವಿನೋಬಾಗೆ. ಕುಷ್ಠರೋಗಿಗಳ ಆರೈಕೆಗಾಗಿಯೆ ತನ್ನ ಬಾಳನ್ನು ಮುಡುಪಾಗಿ ಇಟ್ಟ ತರುಣನೊಬ್ಬನನ್ನು ನನಗೆ ಕೊಟ್ಟದ್ದು ವಿನೋಬಾ. ಈ ತರುಣನಿಗೆ ವೈದ್ಯಜ್ಞಾನವಿಲ್ಲದಿದ್ದರೂ ಏಕಾಗ್ರವಾದ ಶ್ರದ್ಧೆಯಿಂದ ಕುಷ್ಠರೋಗಿಗಳ ಆರೈಕೆಯ ವಿಜ್ಞಾನವನ್ನು ಚೆನ್ನಾಗಿ ಕಲಿತು, ಅನೇಕ ಆರೋಗ್ಯ ಮಂದಿರಗಳನ್ನು ನಡೆಸುತ್ತಿದ್ದಾನೆ. ಅವನ ಕೃಷಿಯಿಂದ ನೂರಾರು ಜನ ರೋಗಿಗಳು ಗುಣಹೊಂದಿದ್ದಾರೆ. ಅವನೀಗ ಕುಷ್ಠರೋಗ ಚಿಕಿತ್ಸೆಯ ವಿಷಯವಾಗಿ ಮರಾಠಿಯಲ್ಲಿ ಒಂದು ಕೈಪಿಡಿಯನ್ನು ಬರೆದಿದ್ದಾನೆ. ವಿನೋಬಾ ವರ್ಧಾದ ಮಹಿಳಾಶ್ರಮಕ್ಕೆ ಬಹಳ ಕಾಲ ಹೊಣೆಗಾರನಾಗಿದ್ದ. ಆತನ ದರಿದ್ರನಾರಾಯಣ ಸೇವಾಸಕ್ತಿ ಆತನನ್ನು ಮೊದಲು ವರ್ಧಾದ ಸನಿಯದಲ್ಲಿರುವ ಹಳ್ಳಿಯೊಂದಕ್ಕೆ ಎಳೆಯಿತು. ಆತ ಇನ್ನೂ ದೂರ ಹೋಗಿ, ವರ್ಧಾಕ್ಕೆ ಐದು ಮೈಲಿ ದೂರದಲ್ಲಿ ಪೌನಾರ ಎಂಬ ಹಳ್ಳಿಯಲ್ಲಿ ನೆಲೆಸಿದ್ದಾನೆ. ಆತ ತಯಾರುಮಾಡಿದ ಶಿಷ್ಯರ ಮೂಲಕ ಆ ಹಳ್ಳಿಯ ಜನರ ಗುರುತು ಪರಿಚಯ ಅವನಿಗೆ ಆಗಿದೆ.

ಹಿಂದುಸ್ಥಾನಕ್ಕೆ ರಾಜಕೀಯ ಸ್ವಾತಂತ್ರ್ಯ ಅತ್ಯಗತ್ಯ ಎಂಬುದು ಅವನ ಮನಸ್ಸತ್ವ. ಇತಿಹಾಸವನ್ನು ಸರಿಯಾಗಿ ಬಲ್ಲವ. ಆದರೆ, ಖಾದಿಯ ಮಧ್ಯಬಿಂದು

ವಾದ ರಚನಾತ್ಮಕ ಕಾರ್ಯಕ್ರಮದ ಹೊರತು ಹಳ್ಳಿಗರಿಗೆ ನಿಜವಾದ ಸ್ವಾತಂತ್ರ್ಯ ಸಿಗದು ಎಂದು ಅವನ ಅಭಿಪ್ರಾಯ. ಅಹಿಂಸೆಗೆ ರಾಟಿಯೇ ಸುಯೋಗ್ಯವಾದ ಬಾಹ್ಯಸಂಕೇತವೆಂದು ಅವನು ನಂಬಿದಾನೆ. ರಾಟಿಯಂತೂ ಅವನ ಬಾಳಿನಲ್ಲಿ ಒಂದು ಅಂಗದಂತೆ ಬೆರತು ಹೋಗಿದೆ. ಹಿಂದಿನ ಸತ್ಯಾಗ್ರಹ ಸಮರಗಳಲ್ಲಿ ದುಡಿದು ಪಾಲುಗೊಂಡಿದಾನೆ. ರಾಜಕೀಯರಂಗದಲ್ಲಿ ಎಂದೂ ಮುಂದೆ ಬಂದು ನಿಂತವನಲ್ಲ. ಜನ ಕಿಕ್ಕಿರಿದು ತುಂಬಿದ ರಾಜಕೀಯರಂಗಕ್ಕಿಂತ ಸದ್ದಿಲ್ಲದ ರಚನಾತ್ಮಕ ಕಾರ್ಯವೇ ಸವಿನಯ ಶಾಸನೋಲ್ಲಂಘನಕ್ಕೆ ಹೆಚ್ಚು ಉಪಯೋಗಕಾರಿ ಎಂದು ತಿಳಿದ ಕೆಲಸಗಾರರಲ್ಲಿ ಅವನೂ ಒಬ್ಬ. ಅಷ್ಟೇ ಅಲ್ಲ; ರಚನಾತ್ಮಕ ಕೆಲಸದಲ್ಲಿ ನಂಬಿಗೆ ಇಲ್ಲದೆ, ಅದನ್ನು ಮಾಡದೆ, ಅಹಿಂಸಾತ್ಮಕ ಪ್ರತಿರೋಧವು ಅಸಾಧ್ಯವೆಂದು ಅವನಿಗೆ ಸಂಪೂರ್ಣವಾಗಿ ನಂಬಿಗೆಯಿದೆ.

೧೫--೧೦--೪೦.

# ಕಿ ಶೋ ರಿ ಲಾ ಲ

ಕಿಶೋರಿಲಾಲ ಮಶ್ರೂವಾಲಾರಂಥ ಕೆಲಸಗಾರರು ನಮ್ಮಲ್ಲಿ ಅತಿ ವಿರಳ, ಅಪರೂಪ. ಬೇಸರ ಬಳಲಿಕೆಗಳನ್ನು ಅರಿಯದವನು ಆತ. ಹೀಗಿರುವುದೂ ಒಂದು ತಪ್ಪು ಎನ್ನುವಷ್ಟು ಪ್ರಾಮಾಣಿಕತನ ಆತನದು. ಆತನ ಎಚ್ಚರಗಣ್ಣಿಗೆ ಬೀಳದ ಸೂಕ್ಷ್ಮವಿಲ್ಲ. ಗುಜರಾತಿಯಲ್ಲಿ ಚಲೋ ಜನಪ್ರಿಯ ಲೇಖಕ, ವೇದಾಂತಿ. ಗುಜರಾತಿಯಲ್ಲಿದ್ದಷ್ಟೇ ಮರಾಠಿಯಲ್ಲೂ ಪಾಂಡಿತ್ಯ. ಜಾತಿ ಮತ ಪ್ರಾಂತ, ಯಾವ ಅಭಿಮಾನವೂ ಇಲ್ಲ; ದುರಭಿಮಾನವೂ ಇಲ್ಲ ಆತನಿಗೆ. ಒಳ್ಳೇ ಸ್ವತಂತ್ರ ವಿಚಾರಶಾಲಿ. ಆತ ರಾಜಕಾರಣಿಯಲ್ಲ. ಹುಟ್ಟು ಸುಧಾರಕ. ಎಲ್ಲ ಧರ್ಮಗಳ ಅಭ್ಯಾಸಿ. ಆತನಲ್ಲಿ ಎಳ್ಳಷ್ಟಾದರೂ ಮೂಢ ಮತಾಭಿಮಾನದ ಹರವಿಲ್ಲ. ಆತನಿಗೆ ಜವಾಬದಾರಿ, ಕೀರ್ತಿ ಎರಡೂ ಸೇರುವುದಿಲ್ಲ. ಆದರೂ ಒಮ್ಮೆ ಜವಾಬದಾರಿಯನ್ನು ಒಪ್ಪಿಕೊಂಡರಾಯಿತು, ಆತನ ಹಾಗೆ ಸಾಂಗಗೊಳಿಸುವವರು ಯಾರೂ ಇಲ್ಲ. ಗಾಂಧೀ ಸೇವಾ ಸಂಘಕ್ಕೆ ಅಧ್ಯಕ್ಷನಾಗಲು ಆತನನ್ನು ಒಪ್ಪಿಸಬೇಕಾದರೆ ಬಹಳ ಕಷ್ಟವಾಯಿತು. ಆತನ ಏಕಾಗ್ರ ಶ್ರದ್ಧೆಯೂ ಸತತ ಪರಿಶ್ರಮವೂ ಸಂಘಕ್ಕೆ ಪ್ರಾಮುಖ್ಯತೆಯನ್ನು ತಂದವು. ಸಂಘದ ಉಪಯುಕ್ತತೆಗೂ ಅದೇ ಕಾರಣ. ತನ್ನ ಆರೋಗ್ಯ ಕೆಡುವುದನ್ನೂ ಲೆಕ್ಕವಿಡದೆ (ಸಾರ್ವಜನಿಕ ಕೆಲಸಗಾರರಲ್ಲಿ ಇದೇನು ಯೋಗ್ಯ ಲಕ್ಷಣವೆಂದು ನಾನು ತಿಳಿದಿಲ್ಲ; ಅದು ಅವಗುಣ) ಸದಾ ಕಾಲದಲ್ಲಿಯೂ ಸಾಧಕರಿಗೆ ಸುಲಭನಾಗಿದ್ದ. ಸಂಘಕ್ಕೆ ಕಿಶೋರಿಲಾಲನ ಹೊರತು ಅನ್ಯಗತಿಯಿಲ್ಲದಂತಾ[illegible]? ಎಷ್ಟೋ ಕಷ್ಟಪಟ್ಟು ಎಷ್ಟೋ [illegible]

ರವಾಡಿ ಸಂಘಕ್ಕೊಂದು ನಿಯಮಾವಲಿಯನ್ನು ಸಿದ್ಧಮಾಡಿದ. ಅಂಥ ಯಾವ ಸಂಸ್ಥೆಗಾದರೂ ಅದು ಮಾದರಿಯಾಗಿದೆ.

ಕಿಶೋರಿಲಾಲನನ್ನು ಹೊಗಳಬೇಕೆಂದು ನಾನೀ ವಿವರಗಳನ್ನು ಹೇಳುತ್ತಿಲ್ಲ. ನನ್ನ ತೃಪ್ತಿಗಾಗಿ ಹೇಳುತ್ತಿದೇನೆ. ಸಂಘಕ್ಕೆ ಬಲ ಬರಲೆಂದು ಕಿಶೋರಿಲಾಲ ತನ್ನನ್ನು ತಾನೇ ತೇದುಕೊಂಡಿದಾನೆ. ಅಪಸಂಥ ಕೆಲಸಗಾರರ ಸಾಮರ್ಥ್ಯ, ತ್ಯಾಗಗಳಿಗೆ ತಕ್ಕಂತೆ ಸಂಘ ರೂಪುಗೊಳ್ಳಬೇಡವೆ ?

೨೬--೨--೪೦.

# ನಿ ಜ ವಾ ದ ದೀ ನ ಬಂ ಧು

ಅಂಡ್ರೂಸರ ಮರಣದಿಂದ ಕೇವಲ ಇಂಗ್ಲೆಂಡು, ಹಿಂದುಸ್ಥಾನ ಮಾತ್ರವೇ ಅಲ್ಲ, ಇಡೀ ಮಾನವ ಜಾತಿಯೇ ಒಬ್ಬ ಯೋಗ್ಯಪುತ್ರನನ್ನು, ಯೋಗ್ಯ ಸೇವಕನನ್ನು ಕಳೆದುಕೊಂಡಿದೆ. ಆದರೆ ಅವರ ಮರಣ ಭವದ ದುಃಖವನ್ನು ಹಿಂಗಿಸಿದ ಮುಕ್ತಿ, ಈ ಪ್ರಪಂಚದಲ್ಲಿ ಅವರ ಅವತಾರ ಕಾರ್ಯದ ಭರತವಾಕ್ಯ. ಅವರ ಸಾಂಗತ್ಯದಿಂದಲೂ ಸಾಹಿತ್ಯದಿಂದಲೂ ಉನ್ನತಿ ಪಡೆದ ಸಾವಿರಾರು ಜನರ ಬಾಳಿನಲ್ಲಿ ಅವರ ಬಾಳು ಬದುಕಿಕೊಂಡಿದೆ. ಚಾರ್ಲಿ ಅಂಡ್ರೂಸರು ಇಂಗ್ಲಿಷು ಜನರಲ್ಲಿ ಒಬ್ಬ ಉತ್ತಮೋತ್ತಮ ವ್ಯಕ್ತಿ ಅನಿಸುತಿದೆ ನನಗೆ. ಅವರು ಇಂಗ್ಲೆಂಡಿಗೆ ಅಂಥ ಸುಪುತ್ರರಾಗಿದ್ದುದರಿಂದಲೇ ಹಿಂದುಸ್ಥಾನಕ್ಕೂ ಪುತ್ರರಾದರು. ಅವರು ಹಾಗೆ ಮಾಡಿದುದು ಕೂಡ ಜಗದ್ಧಿತಕ್ಕಾಗಿ, ತಮ್ಮ ಪ್ರಭು, ಧಣಿ ಏಸುವಿಗಾಗಿ. ಸಿ. ಎಫ್. ಅಂಡ್ರೂಸರಿಗಿಂತ ಒಳ್ಳೆಯ ಮನುಷ್ಯರಾಗಲಿ ಚಲೋ ಕ್ರಿಸ್ತಾನರಾಗಲಿ ನನಗೆ ಕಂಡಿಲ್ಲ. ಹಿಂದುಸ್ತಾನ ಅವರಿಗೆ ದೀನಬಂಧು ಎಂಬ ಬಿರುದನ್ನು ಕೊಟ್ಟಿದೆ. ಎಷ್ಟು ಚೆನ್ನಾಗಿ ಒಪ್ಪಿತು ಅವರಿಗೆ ಆ ಬಿರುದು ! ಅವರು ನಿಜವಾಗಿ ದಲಿತರ ಬಂಧು. ಈ ಮಾತಿನಲ್ಲಿ ಅವರಿಗೆ ಆ ದೇಶ ಈ ದೇಶವೆಂಬ ಭಾವನೆ ಇರಲಿಲ್ಲ; ಎಲ್ಲ ದೇಶಗಳ ಬಡಬಗ್ಗರಿಗೂ ನಿಜವಾದ ಬಂಧು.

ಚಾರ್ಲಿ ಅಂಡ್ರೂಸರು ನನಗೆ ಗೊತ್ತಿದ್ದ ಹಾಗೆ ಯಾರಿಗೂ ಗೊತ್ತಿರಲಾರದು. ಗುರುದೇವರು ಅವರಿಗೆ ಪರಮಗುರುವಾಗಿದ್ದರು. ನಾವಿಬ್ಬರೂ ದಕ್ಷಿಣ ಆಫ್ರಿಕಾದಲ್ಲಿ ಮೊದಲು ಕಲೆತಾಗ ಅಣ್ಣತಮ್ಮಂದಿರಂತೆ ಬೆರೆತೆವು. ಕೊನೆಯತನಕ ಹಾಗೆಯೇ ಇದ್ದೆವು. ನಮ್ಮಿಬ್ಬರ ನಡುವೆ ಸಂಕೋಚವೆ ಇರಲಿಲ್ಲ. ಒಬ್ಬ ಇಂಗ್ಲಿಷರವ, ಒಬ್ಬ ಹಿಂದೂಸ್ಥಾನಿಯ ನಡುವಿನ ಗೆಳೆತನವಲ್ಲ ಅದು. ಅದು ಸತ್ಯಶೋಧಕರಿಬ್ಬರ, ಸೇವಕರಿಬ್ಬರ ಗೆಳೆತನ. ಅಂಡ್ರೂಸರ ನೆನಪು ನನಗೆ ಪವಿತ್ರ ಸ್ಮೃತಿ. ನಾನೀಗ ಅದನ್ನು ಹೇಳುತ್ತಿಲ್ಲ. ಈ ಇಂಗ್ಲೆಂಡು-ಹಿಂದುಸ್ಥಾನಗಳೆರಡರ ಸೇವಕನ ಸಾವಿನ ನೆನಪು

ಇನ್ನೂ ಹೊಸದಾಗಿರುವಾಗಲೇ, ನಮ್ಮಿಬ್ಬರಿಗೂ ಆಂಡ್ರೂಸರು ಬಿಟ್ಟು ಹೋಗಿರುವ ಸೊತ್ತಿನ ಬಗೆಗೆ ಇಂಗ್ಲಿಷರೂ ನಾವೂ ಇಬ್ಬರೂ ಯೋಚಿಸಬೇಕೆಂದು ನನ್ನ ಬಯಕೆ. ಉತ್ತಮ ಆಂಗ್ಲೇಯನಿಗಿದ್ದಷ್ಟೆ ಇಂಗ್ಲೆಂಡಿನ ಅಭಿಮಾನ ಅವರಿಗಿತ್ತು. ಅದೇ ರೀತಿ ಉತ್ತಮ ಭಾರತೀಯನಿಗಿದ್ದಷ್ಟೆ ಭಾರತ ಪ್ರೇಮವೂ ಅವರಿಗಿತ್ತು. ಮತ್ತೆ ಏಳಲಾರ ದಂತೆ ಮಲಗಿದ ಆ ಹಾಸಿಗೆಯಲ್ಲಿದ್ದಾಗ 'ಮೋಹನ್, ಸ್ವರಾಜ್ಯ ಬಂತು, ಬರುತ್ತಾ ಇದೆ' ಎಂದರು. ಇಂಗ್ಲೀಷರೂ ಭಾರತೀಯರೂ ಮನಸು ಮಾಡಿದರೆ ಸ್ವರಾಜ್ಯ ಬರುವಹಾಗೆ ಮಾಡಲೂ ಬಲ್ಲರು. ಈಗ ರಾಜ್ಯ ಆಳುತ್ತಿರುವ ಜನರಿಗೂ, ಉಳಿದ ಮಾತುಬಾರಿ ಜನರಿಗೂ (ಇಂಗ್ಲಿಷರು) ಆಂಡ್ರೂಸರೇನು ಅಪರಿಚಿತರಲ್ಲ. ರಾಜಕೀಯ ಜ್ಞಾನವಿದ್ದ ಪ್ರತಿಯೊಬ್ಬ ಭಾರತೀಯನಿಗೂ ಆಂಡ್ರೂಸರು ಗೊತ್ತು. ತತ್ಕಾಲಕ್ಕೆ ಇಂಗ್ಲಿಷರ ತಪ್ಪನ್ನು ನಾನೆಣಿಸುವುದಿಲ್ಲ. ಅವೆಲ್ಲ ಏನಿದ್ದರೂ ಮರೆತು ಹೋಗುತ್ತವೆ. ಆದರೆ ಇಂಗ್ಲೆಂಡೂ ಹಿಂದುಸ್ಥಾನವೂ ಇರುವ ತನಕ ಆಂಡ್ರೂಸರ ವೀರಕೃತ್ಯಗಳಾವುದನ್ನೂ ಮರೆಯುವ ಹಾಗಿಲ್ಲ. ನಮಗೆ ನಿಜವಾಗಿ ಆಂಡ್ರೂಸರಲ್ಲಿ ಪ್ರೀತಿಯಿದ್ದರೆ ಅವರು ಯಾವ ಜನರ ಉತ್ತಮ ನಿದರ್ಶನವಾಗಿದ್ದರೋ ಅಂಥ ಇಂಗ್ಲಿಷು ಜನರನ್ನು ದ್ವೇಷಿಸಬಾರದು. ಉತ್ತಮರಾದ ಆಂಗ್ಲೇಯರೂ ಉತ್ತಮರಾದ ಭಾರತೀಯರೂ ಕಲೆತು, ಇಬ್ಬರಿಗೂ ಸಮಾಧಾನವಾಗುವಂಥ ಏನಾದರೊಂದು ಸೂತ್ರವೊಂದನ್ನು ಹೆಣೆಯಬೇಕು. ಹಾಗೆ ಮಾಡುವವರೆಗೆ ಅಗಲದಂತೆ ಪ್ರಯತ್ನ ಮಾಡಬೇಕು. ಆ ಪ್ರಯತ್ನಕ್ಕೆ ತಕ್ಕದ್ದಾಗಿದೆ ಆಂಡ್ರೂಸರ ಪುಣ್ಯಸಂಪತ್ತು. ಹಿಂದುಸ್ತಾನಕ್ಕೆ ಜಗತ್ತಿನ ರಾಷ್ಟ್ರಗಳ ನಡುವೆ ಒಂದು ಸ್ವತಂತ್ರ ಸ್ಥಾನ ಸಿಗಲಿ ಎಂದು ಅವರು ಮಾಡಿದ ಅಸಂಖ್ಯವಾದ ಒಲವಿನ ಕೆಲಸಗಳನ್ನೂ ಅವರ ದಿವ್ಯ ಮುಖವನ್ನೂ ನೆನೆದರೆ ಇದೇ ಭಾವವೇ ಬಲವಾಗಿ ಮೂಡಿ ಬರುತ್ತಿದೆ.

೮—೪—೪೧.

## ಹಕೀಂ ಸಾಹೆಬ ಅಜಮುಲಖಾನ್

ಹಕೀಂ ಸಾಹೆಬ ಅಜಮುಲ ಖಾನರ ವಿಯೋಗದಿಂದ ನಮ್ಮ ತಾಯಿನಾಡು ಒಬ್ಬ ನಿಜವಾದ ಸೇವಕನನ್ನು ಕಳೆದುಕೊಂಡಿತು. ಹಕೀಂ ಸಾಹೇಬರದು ಬಹುಮುಖವಾದ ವ್ಯಕ್ತಿತ್ವ. ಬಡವರಲ್ಲಿಯೂ, ಸಿರಿವಂತರಲ್ಲಿಯೂ ಒಂದೇ ಸಮನಾಗಿ ಸೇವೆ ಮಾಡಿದ ಬರಿಯ ಭಿಷಗಾಚಾರ್ಯರು ಮಾತ್ರವಲ್ಲ ಅವರು; ಅಸ್ಥಾನಿಕರಾದ ದೇಶಭಕ್ತರು. ಅವರ ಕಾಲವೆಲ್ಲ ಶ್ರೀಮಂತರ ನಡುವೆ, ರಾಜರ ನಡುವೆ ಕಳೆಯುತ್ತಿತ್ತು. ಆದರೂ ಅವರು ಹದಿನಾರಾಣೆ ಪ್ರಜಾಪ್ರಭುತ್ವವಾದಿ. ಹಕೀಂ ಸಾಹೇಬರು ಶ್ರೇಷ್ಠ ಮುಸಲ್ಮಾನರು. ಅಷ್ಟೇ ಅಲ್ಲ, ಶ್ರೇಷ್ಠ ಭಾರತೀಯರೂ ಹೌದು. ಹಿಂದೂಗಳಾಗಲಿ ಮುಸಲ್ಮಾನರಾಗಲಿ, ಇಬ್ಬರಲ್ಲಿಯೂ ಅವರಿಗೆ ಸಮಾನಪ್ರೇಮ. ಅದರಲ್ಲೇ 'ಹಿಂದೂ ಮುಸ

ಲ್ಮಾನರಿಂದಲೂ ಅವರಿಗೆ ಸ್ಥಾನ ಗೌರವ ಪ್ರೇಮಗಳು ದೊರೆತಿದ್ದವು. ಹಿಂದೂ ಮುಸ್ಲಿಮ ಐಕ್ಯವೇ ಅವರ ಜೀವನದ ಉಸಿರು. ನಮ್ಮ ಅಂತಃಕಲಹಗಳಿಂದ ಅವರ ಬಾಳಿನ ಕೊನೆಯ ದಿನಗಳಲ್ಲಿ ಹುಳಿ ಹಿಂಡಿದಂತಾಗಿತ್ತು. ಹಾಗಾದರೂ ಅವರಿಗೆ ತಮ್ಮ ನಾಡಿನಲ್ಲಾಗಲಿ ತಮ್ಮ ಜನರಲ್ಲಾಗಲಿ ನಂಬಿಗೆ ಕೆಡಲಿಲ್ಲ. ಕಟ್ಟಕಡೆಗೆ ಎರಡೂ ಸಮಾಜ ಏಕವಾಗಿಯೇ ತೀರಬೇಕೆಂದು ಅವರ ನಂಬಿಗೆ. ಅಂಥ ಅಚಲವಾದ ಶ್ರದ್ಧೆಯಿದ್ದುದರಿಂದಲೇ ಅವರು ಐಕ್ಯಕ್ಕಾಗಿ ಪ್ರಯತ್ನ ಮಾಡುವುದನ್ನು ಎಂದೂ ಬಿಡಲಿಲ್ಲ. ಕೊಂಚ ನಿಧಾನವಾಗಿಯೇ ಆದರೂ, ಕಡೆಗೆ ತಿಬ್ಬಿಯಾ ಕಾಲೇಜಿಗಾಗಬಹುದಾದ ನಷ್ಟವನ್ನೂ ಲೆಕ್ಕಿಸದೆ ಅಸಹಕಾರಿಗಳ ಗುಂಪಿಗೆ ಸೇರಿದರು. ತಿಬ್ಬಿಯಾ ಕಾಲೇಜು ಅವರ ಶ್ರೇಷ್ಠರಚನೆ. ಆ ಕಾಲೇಜನ್ನು ಅವರು ಎಷ್ಟು ಪ್ರೀತಿಸುತ್ತಿದ್ದರೋ ಅವರ ಅಂತರಂಗ ಪರಿಚಯ ಭಾಗ್ಯವಿದ್ದವರಿಗೆ ಮಾತ್ರವೇ ಗೊತ್ತು. ಹಕೀಂಜಿಯ ಸಾವು ನನ್ನ ಪಾಲಿಗೆ ವಿವೇಕಶಾಲಿಯೂ, ದೃಢಚಿತ್ತನೂ ಆದ ಸಂಗಾತಿಯೊಬ್ಬನನ್ನು ಇಲ್ಲದಂತೆ ಮಾಡಿತು. ಇಷ್ಟೇ ಅಲ್ಲ, ಆಪತ್ಕಾಲದಲ್ಲಿ, ನೆಚ್ಚಬಹುದಾದ ಗೆಳೆಯನೊಬ್ಬ ಇಲ್ಲವಾದ. ಹಿಂದೂ ಮುಸ್ಲಿಂ ಏಕತೆಯ ವಿಷಯದಲ್ಲಂತೂ ಹಕೀಂಜೀ ನನಗೆ ಸದಾ ಮಾರ್ಗದರ್ಶಿ. ಅವರ ಮಾನವಸ್ವಭಾವ ಪರಿಚಯ, ಸೂಕ್ಷ್ಮ ಪರಿಶೀಲನಾಶಕ್ತಿ, ಅವರ ವಿವೇಕ ವಿಲಕ್ಷಣವಾದವು ಅದರ ಬಲದಿಂದ ಅವರು ಏನೇ ತೀರ್ಮಾನಮಾಡಲಿ, ಸಾಧಾರಣವಾಗಿ ಅವು ಸರಿಯಾಗಿಯೇ ಇರುತ್ತಿದ್ದವು. ಅವರಂಥ ಜನ ಎಂದಿಗೂ ಸಾಯಲಾರರು. ಅವರ ಮೈಯ ವಣ್ಣು ನಮ್ಮ ನಡುವೆ ಇರದಿದ್ದರೂ ಅವರ ಜೀವ, ಅವರ ಆತ್ಮ ಯಾವಾಗಲೂ ನಮ್ಮ ನಡುವೆ ಇದ್ದೇ ಇದ್ದೀತು; ನಮ್ಮ ನಮ್ಮ ಕರ್ತವ್ಯಗಳನ್ನು ನಾವು ಸರಿಯಾಗಿ ಮಾಡಬೇಕೆಂದು ಸದಾ ನಮಗೆ ಉಸುರುತ್ತಲೇ ಇದ್ದೀತು. ಅವರ ನೆನಪಿಗಾಗಿ ನಾವು ಬೇಕಾದಷ್ಟು ಸ್ಮಾರಕಗಳನ್ನು ನಿರ್ಮಿಸಬಹುದು. ಹಿಂದೂ ಮುಸ್ಲಿಮರ ಐಕ್ಯವನ್ನು ಸಾಧಿಸದಿದ್ದರೆ ಅವರ ನೆನಪಿಗಾಗಿ ಯಾವ ಸ್ಮಾರಕವನ್ನು ನಿರ್ಮಿಸಿದರೇನು? ಅದು ಸಂಪೂರ್ಣವಾಗಲಾರದು. ಅವರು ಬದುಕಿದ್ದಾಗ ನಾವು ಮಾಡಲಾರದೆ ಹೋದುದನ್ನು ಅವರ ಸಾವಿನಿಂದಾದರೂ ಮಾಡುವಂತಾಗಲಿ; ದೇವರು ನಮಗೆ ಆ ರೀತಿ ಬುದ್ಧಿ ಕೊಡಲಿ.

ಹಕೀಂಜೀ ಬರಿಯ ಕನಸುಗಾರರಲ್ಲ. ತಾವು ಕಂಡ ಕನಸಿಗೆ ರೂಪು ಕೊಡುವ ಶ್ರದ್ಧೆ, ಸಾಹಸ ಉಳ್ಳವರು. 'ತಿಬ್ಬಿಯಾ ಕಾಲೇಜಿ' ನ ಮೂಲಕ ತಮ್ಮ ಧನ್ವಂತರಿ ವಿದ್ಯೆಯ ಕನಸಿಗೆ ಮೈಕೊಟ್ಟಂತೆ ತಮ್ಮ ರಾಜಕೀಯ ಸ್ವಪ್ನವನ್ನು ಕೆಲಮಟ್ಟಿಗಾದರೂ ರೂಪಿಸಲೆಂದು 'ಜಾಮಿಯ ಮಿಲಿಯಾ' ವನ್ನು ಕಟ್ಟಿದರು. ಈ ರಾಷ್ಟ್ರೀಯ ಸಂಸ್ಥೆ ಮುರಿದು, ಆ ಪ್ರಯತ್ನ ಅಳಿಸಿಯೇ ಹೋಗುವ ಸಂದರ್ಭ ಬಂದಿತ್ತು. ಆ ಸಮಯದಲ್ಲಿ ಹಕೀಂಜೀ ಒಬ್ಬರೇ; ಅಸಹಾಯರು. ಆದರೂ ಬಿಡದೆ ಅದನ್ನು ಅಲಿಗಡದಿಂದ ದೆಹಲಿಗೆ ಸಾಗಿಸಿದರು. ಅಲ್ಲಿಂದಿಲ್ಲಿಗೆ ಬಂದದ್ದರಿಂದ ಅವರ ಕಷ್ಟ ಮತ್ತಷ್ಟು ಬೆಳೆಯಿತು.

ಅಲ್ಲಿಂದ ಮುಂದೆಯಂತೂ ಕಾಲೇಜಿನ ಆರ್ಥಿಕ ವ್ಯವಸ್ಥೆಗೆ ತಾವೇ ಪೂರಾ ಹೊಣೆಗಾರರಾದರು. ತಾವೇ ಕೈಯಿಂದಲಾದರೂ ಕೊಡಬೇಕು, ಇಲ್ಲವೆ ತಮ್ಮ ಗೆಳೆಯರಿಂದ ಚಂದಾ ಎತ್ತಿ ಕೊಡಬೇಕು, ಹೀಗಾಯಿತು. ಸದ್ಯ ಆ ಸಂಸ್ಥೆಯನ್ನು ಭದ್ರವಾಗಿ ನಿಲ್ಲಿಸಿ ಹಣದ ತೊಂದರೆಯಿಲ್ಲದಂತೆ ಮಾಡುವುದೇ ನಮ್ಮ ನಾಡು ಅವರಿಗಾಗಿ ಕೂಡಲೇ ಕಟ್ಟಬೇಕಾದ ಅಗತ್ಯವಾದ ಸ್ಮಾರಕ.

೫—೧—೨೮.

# ಬಂಗಾಲ ಸಿಂಹ

ಸುರೇಂದ್ರನಾಥ ಬ್ಯಾನರ್ಜಿಯ ಸಾವಿನಿಂದ ಹಿಂದುಸ್ಥಾನದ ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ವಿಲಕ್ಷಣ ಪ್ರಭಾವವನ್ನು ಬೀರಿದ್ದ ಮಹಾವ್ಯಕ್ತಿಯೊಂದು ಇಲ್ಲದಂತಾಯಿತು. ಈಚೆಗೆ ಹೊಸಕಾಲದ ಆದರ್ಶ ಆಕಾಂಕ್ಷೆಗಳು ತಲೆದೋರಿ, ಅವರು ಹಿಂದೆ ನಿಂತಹಾಗೆ ಆದರೆ ತಾನೆ ಏನು ? ಈಗ ನಾವು ಅನುಭವಿಸುತ್ತಿರುವುದು ಹಿಂದಿನ ಪುಣ್ಯದ ಫಲ ಸುರೇಂದ್ರನಾಥರಂಥ ಹಿಂದಿನ ಕಾಲದ ಮೊದಲಿಗರು ಮಾಡಿದ ಅಮೂಲ್ಯ ಸೇವೆಯ ಬಲವಿರದಿದ್ದರೆ ಇಂದಿನ ಆದರ್ಶ, ಆಕಾಂಕ್ಷೆ ಬೆಳೆಯುತ್ತಿರಲಿಲ್ಲ. ಒಂದು ಕಾಲದಲ್ಲಿ ವಿದ್ಯಾರ್ಥಿ ಪ್ರಪಂಚದ ವೀರಪೂಜೆ ಅವರಿಗೆ ಸಲ್ಲುತ್ತಿತ್ತು ; ರಾಷ್ಟ್ರೀಯ ವಿಚಾರದಲ್ಲಿ ಅವರ ಸಲಹೆ ಅನಿವಾರ್ಯವಾಗಿತ್ತು. ಅವರ ವಾಗ್ಮಿತೆಯಂತೂ ಜನರನ್ನು ಮಂತ್ರಮುಗ್ಧರಾಗಿ ಮಾಡುತ್ತಿತ್ತು ಬಂಗಾಲ ವಿಭಜನೆಯ ಕಾಲದ ಸಂಗತಿಗಳನ್ನು ನೆನೆದರೆ ಆ ಚಳುವಳಿಗೆ ಸುರೇಂದ್ರನಾಥರು ಸಲಿಸಿದ ಸಾಟಿಯಿಲ್ಲದ ಸೇವೆಗಾಗಿ ಹೆಮ್ಮೆಗೊಳ್ಳದೆ, ಕೃತಜ್ಞತೆ ತೋರದೆ ಇರಲು ಸಾಧ್ಯವೆ ? ಆಗಲೆ ನಾಡಿಗರು ಅವರಿಗೆ ಸರೆಂಡರ್ ನಾಟ್* ಎಂಬ ಯೋಗ್ಯವಾದ ಬಿರುದನ್ನು ಕೊಟ್ಟರು ವಿಭಜನೆಯು ಕಾರ್ಗತ್ತಲೆ ದಟ್ಟವಾಗಿ ಕವಿದಿದ್ದ ಕಾಲದಲ್ಲಿಯೂ ಸುರೇಂದ್ರನಾಥರು ಧೃತಿಗೆಡಲಿಲ್ಲ, ಆಸೆ ತೊರೆಯಲಿಲ್ಲ. ಆ ಚಳುವಳಿಗಾಗಿ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿದರು. ಅವರ ಹುರುಪು ಇಡೀ ಬಂಗಾಲದಲ್ಲಿ ಹರಡಿತು ಆಗಿಹೋಯಿತು ಎಂಬ ಸಂಗತಿಯನ್ನು ಆಗದಂತೆ ಮಾಡುವ ಅವರ ಸಂಕಲ್ಪ ಸ್ವಲ್ಪವೂ ಸಡಿಲವಾಗಲಿಲ್ಲ. ನಮಗೆ ಬೇಕಾದ ಧೈರ್ಯ ಸ್ಥೈರ್ಯಗಳ ಪಾಠವನ್ನು ಕಲಿಸಿದವರು ಅವರೇ. ಅಧಿಕಾರಕ್ಕೆ ಅಂಜಬಾರದೆಂಬುದನ್ನು ಕಲಿಸಿದರು. ವಿದ್ಯಾಕ್ಷೇತ್ರದಲ್ಲಿ ಅವರು ಮಾಡಿದ ಸೇವೆ ರಾಜಕೀಯ ರಂಗದಲ್ಲಿ ಮಾಡಿದ ಸೇವೆಗಿಂತ ಕಡಮೆ

* ಸುರೇಂದ್ರನಾಥರ ಹೆಸರಿನ ಇಂಗ್ಲಿಷು ಅಕ್ಷರದ ಶ್ಲೇಷ Surender Nath : Surrender Not ಇಂಗ್ಲಿಷು ಜನರ ಉಚ್ಚಾರ ಹೀಗೆ ಇತ್ತು ; ಅದನ್ನೇ ಜನ ಹೀಗೆ ತಿರುಗಿಸಿದರು.

ಯುಕ್ತಿಲ್ಲ. ರಿಪನ್ ಕಾಲೇಜಿನಲ್ಲಿ ಸಾವಿರಾರು ಜನ ತರುಣರು ಅವರ ನಿಜಸಹವಾಸದ ರುಚಿಯನ್ನು ಕಂಡು ಉಚ್ಚ ಶಿಕ್ಷಣ ಪಡೆದರು. ಒಳ್ಳೆಯ ನಿಯಮನಿಷ್ಠ ಸ್ವಭಾವ. ಆ ಶಿಸ್ತೇ ಅವರಿಗೆ ಆರೋಗ್ಯ, ಬಲ, (ಹಿಂದುಸ್ಥಾನದ ಲೆಕ್ಕದಲ್ಲಿ) ದೀರ್ಘಾಯುಸ್ಸನ್ನು ಕೊಟ್ಟಿತು. ಕೊನೆಯತನಕ ಅವರ ಬುದ್ಧಿಬಲ ಕುಂದಿರಲಿಲ್ಲ. ತಮ್ಮ 'ಬಂಗಾಲಿ' ಪತ್ರಿಕೆಯನ್ನು ೭೭ನೆ ವಯಸ್ಸಿನಲ್ಲಿ ತಮ್ಮ ಕೊರಳಿಗೆ ಕಟ್ಟಿಕೊಳ್ಳುವುದೆಂದರೆ ಅವರ ಧೈರ್ಯವೆಷ್ಟಿರಬೇಡ! ತಮ್ಮ ದೇಹಶಕ್ತಿ ಮನೋಬಲಗಳ ಬಗ್ಗೆ ಅವರಿಗೆ ಪೂರ್ಣ ವಿಶ್ವಾಸವಿತ್ತು. ಎರಡು ತಿಂಗಳ ಕೆಳಗೆ ಬರಾಕ್‌ಪುರದಲ್ಲಿ ನನಗೆ ಅವರ ಸಂದರ್ಶನ ಭಾಗ್ಯ ದೊರೆತಾಗ ೮೧ ವರ್ಷದವರೆಗೆ ತಾವು ಬದುಕುವುದಾಗಿಯೂ, ಅಲ್ಲಿಂದ ಮುಂದೆ ತಮ್ಮ ಮನಶ್ಶಕ್ತಿ ಸಡಿಲವಾಗುವುದರಿಂದ ಆಮೇಲೆ ಬದುಕಿರಲು ಇಷ್ಟವಿಲ್ಲವೆಂದೂ ಹೇಳಿದರು. ಆದರೆ ವಿಧಿಯ ಇಷ್ಟ ಬೇರೆಯಾಗಿತ್ತು. ಮುನ್ಸೂಚನೆಯನ್ನೆ ಕೊಡದೆ ವಿಧಿ ಅವರನ್ನು ಕಿತ್ತುಕೊಂಡು ಹೋಯಿತು. ೬ನೆ ತಾರೀಖು ಗುರುವಾರ ಮುಂಜಾನೆಯ ತನಕ ಹೀಗಾದೀತೆಂಬ ಸೂಚನೆ ಕಂಡುಬರಲಿಲ್ಲ. ಸುರೇಂದ್ರನಾಥರ ದೇಹ ಇನ್ನಿಲ್ಲವಾದರೂ ಅವರು ಮಾಡಿದ ದೇಶಸೇವೆ ಎಂದಿಗೂ ಮರೆಯಲಾರದುದು. ಹೊಸ ಹಿಂದುಸ್ಥಾನವನ್ನು ರೂಪುಗೊಳಿಸಿದ ಶಿಲ್ಪಿಗಳಲ್ಲೊಬ್ಬರೆಂದು ಅವರ ನೆನಪು ಎಂದಿಗೂ ಉಳಿದೀತು.

# ಆಶ್ರಮ ಭಜನೆ

ಆಶ್ರಮ ಭಜನೆ ಬಹಳ ಜನಪ್ರಿಯವಾಗಿದೆ. ಅದು ತನ್ನಷ್ಟಕ್ಕೆ ತಾನೇ ಬೆಳೆದು ಬಂದಿದೆ. ಆಶ್ರಮ 'ಭಜನಾವಳಿ' ಗೆ ಎಷ್ಟೋ ಮುದ್ರಣಗಳಾಯಿತು; ಇನ್ನೂ ಗಿರಾಕಿ ಹೆಚ್ಚುತ್ತಲೇ ಇದೆ. ಈ ಭಜನ ಹುಟ್ಟಿಸುವದರಲ್ಲಾಗಲಿ ಬೆಳೆಸುವದರಲ್ಲಾಗಲಿ ಕೃತಕವೇನೂ ಇಲ್ಲ. ಅದರಲ್ಲಿನ ಪ್ರತಿಯೊಂದು ಭಜನೆಗೂ ಪೂರ್ವೇತಿಹಾಸವಿದೆ. ಭಜನಾವಳಿಯಲ್ಲಿ ಉಳಿದ ಕೀರ್ತನೆಗಳ ಜೊತೆಗೆ ಮುಸ್ಲಿಂ ಸೂಫಿಗಳ, ಫಕೀರರ ಭಜನೆ ಪದಗಳೂ, ಗುರು ನಾನಕನ ಕೀರ್ತನೆಗಳೂ, ಕ್ರಿಸ್ತಾನ ಗೀತಗಳೂ ಇವೆ ಈ ಪ್ರಾರ್ಥನಾ ಪುಸ್ತಕದಲ್ಲಿ ಪ್ರತಿಯೊಂದು ಧರ್ಮವೂ ತನ್ನ ಪಸ್ನ ಸ್ಥಳವನ್ನು ಕಂಡುಕೊಂಡಂತಿದೆ.

ಆಶ್ರಮದಲ್ಲಿ ಚೀನೀ, ಬರ್ಮೀ, ಯಹೂದೀ, ಸಿಂಹಳೀ, ಮುಸ್ಲಿಂ, ಪಾರ್ಸಿ, ಐರೋಪ್ಯರು, ಅಮೆರಿಕದವರು—ಎಲ್ಲರೂ ಕೆಲಕೆಲವು ಕಾಲ ಇದ್ದಿದ್ದಾರೆ. ಇದೇ ರೀತಿ ೧೯೩೫ ರಲ್ಲಿ ನನ್ನಬಳಿಗೆ ಮಗನವಾಡಿಗೆ ಇಬ್ಬರು ಜಪಾನೀ ಸಾಧುಗಳು ಬಂದರು. ಜಪಾನಿನೊಡನೆ ಯುದ್ಧ ಪ್ರಾರಂಭವಾಗುವ ದಿನದವರೆಗೆ ಅವರಲ್ಲೊಬ್ಬ ಸಾಧು ನನ್ನ ಬಳಿಯಲ್ಲೇ ಇದ್ದ. ಸೇವಾಗ್ರಾಮದ ನಮ್ಮ ಮನೆಯಲ್ಲಿ ಆತ ಒಳ್ಳೆ ಆದರ್ಶ ಸಹ

ಚಾರಿಯಾಗಿದ್ದ. ಪ್ರತಿಯೊಂದು ಕೆಲಸದಲ್ಲೂ ಆತನಿಗೆ ಉತ್ಸಾಹ. ಆತ ಯಾರೊಡನೆಯೂ ಜಗಳವಾಡಿದಂತೆ ನಾ ಕೇಳಿಯೇ ಇಲ್ಲ. ಸದ್ದು ಮಾಡದೆ ಸೇವೆಗೈವ ರೀತಿ ಆತನದು. ತನಗೆ ಸಾಧ್ಯವಿದ್ದಷ್ಟು ಹಿಂದೀ ಕಲಿತ. ಹಿಡಿದ ವ್ರತವನ್ನು ಪಾಲಿಸುವುದರಲ್ಲಿ ಬಹಳ ಕಟ್ಟುನಿಟ್ಟಿನ ಮನುಷ್ಯ. ದಿನವೂ ಬೆಳಗ್ಗೆ ಸಂಜೆ, ಎರಡೂ ಹೊತ್ತು ತನ್ನ ನಗಾರಿ ಸಮೇತ ತನ್ನ ಮಂತ್ರ ಹೇಳುತ್ತ ಆತ ಆಶ್ರಮದಲ್ಲೆಲ್ಲ ಓಡಾಡುತ್ತಿದ್ದುದನ್ನು ನೋಡಬಹುದಾಗಿತ್ತು. ಸಾಯಂ ಪ್ರಾರ್ಥನೆ ಯಾವಾಗಲೂ ಆತನ 'ನಮ್ಯೋಹೋಂ ರೇಂಗೇ ಕ್ಯಾಂ'-ಅಂದರೆ ನಮಸ್ತೇ ಬುದ್ಧಾಯ, ಸತ್ಯಧರ್ಮಪಾತಾಯ ಎಂಬ-ಮಂತ್ರದಿಂದಲೇ ಪ್ರಾರಂಭವಾಗುತ್ತಿತ್ತು. ಮುನ್ಸೂಚನೆಯಿಲ್ಲದೆ ಕೂಡಲೆ ಏಕಾಏಕಿ ಪೋಲೀಸರು ಬಂದು ಆತನನ್ನು ಆಶ್ರಮದಿಂದ ಕರೆದುಕೊಂಡು ಹೋದರು. ಆ ಹೊತ್ತು ಆತ ಹೇಗೆ ಆ ಸಂದರ್ಭಕ್ಕೆ ಸಿದ್ಧವಾದನೊ; ಆಗ ಆತ ತೋರಿದ ಪೂರ್ಣ ಅನಾಸಕ್ತಿ, ನಿಸ್ಪೃಹ, ಶೀಘ್ರತೆಯೊ, ಯಾವುದನ್ನೂ ನಾ ಮರೆಯಲಾರೆ. ತನ್ನ ಇಷ್ಟಮಂತ್ರವನ್ನು ಉಚ್ಚರಿಸಿ, ತನ್ನ ನಗಾರಿಯನ್ನು ನನ್ನ ಬಳಿ ಇಟ್ಟು ಹೊರಟುಹೋದ. "ನೀನೇನೊ ಹೊರಟು ಹೋಗುತ್ತಿದೀಯೆ; ನಿನ್ನ ಮಂತ್ರ ಮಾತ್ರ ಆಶ್ರಮಭಜನೆಯಲ್ಲಿ ಎಂದೆಂದಿಗೂ ಸೇರಿಕೊಂಡಿರುತ್ತ, ತಮ್ಮ" ಎಂಬ ಮಾತು ತಾನಾಗಿಯೇ ನನ್ನ ಬಾಯಲ್ಲಿ ಹೊರಟಿತು. ಅಂದಿನಿಂದ ಆತ ನಮ್ಮ ನಡುವೆ ಇರದಿದ್ದರೂ ನಮ್ಮ ಪ್ರಾರ್ಥನೆಗೆ ಬೆಳಗ್ಗೆ ಸಂಜೆ ಎರಡೂ ಹೊತ್ತು, ಆ ಮಂತ್ರವೇ ಆದಿಶ್ಲೋಕ. ನನಗಂತೂ ಅದು ಸಾಧು ಕೇಶವನ ಪವಿತ್ರ ಚಾರಿತ್ರ್ಯ, ಏಕಾಗ್ರಭಕ್ತಿಯ ನಿರಂತರ ಜ್ಞಾಪಕ ಚಿಹ್ನೆ. ಆ ಪವಿತ್ರ ಸ್ಮೃತಿಯಲ್ಲಿಯೇ ಅದರ ಶಕ್ತಿಯಿದೆ.

ಸಾಧು ಕೇಶವ ನಮ್ಮ ನಡುವೆ ಇರುವಾಗಲೇ ಬೀಬಿ ರೈಹಾನಾ ತಯ್ಯಬ್ಜಿ ಕೂಡ ಸೇವಾಗ್ರಾಮದಲ್ಲಿ ಕೆಲವು ಕಾಲ ಇರಲು ಬಂದಿದ್ದಳು. ಆಕೆ ಶ್ರದ್ಧಾವಂತೆ ಮುಸ್ಲಿಂ ಎಂದು ನನಗೆ ಗೊತ್ತಿತ್ತು. ಆದರೆ ಆಕೆಯ ತಂದೆ-ಆ ಶ್ರೇಷ್ಠಜೀವ-ಸಾಯುವ ಮೊದಲು ಆಕೆಗೆ ಕೊರಾನೆ-ಷರೀಫ್‌ನಲ್ಲಿ ಎಷ್ಟು ಪಾಂಡಿತ್ಯವಿತ್ತೆಂಬುದು ತಿಳಿದಿರಲಿಲ್ಲ. ಗುಜರಾತಿನ ರತ್ನ ತಯ್ಯಬ್ಜಿ ಸಾಹೆಬ್ ಗತಿಸಿದಾಗ ಅವರ ಕೋಣೆಯ ಆ ಭೀಕರ ನೀರವತೆಯನ್ನು ಅಳುವಿನ ದನಿ ಭಂಗಗೊಳಿಸಲಿಲ್ಲ; ರೈಹಾನಾ ಬೀಬಿಯ ಇಂಪಾದ ಕೊರಾನ್ ಗಾನ ಆ ಕೋಣೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಅಬ್ಬಾಸ್ ತಯ್ಯಬ್ಜಿಯಂಥವರಿಗೆ ಮರಣವಿಲ್ಲ. ಅವರು ಹಾಕಿ ಕೊಟ್ಟ ದೇಶಸೇವೆಯ ಮೇಲ್ಪಂಕ್ತಿಯಲ್ಲಿ ಅವರು ಚಿರಜೀವಿಗಳಾಗಿದ್ದಾರೆ, ಅಮರರಾಗಿದ್ದಾರೆ. ಬೀಬಿ ರೈಹಾನಾ ಪರಿಣತಮತಿಯಾದ ಗಾಯಕಿ, ನಾನಾ ಬಗೆಯ ಎಷ್ಟೋ ಕೀರ್ತನೆಗಳನ್ನು ಬಲ್ಲವಳು. ದಿನವೂ ಹಾಡು ಹಾಡಿ ಕೊರಾನಿನ ಶ್ಲೋಕಗಳನ್ನು ಇಂಪಾಗಿ ಹೇಳುತ್ತಿದ್ದಳು. ಆಶ್ರಮವಾಸಿಗಳಲ್ಲಿ ಕಲಿತುಕೊಳ್ಳುವವರಿಗೆ ಕೆಲವು ಶ್ಲೋಕಗಳನ್ನು ಕಲಿಸಲು ಹೇಳಿದೆ. ಸಂತೋಷದಿಂದ ಆಕೆ ಕಲಿಸಿದಳು. ಇಲ್ಲಿಗೆ ಬಂದವರೆಷ್ಟೋ ಜನ ನಮ್ಮಲ್ಲಿ ಸೇರಿಹೋದ ಹಾಗೆ

ಆಕೆಯೂ ನಮ್ಮಲ್ಲೊಬ್ಬಳಾಗಿಹೋಗಿದ್ದಳು. ತನ್ನ ಗಡುವು ಮುಗಿದ ಮೇಲೆ ರೈಹಾನಾ ಹೊರಟುಹೋದಳಾಗಲಿ ಆಕೆಯ ಜೀವದ ಕಂಪು ಮಾತ್ರ ಇಲ್ಲಿ ನೆಲೆಸಿಹೋಯಿತು. ಸುಪ್ರಸಿದ್ಧವಾದ 'ಅಲ್ ಫತೇಹ' ಆಶ್ರಮ ಭಜನಾವಳಿಯಲ್ಲಿ ಈಗ ಸೇರಿದೆ.

೨-೨-೪೨

# ಸೇಠ ಜಮನಾಲಾಲ್ ಬಜಾಜ್

ಸೇಠ ಜಮನಾಲಾಲ ಬಜಾಜರನ್ನು ಆಹುತಿ ತೆಗೆದುಕೊಂಡಾಗ ಮೃತ್ಯು ಉದಾತ್ತ ಜೀವನವನ್ನೇ ಆಹುತಿ ತೆಗೆದುಕೊಂಡಿತು. ಹಣವಂತರು ತಮ್ಮ ಆಸ್ತಿಗೆ ಬರೀ ಪಾರುಪತ್ತೆಗಾರರಾಗಬೇಕೆಂದು ನಾ ಬರೆದಾಗೆಲ್ಲ ಈ ಕುಬೇರ ಚಕ್ರವರ್ತಿಯೆ ನನ್ನ ಲಕ್ಷ್ಯವಾಗಿದ್ದುದು. ಆತನ ಧರ್ಮದರ್ಶಿತ್ವ ಪರಿಪೂರ್ಣವಾಗಿರದಿದ್ದರೆ ಅದಕ್ಕೆ ಹೊಣೆ ಆತನಲ್ಲ, ನಾನು. ನಾನೇ ಆತನನ್ನು ತಡೆದೆ ಉತ್ಸಾಹ ಭರದಲ್ಲಿ ಏನನ್ನಾದರೂ ಮಾಡಿ ತರುವಾಯ ಶಾಂತಸ್ಥಿತಿಯಲ್ಲಿ ಪರಿತಪಿಸುವಂಥ ಒಂದು ಹೆಜ್ಜೆಯಾದರೂ ಆತ ಹಾಕದಿರಲಿ ಎಂದು ನನ್ನ ಅಭಿಪ್ರಾಯ. ಆತನ ಸರಳತೆ ಸಾಟಿಯಿಲ್ಲದುದು; ಸ್ವಯಮೇವವಾದುದು ತನಗಾಗಿ ಎಂದು ಆತ ಕಟ್ಟಿಕೊಂಡ ಮನೆಮನೆಯೂ ಛತ್ರವಾಯಿತು. ಸತ್ಯಾಗ್ರಹಿಯಾಗಿ ಆತ ಸಲ್ಲಿಸಿದ ಕಾಣಿಕೆ ಅತ್ಯುತ್ತಮ ರೀತಿಯದು. ರಾಜಕೀಯ ಚರ್ಚೆಯಲ್ಲೂ ಸ್ವಯಂ ಪ್ರಜ್ಞಾಶಾಲಿ ಆತನ ವಿಚಾರಧಾರೆ ಪಕ್ವವಾದುದು. ಆತ ಮಾಡಿದ ಎಲ್ಲ ತ್ಯಾಗಗಳಲ್ಲಿ ಅಂತಿಮ ತ್ಯಾಗವೇ ಹಿರಿದು, ಕಿರೀಟಪ್ರಾಯವಾದುದು. ರಚನಾತ್ಮಕ ಕಾರ್ಯಕ್ರಮವನ್ನು ಕೈಗೊಂಡು ತನ್ನ ಸರ್ವ ಸಾಮರ್ಥ್ಯವನ್ನೂ ವಿನಿಯೋಗಿಸಿ ಬದುಕಿದ್ದಷ್ಟು ದಿನ ನಡೆಯಿಸುವ ಯೋಚನೆ ಮಾಡಿದ್ದರು. ಭಾರತ ಗೋಧನ ಸಂರಕ್ಷಣೆ ಆ ಕೆಲಸ ಹಿಂದೆ ಯಾರೂ ತೋರಿಸದಷ್ಟು ಉತ್ಸಾಹ, ಕಾರ್ಯಶ್ರದ್ಧೆ, ಏಕಚಿತ್ತದಿಂದ ಆ ಕೆಲಸಕ್ಕೆ ಮೊದಲು ಮಾಡಿದ್ದರು. ಆತನ ಔದಾರ್ಯಕ್ಕೆ ಜಾತಿ ಪಂಥ ವರ್ಣಗಳ ಭೇದ ಗೊತ್ತಿರಲಿಲ್ಲ ವ್ಯವಹಾರಿಯಾದವನಿಗೆ ದುಸ್ಸಾಧ್ಯವಾದ ಆಸಮ ಸಾಹಸವನ್ನೂ-ಚಿತ್ತವೃತ್ತಿ ನಿರೋಧವನ್ನು-ಮಾಡಬೇಕೆಂದಿದ್ದರು. ಸಲ್ಪದ ವಿಚಾರ ಒಂದೂ ಮನಸ್ಸಿನಲ್ಲಿ ಸುಳಿಯದಂತೆ ತಡೆಯಬಯಸಿದರು. ಬಜಾಜರ ಸಾವಿನಿಂದ ಈ ಜಗತ್ತು ಅಸ್ಪಷ್ಟಹೀನವಾಗಿದೆ. ದೇಶ ತನ್ನ ಧೀರಸೇವಕರಲ್ಲೊಂದು ರತ್ನವನ್ನು ಕಳೆದುಕೊಂಡಿದೆ. ಪತಿರಾಯ ಕೈಗೊಂಡಿದ್ದ ಕೆಲಸವನ್ನು ಮುಂದುವರಿಯಿಸಬೇಕೆಂದಿದಾಳೆ ಅವರ ಹೆಂಡತಿ ಜಾನಕೀದೇವಿ. ಅದಕ್ಕಾಗಿ ತನ್ನ ಬಾಳನ್ನು ಮುಡುಪು ಮಾಡಿದಾಳೆ. ತನ್ನ ಸ್ವಂತ ಆಸ್ತಿಯನ್ನೆಲ್ಲ—ಸುಮಾರು ಎರಡೂವರೆ ಲಕ್ಷದ್ದು-ಅದಕ್ಕಾಗಿ ಧಾರೆಯೆರೆದಿದಾಳೆ.

ಆಕೆ ಕೈಗೊಂಡ ಈ ದೈವ-ಧರ್ಮಕಾರ್ಯ ಸಫಲವಾಗುವಂತೆ ದೇವರು ಅನುಗ್ರಹಿಸಲಿ.

೧೧-೨-೪೨

# ಅಗ್ನಿ ಪರೀಕ್ಷೆ

೨೨ ವರ್ಷದ ಕೆಳಗೆ ಮೂವತ್ತು ವಸಂತಗಳ ಹರೆಯದ ಯುವಕನೊಬ್ಬ ನನ್ನ ಬಳಿಗೆ ಬಂದ ; 'ನಿಮ್ಮನ್ನೊಂದು ಮಾತು ಕೇಳಬೇಕಾಗಿದೆ' ಎಂದ.

'ನನ್ನ ಶಕ್ತಿಗೆ ಮೀರದುದಾದರೆ ಕೊಟ್ಟೇನು, ಕೇಳು' ಎಂದೆ ಕೊಂಚ ಅಚ್ಚರಿಗೊಂಡು.

'ನಿಮ್ಮ ಮಗ ದೇವದಾಸನಂತೆ ನನ್ನನ್ನು ಕಾಣಬೇಕು' ಆ ಯುವಕ ಕೇಳಿದ.

ನಾ ಹೇಳಿದೆ. 'ಒಪ್ಪಿದೆ. ಇದರಲ್ಲಿ ನಾ ಕೊಟ್ಟದ್ದೇನೂ ಇಲ್ಲ; ನೀನೇ ದಾನಿ.'

ಆ ಯುವಕ ಬೇರಾರೂ ಅಲ್ಲ; ಜಮುನಾಲಾಲ ಬಜಾಜ್. ಈ ವ್ರತದ ಪರಿಣಾಮ ಏನಾಯಿತೋ ಜನ ಸ್ವಲ್ಪ ಮಟ್ಟಿಗೆ ಬಲ್ಲರು. ಆದರೆ ಈ ಸ್ವಯಂದತ್ತ ಪುತ್ರ ಎಷ್ಟು ಮಟ್ಟಿಗೆ ತನ್ನ ಧರ್ಮವನ್ನು ನಿರ್ವಹಿಸಿದನೋ ಬಲ್ಲವರು ಬಹಳಿಲ್ಲ. ಇಂಥ ಪುತ್ರನನ್ನು ಹಿಂದೆ ಯಾವ ಮರ್ತ್ಯಜೀವಿಯೂ ಪಡೆದಿರಲಿಲ್ಲವೆನ್ನಬಲ್ಲೆ. ನನ್ನ ಪಾಲಿನ ಕೆಲಸವನ್ನು ತಾವು ಮಾಡಿದ ಪುತ್ರಪ್ರಾಯರು, ಪುತ್ರಿಯರು ನನಗೆಷ್ಟೋ ಜನ ಇದಾರೆ. ಆದರೆ ಜಮುನಾಲಾಲಜೀ ನಿಸ್ಸಂಕೋಚವಾಗಿ ನಿಶ್ಶೇಷವಾಗಿ ಆತ್ಮಸಮರ್ಪಣೆ ಮಾಡಿದರು. ಆತ ಸಂಪೂರ್ಣ ಮನಸ್ಸಿನಿಂದ ಸಹಕರಿಸದ ಚಳುವಳಿ ಒಂದೂ ನನಗಿರಲಿಲ್ಲ. ಅಷ್ಟೇ ಅಲ್ಲ : ಆತನ ಸಹಕಾರ ಅಮೂಲ್ಯ ನಿಧಿಯಾಗಿತ್ತು. ಜಮುನಾಲಾಲಜೀ ಶೀಘ್ರ ಬುದ್ಧಿ. ವರ್ತಕ ಚಕ್ರವರ್ತಿ, ತನ್ನ ವಿಶಾಲ ಸಂಪತ್ತನ್ನೆಲ್ಲ ನನಗೆ ಒಪ್ಪಿಸಿದರು. ನನ್ನ ಆರೋಗ್ಯ, ಕಾಲದ ಪಾರುಪತ್ತೆಗಾರರಾದರು. ಇದೆಲ್ಲವನ್ನೂ ಮಾಡಿದುದು ಸಾರ್ವಜನಿಕ ಹಿತಕ್ಕಾಗಿ. ಆತ ತೀರಿಕೊಂಡ ದಿನ, ತಾನೂ ಜಾನಕಿದೇವಿಯೂ ನನ್ನ ಬಳಿಗೆ ಬರಬೇಕಾಗಿತ್ತು. ಇಲ್ಲಿ ನನ್ನ ಬಳಿ ಬಂದಿರಬೇಕಾದ ಗಳಿಗೆಯಲ್ಲೆ ಆತನ ಪ್ರಾಣಪಕ್ಷಿ ಅಲ್ಲಿ ಹಾರಿಹೋಯಿತು. ೧೪ ವರ್ಷದ ಕೆಳಗೆ ಮಗನಲಾಲ ತೀರಿಕೊಂಡಾಗೊಮ್ಮೆ, ಈಗೊಮ್ಮೆ, ಇಂಥ ದೈನ್ಯ ಇಂಥ ನಿರಾಶ್ರಯ ಮತ್ತೆಂದೂ ನನಗೆ ಅನುಭವವಾಗಿರಲಿಲ್ಲ. ಆದರೆ ಅಂದೂ ಅಷ್ಟೆ, ಇಂದೂ ಅಷ್ಟೆ . ಇಂಥ ವಿಪತ್ತೆಲ್ಲ ನಿಜವಾಗಿಯೂ ಶುಭಾಶೀರ್ವಾದವೆ ಎಂಬುದರಲ್ಲಿ ನನಗೆ ಅನುಮಾನವೆ ಇಲ್ಲ. ದೇವರು ಮತ್ತೆ ಮತ್ತೆ ನನ್ನನ್ನು ಪರೀಕ್ಷೆಗೆ ಒಡ್ಡುತ್ತಿದಾನೆ. ಆ ಪರೀಕ್ಷೆಯಲ್ಲಿ ಗೆದ್ದು ಬರುವ ಬಲವನ್ನೂ ದೇವರೇ ನೀಡುತ್ತಾನೆಂಬ ನಂಬಿಗೆಯೇ ನನ್ನ ಬಾಳ ಚುಕ್ಕಾಣಿ.

೧೬-೨-೪೨

# ಜ ಮ ನಾ   ಲಾ ಲ ಜೀ

೧೯೨೮ರಲ್ಲಿ ಮಗನಲಾಲ ಗಾಂಧಿಯ ಆಕಸ್ಮಿಕ, ಅಕಾಲ ಮರಣದ ತರುವಾಯ ಇಂಥ ಬಲವಾದ ಪೆಟ್ಟು—ಜಮನಾಲಾಲರ ಆಕಸ್ಮಿಕ, ಅಕಾಲ ಮರಣದಂಥ ಪೆಟ್ಟು—ಗಾಂಧೀಜಿಗೆ ತಗಲಿರಲಿಲ್ಲ. ಯಾವ ಸಾವೂ ಅಂಥ ಸಿಡಿಲಾಗಿರಲಿಲ್ಲ. ಸರ್ವವೂ ನಾಶವಾದಂತಿತ್ತು ಅವರ ಪಾಲಿಗೆ; ಆ ದುಃಖಪೂರ್ಣ ಭಾವವನ್ನು ಬಣ್ಣಿಸಲು ನನಗೆ ಮಾತೇ ಬಾರವು. ಅಭಾಗಿನಿಯರಾದ ವಿಧವೆ, ಪುತ್ರಶೋಕ ಪೀಡಿತಳಾದ ತಾಯಿ— ಇಬ್ಬರನ್ನೂ ಸಮಾಧಾನಗೊಳಿಸುತ್ತ ಎರಡು ದಿನ ಧೀರತನದಿಂದಲೇ ಕಳೆದರು. ಮೂರನೆ ದಿನ ಗಾಂಧೀಜಿಗಿನ್ನು ತಡೆಯಲಾಗಲಿಲ್ಲ. "ಮಕ್ಕಳಿಲ್ಲದವರು ಮಕ್ಕಳನ್ನು ದತ್ತು ತೆಗೆದುಕೊಳ್ಳುತ್ತಾರೆ. ಆದರೆ ಜಮನಾಲಾಲಜೀ ನನ್ನನು ತಂದೆಯಾಗಿ ದತ್ತು ತೆಗೆದುಕೊಂಡರು. ನನ್ನ ಸರ್ವಸ್ವಕ್ಕೂ ಆತ ಉತ್ತರಾಧಿಕಾರಿಯಾಗಬೇಕಿತ್ತು ಆದರೆ ಆತನ ಸರ್ವಸ್ವಕ್ಕೂ ಉತ್ತರಾಧಿಕಾರಿಯಾಗಿ ನನ್ನನ್ನು ಬಿಟ್ಟು ಹೋದರು ಆತ" ಎಂದು ಗೋಳಾಡಿದರು. ಈ ಏಕಾಕಿತನದ ಭಾವ ಸುತ್ತಲೂ ಹರಡಿದೆ, ಕವಿದಿದೆ ಎನ್ನಬಹುದು. ಬಾಪು, ಬಾ ಇದ್ದರೂ ಜಮನಾಲಾಲರಿಲ್ಲದೆ ವರ್ಧಾ ಸೇವಾಗ್ರಾಮಗಳು ಪೂರ್ಣ ನೀರಸವಾಗಿ ಕಾಣುತ್ತಿವೆ. ಜಮನಾಲಾಲಜೀ ಎಷ್ಟೋ ಸಂಸ್ಥೆ ಕಟ್ಟಿದ್ದರು, ಕಟ್ಟಲು ನೆರವಾಗಿದ್ದರು. ಅವರ ಚೇತನದಾಯಕ ವ್ಯಕ್ತಿ ತಮ್ಮ ನಡುವೆ ಇಲ್ಲದೆ ಗಾಢವಾದ ಶೂನ್ಯಭಾವ ಅದನ್ನೆಲ್ಲ ಕವಿದೀತು. ಜಮನಾಲಾಲರ ಬಿಚ್ಚುಮಾತು, ವ್ಯಾವಹಾರಿಕ ಪ್ರಜ್ಞೆ, ಕಿಡಿನುಡಿ ಇಲ್ಲದೆ ವರ್ಕಿಂಗ್ ಕಮಿಟಿಯ ಸಭೆಗಳೂ ನಿಸ್ಸಾರವಾದಾವು, ಬೇಸರವಾದಾವು.

*   *   *   *

ನಮ್ಮಲ್ಲಿ ಅನೇಕರನ್ನು ಆವರಿಸಿದ ಈ ಶೂನ್ಯಭಾವಕ್ಕೆ ವಲ್ಲಭಭಾಯಿಯ ಪತ್ರದ ಈ ಕೆಲವು ಪಂಕ್ತಿ ಸಾಕ್ಷಿ:

"ರೈಲು, ಮೋಟಾರಿನಲ್ಲಿ ಪಯಣ ಮಾಡೆನೆಂಬ ವ್ರತ ತೊಟ್ಟಿದ್ದರು. ಈ ೧ನಕ್ಕೆ ಅದು ಮುಗಿಯಬೇಕಾಗಿತ್ತು. ಆಮೇಲೆ ಇತ್ತ ಬಂದು ನನ್ನೊಡನೆ ಹಜೀರಾದಲ್ಲಿ ವಿಶ್ರಾಂತಿ ಪಡೆಯುವುದಾಗಿ ಹೇಳಿದ್ದರು. ಈಗ ಚಿರವಿಶ್ರಾಂತಿಗೇ ಹೋದರು. ಅದಕ್ಕಿಂತ ಲೇಸಾದ ಸಾವು ಇರಲಾರದು. ಆದರೆ ಗಾದೆಯಿಲ್ಲವೆ? 'ನೂರು ಜನ ಸಾಯಲಿ, ನೂರು ಜೀವ ಸಲಹುವವ ಬದುಕಲಿ'. ನಮ್ಮ ದೇಶದಲ್ಲಿ ಎಷ್ಟು ಜನ ಕೆಲಸಗಾರರು ತಮ್ಮ ತಮ್ಮ ಗುಡಿಸಿಲಲ್ಲಿ ಸದ್ದಿಲ್ಲದೆ ಕಂಬನಿಗರೆಯುತ್ತಿದಾರೋ. ಬಾಪೂಗೆ ನಿಜಪುತ್ರ, ಜಾನಕೀದೇವಿಗೆ ಆ ಕುಟುಂಬಕ್ಕೆ ದೃಢಆಶ್ರಯ, ಇನ್ನಿಲ್ಲದಂತಾಯಿತು. ದೇಶ ನಂಬಿಗೆಯ ಸೇವಕನನ್ನು ಕಳೆದುಕೊಂಡಿತು. ಕಾಂಗ್ರೆಸಿನ ಆಧಾರಸ್ತಂಭವೊಂದು ಕಳಚಿ ಬಿತ್ತು. ಗೋಮಾತೆಯು ಗೆಳೆಯ ಕಣ್ಮರೆಯಾದ. ಎಷ್ಟೋ ಸಂಸ್ಥೆ

ತಮ್ಮ ಪೋಷಕನನ್ನು ನೀಗಿಕೊಂಡವು. ನಮಗಂತೂ ಒಡಹುಟ್ಟಿದ ಜೀವ ಮರೆಯಾಯಿತು. ಎಲ್ಲಾ ಶೂನ್ಯವಾಗಿದೆ. ಏಕಾಕಿಯಾಗಿದೇನೆ.''

* * *

ಎಲ್ಲರೂ ದುಃಖದಲ್ಲಿ ಮುಳುಗಿದಾರೆ. ವರ್ಕಿಂಗ್ ಕಮಿಟಿಯ ಜೊತೆಗಾರರು ಮಾತ್ರವಲ್ಲ: ವ್ಯವಹಾರ ಪ್ರಪಂಚದ ಗೆಳೆಯರಾದ ಬಿರ್ಲಾ, ಟಾಟಾ ಕುಟುಂಬ, ಸರ್ ಪುರುಷೋತ್ತಮದಾಸ್ ಮಾತ್ರವಲ್ಲ; ಗೆಳೆತನ ನೀಡಿ ಜೊತೆಗೆ ನಿಂತು ಕೆಲಸಮಾಡಿದ್ದ ಕೆಲಸಗಾರರು ಮಾತ್ರವಲ್ಲ; ಲೋಕಕ್ಕೆ ಕೊಂಚವೂ ತಿಳಿಯದೆ ಅವರಿಂದ ನೆರವು ಪಡೆದ ನೂರಾರು ಜನ ಇಂದು ದುಃಖದಲ್ಲಿ ಮುಳುಗಿದಾರೆ. ವರ್ಧಾದಲ್ಲಿ ನಡೆದ ಶೋಕಸಭೆಯಲ್ಲಿ ಹಿಂದೂಮಹಾಸಭೆ, ಮುಸ್ಲಿಂ ಲೀಗುಗಳ ಜನ ಮಾತಾಡಿದರು. ಒಬ್ಬ ಮುಸ್ಲಿಂ ಬಾರಿಸ್ಟರ್ ಅವರ ಗುಣಗಾನಮಾಡಿದರು. ಜಮನಾಲಾಲರು ಸಕಾಲದಲ್ಲಿ ಸಹಾಯ ಮಾಡದಿದ್ದರೆ ಉರ್ದು ಶಾಲೆ ಬದುಕುತ್ತಲೇ ಇರಲಿಲ್ಲ ಎಂದರು. ಜಮನಲಾಲರ ಗೆಳೆತನದ ಗುಣ ಪಡೆದುಬಂದ ವರದಂತೆ. ಅವರಲ್ಲಿ ಅಭಿಮಾನ ತೋರದವರಿಲ್ಲ; ಅವರ ಮನೆಯಲ್ಲಿ ಇದು ತಮ್ಮ ಮನೆ ಎಂದು ತಿಳಿದುಕೊಳ್ಳದವರಿಲ್ಲ. ರಕ್ತಸಂಬಂಧಿಗಳು ಮಾತ್ರವೆ ತಮ್ಮ ಕುಟುಂಬ ಎಂಬ ಬೇಲಿಯನ್ನು ಜಮನಾಲಾಲಜೀ ಕಿತ್ತೊಗೆದುಬಿಟ್ಟಿದ್ದರು. ಅವರ ಕುಟುಂಬ ವಿಶಾಲವಾಗಿತ್ತು; ಎಲ್ಲ ಜಾತಿ ಎಲ್ಲ ಧರ್ಮದ ಜನ– ಗಂಡು ಹೆಣ್ಣು ಎಲ್ಲರೂ ಅದರಲ್ಲಿ ಸೇರಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಸಂಪತ್ತು ಶ್ರೀಮಂತಿಕೆ ತಂದೊಡ್ಡುವ ಅಡ್ಡಗೋಡೆಯನ್ನು ಕೆಡವಿಹಾಕಿದರು. ಅವರ ಆಳುಕಾಳು, ಕೆಲಸಗಾರರು ಎಲ್ಲಾ ಒಂದೇ ಕುಟುಂಬ; ಇವರು ಯಜಮಾನರು. ಅವರೆಲ್ಲರ ಅಂತರಂಗದ ಸುಖದುಃಖ ನಿಸ್ಸಂಕೋಚವಾಗಿ ಇವರೊಡನೆ ಚರ್ಚೆಯಾಗಬೇಕು. ಪರಿಹಾರವಾಗಬೇಕು. ಡಂಭದ ಮೋರೆಯನ್ನೇ ಕಾಣದ, ಜಂಬದ ಗುರುತೆ ಇಲ್ಲದ ಶ್ರೀಮಂತರು ಕಡಮೆ; ಧನಕನಕವಾಹನದ ಮದವಿಲ್ಲದ ಧನಿಕರು ಕಡಮೆ; ಜಾತ್ಯಭಿಮಾನ ಪ್ರಾಂತಾಭಿಮಾನದ ಸೋಂಕಿಲ್ಲದೆ ದಯೆ ತುಂಬಿತುಳುಕುವ ಸಿರಿವಂತರು ಬಹಳ ಕಡಿಮೆ. ಜಮನಾಲಾಲರಲ್ಲಿ ಅವೆಲ್ಲ ಗುಣವೂ ಇದ್ದವು.

* * * * *

ತಮ್ಮ ರಾಗ ಲೋಭವನ್ನು ಹದಗೊಳಿಸಿ ಪರಿಶುದ್ಧ ಮಾಡಿಕೊಳ್ಳುವ ಶಕ್ತಿ ಕೋಟಿಯಲ್ಲೊಬ್ಬರಿಗೆ. ಆಸ್ತಿಯ ವಿಷಯದಲ್ಲಿ, ಸಂಗ್ರಹ ಗುಣದಲ್ಲಿ ಜಮನಾಲಾಲಜಿಗೆ ಆ ಹದವಿತ್ತು. ತಾವು ಕೈ ಹಿಡಿದ ಗುರುವಿನ ಸರ್ವ ದುಃಖದಲ್ಲೂ ಸಂತೋಷದಿಂದ ತಮ್ಮ ಪಾಲನ್ನು ತಾವು ಸ್ವೀಕರಿಸಿದರು; ಎಲ್ಲ ಕಷ್ಟದಲ್ಲೂ ಗುರುವಿನ ಹಿಂದೆಯೆ ನಡೆದರು, ಸೊತ್ತು, ಆಸ್ತಿ ಅಪಾರವಾಗಿ ಸಂಗ್ರಹಿಸಿದ್ದರೂ ಅವು ತನ್ನವು ಎಂಬ ಆಸಕ್ತಿಯ ಭಾವ ಅವರಿಗಿರಲಿಲ್ಲ, ಇಲ್ಲದಿದ್ದರೆ ಆ ಶಿಷ್ಯತ್ವ ಸಾಧ್ಯವಾಗುತ್ತಿರಲಿಲ್ಲ.

ಜಯಪುರ ಸಂಸ್ಥಾನದಲ್ಲಿ ನೀರಿಗೇ ಅಭಾವವಾದ ಚಿಕ್ಕ ಹಳ್ಳಿಯೊಂದರಲ್ಲಿ ಹೆಸರು ಪ್ರತಿಷ್ಠೆ ಇಲ್ಲದ ಯಾವುದೋ ಕುಟುಂಬದಲ್ಲಿ ಹುಟ್ಟಿದುದು; ಜಯಪುರದ ಶ್ರೀಮಂತರೊಬ್ಬರು—ವರ್ಧಾದಲ್ಲಿ ನೆಲೆಸಿದ್ದರು ಅವರು—ಅವರನ್ನು ದತ್ತು ತೆಗೆದು ಕೊಂಡರು. ತಂದೆ ತಾಯಿ ಬಡವರಾದರೂ ತಮ್ಮ ಊರಿನಲ್ಲಿ ಒಂದು ಭಾವಿ ತೋಡಿಸುವತನಕ ಶ್ರೀಮಂತ ಬಚರಾಜ ಗೆ ತಮ್ಮ ಮಗನನ್ನು ಕೊಡಲಿಲ್ಲ. ಮಗು ದತ್ತುತಂದೆಯ ಬಳಿ ಬೆಳೆಯಿತು. ಎರಡುಮೂರು ವರ್ಷ ಹಿಂದೀ ಶಾಲೆಯಲ್ಲಿ ನಾಲ್ಕಕ್ಷರ ಕಲಿಸಿ ವ್ಯಾಪಾರಕ್ಕೆ ಹಾಕಿದರು ಆ ಹುಡುಗನನ್ನು. ಒಂದು ಸಲ ತಂದೆಗೆ ಏಕೋ ಮಗನ ಮೇಲೆ ಸಿಟ್ಟು ಬಂತು; ದುಡಿಯದೆ ಮಾಡದೆ ಆ ಸೊತ್ತಿಗೆ ಮಗು ಅಧಿಕಾರಿಯಾದ ಮಾತನ್ನು ಸೂಚಿಸಿದರು. ಇವರಿಗಿನ್ನೂ ೧೭ ವರ್ಷ. ತಂದೆಗೊಂದು ಕಾಗದ ಬರೆದರು ಮಾರವಾಡಿಯಲ್ಲಿ; ಒಕ್ಕಣೆ, ಬರೆಹದಲ್ಲಿ ತುಂಬಾ ವಿನಯವಿದೆ; ಅಷ್ಟೇ ದಾರ್ಢ್ಯವಿದೆ ವಂದನೆಯೂ ಜಮ್ನಾಲಾಲಜಿಯ ಮುಖ್ಯ ಲಕ್ಷಣ ಅದು, ಆ ಮೇಳನ. ಆ ಕಾಗದದ ಸಾರಾಂಶ ಹೀಗಿದೆ.

"ಇವತ್ತು ನೀವು ನನ್ನಮೇಲೆ ತುಂಬಾ ಕೋಪಗೊಂಡಿರಿ. ದೈವಚಿತ್ತ. ನನ್ನನ್ನು ದತ್ತು ತೆಗೆದುಕೊಂಡಿದೀರಿ; ನಿಮಗೆ ಕೋಪಗೊಳ್ಳಲು ಅಧಿಕಾರವಿದೆ. ಅದು ನಿಮ್ಮ ತಪ್ಪಲ್ಲ, ನನ್ನನ್ನು ದತ್ತುಕೊಟ್ಟವರ ತಪ್ಪು. ಈ ಐಶ್ವರ್ಯ ನಿಮ್ಮದು, ನಿಮಗೆ ತೋರಿದಂತೆ ಅದನ್ನು ವಿನಿಯೋಗ ಮಾಡಬಹುದು. ಇಲ್ಲಿಯತನಕ ನೀವು ನನಗಾಗಿ ಮಾಡಿದ ವೆಚ್ಚದ ಬಗ್ಗೆ ನನಗೆ ದುಃಖವಾಗುತ್ತದೆ. ಇನ್ನು ಮುಂದೆ ನಿಮ್ಮ ಹಣದಲ್ಲಿ ಒಂದು ಕಾಸನ್ನಾದರೂ ಮುಟ್ಟುವುದಿಲ್ಲ. ನಿಮ್ಮ ಮೇಲೆ ನನಗಾವ ಅಧಿಕಾರವೂ ಇಲ್ಲ. ನೀವೂ ನನ್ನ ಬಗ್ಗೆ ನಿಶ್ಚಿಂತೆಯಿಂದಿರಬೇಕೆಂದು ಬೇಡುತ್ತೇನೆ. ದೇವರು ನಿಮಗೆ ದೀರ್ಘಾಯುಸ್ಸನ್ನು ಕರುಣಿಸಲಿ. ಎಲ್ಲಿ ಹೋಗಲಿ, ನಿಮ್ಮ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತೇನೆ ನಿಮಗೆ ಸಿಟ್ಟು ಬರುವಂತೆ ಮಾಡಿದ್ದಕ್ಕಾಗಿ ನನನ್ನು ದಯವಿಟ್ಟು ಕ್ಷಮಿಸಿ. ನಿಮ್ಮ ಸಂಪತ್ತಿಗೆ ಆಸೆಪಟ್ಟು ನಿಮ್ಮ ಸೇವೆ ನಾ ಮಾಡಿದೆನೆಂದು ನೀವು ತಿಳಿದಿರಲಾರಿರಿ. ಅಂಥ ವಿಚಾರ ನಿಮ್ಮ ಮನಸ್ಸಿನಲ್ಲಿದ್ದರೆ ದಯವಿಟ್ಟು ಅದನ್ನು ತೆಗೆದುಹಾಕಿಬಿಡಿ. ನನಗೆ ಸಂಪತ್ತಿನಾಸೆ ಇಲ್ಲ. ಈ ಜನ್ಮಕ್ಕೂ ಮುಂದಿನ ಜನ್ಮಕ್ಕೂ ನನಗೆ ಸುಖ ಕೊಡಬಲ್ಲವ ದೇವರೊಬ್ಬನೆ. ಅವನ ಹೆಸರನ್ನು ನಾ ಮರೆಯದಂತೆ ದೇವರು ಕರುಣಿಸಲಿ. ನಾನು ಹೊರಟು ಹೋಗುತ್ತೇನೆ ಅದರಿಂದ ನೀವು ದುಃಖಪಡಬೇಡಿ, ಸಂತೋಷವಾಗಿರಿ. ಇಹದ ಎಲ್ಲ ಸಂಬಂಧವೂ ಜೊಳ್ಳು, ಮಾಯೆ. ಇಹಸಂಪತ್ತಿನ ಪಾಶದಲ್ಲಿ ನೀವು ಸಿಕ್ಕಿದೀರಿ. ಆ ಪಾಶದಿಂದ ನೀವು ನನ್ನನ್ನು ಇವತ್ತು ತಪ್ಪಿಸಿದಿರಿ; ಎಷ್ಟು ಪುಣ್ಯ ಮಾಡಿದ್ದೆನೋ ನಾನು! ನೀವು ನಿರ್ಭಯವಾಗಿರಿ; ನಾನೇನು ಕಚೇರಿಗೆ ಹೋಗಿ ನಿಮ್ಮ ಮೇಲೆ ಒಂದು ಕುರುಡು ಕಾಸಿಗೂ ದಾವೆ ಹಾಕುವುದಿಲ್ಲ. ಇದೋ, ಛಾಪಾ ಕಾಗದದ ಮೇಲೆ ಕ್ರಮವಾಗಿ

ಖುಲಾಸೆ ಪತ್ರ ಬರೆದಿದೇನೆ ; ನಿಮ್ಮ ಮೇಲೆ ನನಗೆ ಯಾವ ಹಕ್ಕುಬಾಧ್ಯತೆಯೂ ಇಲ್ಲ ವೆಂದು ಸ್ಪಷ್ಟವಾಗಿ ಹೇಳಿದೇನೆ. ನನಗೆ ಹಾಲ ಗೀಲ ಏನೂ ಇಲ್ಲ. ನೀವು ಕೊಡಬೇಕಾ ಗಿಲ್ಲ. ನಿಮ್ಮ ಸಂಪತ್ತನ್ನು ದಾನ ಧರ್ಮದಲ್ಲಿ ಸದ್ವಿನಿಯೋಗಮಾಡಿ ; ನಿಮ್ಮ ರೂಢಿಯಂತೆ ಸಾಧು ಸಂತರನ್ನು ತೆಗಳಬೇಡಿ , ಅವರಿಗೆ ನಿಮ್ಮ ಮನಸ್ಸು ಬಂದದ್ದನ್ನು ಕೊಟ್ಟು ಸಂತೋಷಪಡಿಸಿ. ಮನೆಯಿಂದ ನಾನೇನನ್ನೂ ತೆಗೆದುಕೊಂಡು ಹೋಗಿಲ್ಲ ; ಮೈ ಮೇಲಿನ ಬಟ್ಟೆ ಮಾತ್ರ. ”

* * * *

ತಂದೆ ಪರಿತಾಪಗೊಂಡು ಹಸಿಗಣ್ಣಿಂದ ಮಗನನ್ನು ಇರು ಎಂದು ಕೇಳಿದರು. ಮಗ ಇದ್ದುಬಿಟ್ಟರು. ದೃಢವಾದ ಲೌಕಿಕಪ್ರಜ್ಞೆ, ನೈಜವಾದ ವ್ಯವಹಾರಚಾತುರ್ಯಗಳಿಂದ ಲಕ್ಷಗಟ್ಟಲೆ ಗಳಿಸಿ, ತನ್ನ ದತ್ತುತಂದೆ ತನಗೆ ಬಿಟ್ಟ ಐಶ್ವರ್ಯದ ಐವರಷ್ಟು ದಾನಮಾಡಿ ದರು. ತಂದೆಯ ಬಲಾತ್ಕಾರಕ್ಕೆ ಮನೆಯಲ್ಲಿ ನಿಂತರೂ ಆ ಸೊತ್ತೆಲ್ಲ ದೇವರ ಮುಡಿಪು, ತಾನು ಬರೀ ಪಾರುಪತ್ಯಗಾರ ಎಂದು ಅವರಿಗೆ ತಿಳಿದಿತ್ತು. ಸ್ವಬುದ್ಧಿಯೋ ಸಂದರ್ಭ ಶುದ್ಧಿಯೋ ಅಂತೂ ಅನಾಸಕ್ತಿಯ ಪಾಠ ಜೀವನದಲ್ಲಿ ಅವರಿಗದು ಪ್ರಥಮ ಪಾಠ. ದತ್ತು ತೆಗೆದುಕೊಂಡ ತಂದೆ ಪ್ರಥಮ ಪಾಠ ಕಲಿಸಿದರು. ತಾವೇ ದತ್ತು ಮಾಡಿಕೊಂಡ ತಂದೆ ಆ ತತ್ವದ ಗಹನ ಲಕ್ಷಣಗಳನ್ನೆಲ್ಲ ವಿವರಿಸಿದರು.

* * * *

ಅವರ ನಿರ್ಭಯವೂ ಅಷ್ಟೆ. ಗುಲಾಮಗಿರಿಯ ವಿದ್ಯಾಭ್ಯಾಸವಿಲ್ಲದೆ ಅವರ ಆ ಗುಣಕ್ಕೆ ಯಾವ ಲೋಪವೂ ಬರಲಿಲ್ಲ. ಮೊದಲನೆ ಎರಡನೆ ತರಗತಿಯಲ್ಲಿ ಪ್ರಯಾಣ ಮಾಡುತ್ತ ತಮ್ಮ ಮೇಲೆ ದರ್ಪ ತೋರಿಸ ಬಂದ ಇಂಗ್ಲಿಷ್ ಸಿಪಾಯಿಗಳ ಬಾಯಿ ಮುಚ್ಚಿಸಿದ್ದರು ; ಗವರ್ನರಿಗೆಂದೇ ಸಂತೋಷ ಊಟ ಏರ್ಪಡಿಸಿದ್ದರೂ ಮದ್ಯ ವ್ಯವಸ್ಥೆ ಮಾಡಲಿಲ್ಲ, ನೀವು ರಾಜಭಕ್ತಿ ಹೆಚ್ಚು ತೋರಿಸದಿದ್ದರೆ ನಿಮ್ಮ ಶಾಲೆಯ ಪ್ರಾರಂಭೋತ್ಸವ ವನ್ನು ಸಾಹೇಬರು ಮಾಡುವುದಿಲ್ಲ ಎಂದು ಒಂದು ಸಲ ಕಮಿಷನರ್ ಹೇಳಿದ. ‘ಆದಕ್ಕೆ ಬೆಲೆ ಕೊಡಬೇಕಾಗಿಲ್ಲ ಹಾಗೆಯೋ ನಡೆಸುತ್ತೇನೆ’ ಎಂದುಬಿಟ್ಟರು. ಒಮ್ಮೆ ಒಬ್ಬ ಪೋಲೀಸ್ ಅಧಿಕಾರಿಯೊಡನೆ ಮಾತಾಡುತ್ತಿದ್ದರು; “ಟಿಳಕರು ಪ್ರಯಾಣ ಮಾಡುತ್ತಿರುವ ಈ ಹಡಗು ಹಾಗೇ ಮುಳುಗಿಹೋಗಬಾರದೆ” ಎಂದ ಆತ : “ಮರೆತೇಬಿಟ್ಟರಲ್ಲ, ಆ ಹಡಗಿನಲ್ಲಿ ಎಷ್ಟೋ ಜನ ಇಂಗ್ಲಿಷರೂ ಇದ್ದಾರೆ !” ಎಂದು ಉತ್ತರ ಕೊಟ್ಟರು ಸೇಠಜೀ.

ಗಾಂಧೀಜಿಯ ನಾಯಕತ್ವದಲ್ಲಿ ಅವರು ನಡೆಸಿದ ಸಾರ್ವಜನಿಕ ಜೀವನದಲ್ಲಿ ಈ ನಿರ್ಭಯ ಪೂರ್ಣವಾಗಿ ಪ್ರಕಟವಾಗಿದೆ. ಅಧ್ಯಕ್ಷ ಕ್ರೂಗರ್ ನಿರಕ್ಷರಕುಕ್ಷಿ, ಚೀನೀ ದಳ ಪತಿ ಚಿಯಾಂಗ್-ಕೈ ಷೇಕ್‌ಗೆ ಇಂಗ್ಲೀಷು ಬಾರದು. ಅವರಿಗದರಿಂದ ಏನೂ ತೊಂದರೆ ಯಾಗಲಿಲ್ಲ. ಅವರ ಸ್ವಚ್ಛ ಮನಸ್ಸಿನ ಸಿದ್ಧ ಶಕ್ತಿ ಕೊಂಚವೂ ಕೆಸರಾಗಲಿಲ್ಲ. ಜಮ ನಾಲಾಲಜಿಗೂ ಹಾಗೇ. ಕಾಂಗ್ರೆಸ್ ಗೊತ್ತುವಳಿಗಳ ಸೂಕ್ಷ್ಮಾತಿಸೂಕ್ಷ್ಮ ಶಬ್ದ ಪ್ರಯೋ

ಗದ ಅರ್ಥ ವಿಶೇಷವನ್ನು ಉಳಿದ ಸದಸ್ಯರೆಷ್ಟೋ ಜನಕ್ಕಿಂತ ಬೇಗನೆ ಅವರು ಗ್ರಹಿಸುತ್ತಿದ್ದರು. ಎಷ್ಟೋ ಸಲ "ಇದು ಕಳ್ಳ ಹುರುಲು, ಈ ಗೊತ್ತುವಳಿ ಬೇಡ" ಎಂದು ಎಚ್ಚರಿಸಿದಾರೆ. ಯುದ್ಧಕ್ಕೆ ನೈತಿಕ ಸಹಾಯ, ಸಾಮಗ್ರಿ ಸಹಾಯಗಳ ಪ್ರಶ್ನೆಯನ್ನು ಮೊದಲು ಎತ್ತಿದವರೆ ಅವರು. ಬರೀ ನೈತಿಕ ಸಹಾಯದ ಮಾತು ಕೊಟ್ಟರೆ ಮೋಸಹೋಗುವ ಜನವಲ್ಲ ಈ ದಲಾಲಿಗಳ ಜಾತಿ ಎಂದೂ ಹೇಳಿದರು.

*  *  *  *

ಜಮುನಾಲಾಲಜೀ ರಾಷ್ಟ್ರದ ಸಂಪತ್ತಿನ ಖಜಾನಚಿ ಇದ್ದಂತೆ ರಾಷ್ಟ್ರ ಗೌರವದ ಸಂರಕ್ಷಕರೂ ಹೌದು. ರಾಷ್ಟ್ರದ ಸ್ವಾತಂತ್ರ್ಯಸಂಗ್ರಾಮದಲ್ಲಿ ನಿರ್ಲಕ್ಷ್ಯವಾಗಿ ಹಿಂದೆಮುಂದೆ ನೋಡದೆ ಧುಮುಕಿ, ಚಳುವಳಿಯ ತೆರೆತೆರೆಯಲ್ಲೂ ಸೆರೆಮನೆಯ ಕಷ್ಟ ಅನುಭವಿಸಿದ ಶ್ರೀಮಂತರು ನಮ್ಮಲ್ಲಿ ಕಡಮೆ. ಸೇಠಜೀ ಆ ಒಂದು ಹಿಡಿಯ ಜನದ ಗುಂಪಿನವರು. ನಿರಾಶೆಯ ಕಾರ್ಗತ್ತಲೆ ಕವಿದಾಗ ಸೋಲಿನ ಭಾರ ಅದುಮಿದಾಗ ಉಳಿದವರ ಶ್ರದ್ಧಾ ಧೈರ್ಯಗಳು ಸಡಲಿದಾಗ ಅವರ ಶ್ರದ್ಧಾಜ್ಯೋತಿ ನಿಚ್ಚಳವಾಗಿ ಬೆಳಗುತ್ತಿತ್ತು. ಇತರರಲ್ಲಿ ನಂದುತ್ತಿದ್ದ ಆ ಬೆಳಕನ್ನು ಮತ್ತೆ ಉರಿಯಿಸಲೆಂದೇ ಸೇಠರು ಗಾಂಧೀಸೇವಾಸಂಘವನ್ನು ಸ್ಥಾಪಿಸಿದ್ದು; ಗಾಂಧೀಜೀ ಆರು ವರ್ಷದ ಸೆರೆಗೆ ಒಳಗಾದಾಗ ಎರಡೂವರೆ ಲಕ್ಷ ರೂಪಾಯಿ ಅದಕ್ಕಾಗಿ ನೀಡಿದ್ದು. ರಾಜಕೀಯದಲ್ಲಿ ಅವರಿಗೆ ಪರಿಶ್ರಮವಿತ್ತಾಗಲಿ ಮಾನವನ ಹೃದಯ, ಆತ್ಮಗಳಿಗೆ ಮೈಲಿಗೆ ಅಂಟಿಸುವ ಆಟ ಅದು ಎಂಬ ಭಾವನೆ ಅವರದು ಅಂತಲೆ ಪ್ರಾರಂಭದಲ್ಲೇ ಕಾಂಗ್ರೆಸಿನ ನಿರ್ಮಾಣಕಾರ್ಯಕ್ರಮದಲ್ಲಿ ಆಸಕ್ತಿಗೊಂಡರು: ತಮ್ಮ ತನುಮನಧನಗಳನ್ನೂ ರಚನಾಶಕ್ತಿ, ಶ್ರದ್ಧೆಯನ್ನೂ ಖಾದಿಗೆ ಅರ್ಪಿಸಿದರು; ಸಂಕುಚಿತ ಬುದ್ಧಿಯ ತಮ್ಮ ಜಾತಿಯವರ ಕೋಪಕ್ಕೆ ಗುರಿಯಾಗಿ, ದೊಡ್ಡ ದೇವಸ್ಥಾನವೊಂದರಲ್ಲಿ ಮೊದಲು ಹರಿಜನ ಪ್ರವೇಶಕ್ಕೆ ಎಡೆಗೊಟ್ಟು, ತಮ್ಮ ಹರಿಜನಗ್ರಾಮ-ಸೇವಾಗ್ರಾಮ-ದ ಸಂಪೂರ್ಣ ವರಮಾನವನ್ನು ಹರಿಜನ ಯೋಗಕ್ಷೇಮಕ್ಕಾಗಿ ಗಾಂಧೀಜಿಗೆ ಕೊಟ್ಟು ಹರಿಜನಸೇವೆ ಮಾಡಿದರು. ದೊಂಬಿಯೊಂದರಲ್ಲಿ ಬಲವಾದ ಪೆಟ್ಟನ್ನು ಸಂತೋಷದಿಂದ ಸಹಿಸಿ, ತಮ್ಮ ಉತ್ಸಾಹಕ್ಕೆ ಫಲವಾಗಿ ಖಾನ್ ಸಾಹೇಬರಂಥ ಅಣ್ಣತಮ್ಮಂದಿರನ್ನು ತಮ್ಮ ಅಣ್ಣತಮ್ಮಂದಿರಾಗಿ, ರೈಹಾನಾಬೇನ್, ಕ್ಯಾಪ್ಟನ್ ಸೋದರಿಯರಂಥವರನ್ನು ಅಕ್ಕತಂಗಿಯರಾಗಿ ಪಡೆದು ಹಿಂದೂ-ಮುಸ್ಲಿಂ ಸಖ್ಯಕ್ಕಾಗಿ ದುಡಿದರು; ತಮ್ಮ ಪಿತ್ರಾರ್ಜಿತದಲ್ಲಿ ಅಮೂಲ್ಯ ಭಾಗವೊಂದನ್ನು ಗ್ರಾಮೋದ್ಯೋಗಕ್ಕೆ ದಾನ ಮಾಡಿದರು; ಸ್ತ್ರೀಜನೋದ್ಧಾರಕ್ಕಾಗಿ ತಮ್ಮ ಧನ, ಸಮಯಗಳನ್ನು ಧಾರೆಯೆರೆದರು, ಗೋಸೇವೆಗಾಗಿ ತಮ್ಮ ಬಾಳನ್ನೆ ಮುಡಿಪು ಮಾಡಿದರು.

*  *  *  *

ಈ ಬಾಳಿಗಿಂತ ಸೇವಾಪೂರ್ಣವಾದ ಬಾಳುಂಟೆ? ಆದರೂ ಅವರ ಮಾತಿನಲ್ಲಿ ಏನೋ ಒಂದನ್ನು ತಾವು ಸಾಧಿಸಲಿಲ್ಲವೆಂದೂ ಅದನ್ನು ಸಾಧಿಸಬೇಕೆಂದೂ ಅವರ

ಮನಸ್ಸು ಮಿಡಿಯುತ್ತಿತ್ತು. ಅವರ ಸತ್ಯ ನ್ಯಾಯ ನಿಷ್ಠುರತೆ ನಿಜವಾಗಿಯೂ ಅದ್ಭುತವಾಗಿರುತ್ತಿತ್ತು. ಗಾಂಧೀಜಿಯ ದರ್ಶನವಾಗುವ ಮುನ್ನ ಸೇಠರು ಅನೇಕ ದೇವರಿಗೆ ಮೊಕ್ಕಿದರು. ಆದರೆ ಗಾಂಧೀಜೀ ಆ ಜೀವಕ್ಕೆ ತಂದ ನಿರ್ಧಾರ ಮತ್ತಾರೂ ತಂದಿರಲಿಲ್ಲ. ಗಾಂಧೀಜಿಯ ತೀವ್ರ ಸತ್ಯೋತ್ಸಾಹಕ್ಕೆ ಸೋತು ಅವರ ಮಗನಾಗಿ ತಮ್ಮನ್ನು ಅರ್ಪಿಸಿಕೊಳ್ಳುವ ಬಯಕೆಯಾಯಿತು. ೧೯೨೩ರಲ್ಲಿ ಸೇಠರು ಬರೆದರು: 'ಮಹಾತ್ಮಾಜಿಯ ಮಗನೆನಿಸಿಕೊಳ್ಳುವ ಭಾಗ್ಯ ನನಗೆ ಲಭಿಸಿದ ಗಳಿಗೆಯು ನನ್ನ ಸೌಭಾಗ್ಯಶಾಲಿ ಗಳಿಗೆ. ಅವರ ಅಪಾರ ಕರುಣೆಯಿಂದಲೇ ನನಗೆ ನನ್ನ ದೋಷದೌರ್ಬಲ್ಯ ತಿಳಿಯುವಂತಾಗಿರುವುದು.' ಎಷ್ಟೋ ಸಲ ಜಮನಾಲಾಲರಿಗೆ ತಮ್ಮ ಆಧ್ಯಾತ್ಮಿಕ ದೌರ್ಬಲ್ಯದ ಭಾರ ತಮ್ಮನ್ನು ಮುಳುಗಿಸಿದಂತಾಗುತ್ತಿತ್ತು. ಅನೇಕವೇಳೆ ಸಾರ್ವಜನಿಕ ಸೇವೆಯಿಂದ ನಿವೃತ್ತರಾಗುವ ಯೋಚನೆಯನ್ನು ಮಾಡಿದರು. ಇದು ಸಂಪತ್ತಿನ ತ್ಯಾಗಕ್ಕಿಂತ ಹಿರಿದು. ಈ ಆಧ್ಯಾತ್ಮ ಪಿಪಾಸೆಯೇ ಗಾಂಧೀಜಿಗೆ ಅವರನ್ನು ಪ್ರಿಯವಾಗುವಂತೆ ಮಾಡಿತ್ತು. ಅವರ ತ್ಯಾಗವೂ ಏನು ಸಾಧಾರಣವಲ್ಲ. ಆದರೆ ಗಾಂಧೀಜಿಯ ಹೆಚ್ಚಿನ ಎಲ್ಲಾ ಪತ್ರ ಜಮನಾಲಾಲರಿಗೆ ಬಂದದ್ದು ಅವರ ಆಧ್ಯಾತ್ಮ ದಾಹಶಮನಕ್ಕಾಗಿ. ಅವು ಪ್ರೇರಣೆಯಿಂದ ಬರೆದ ಪತ್ರ.

ಒಂದರಲ್ಲಿ ಹೀಗಿತ್ತು :

"ಸತ್ಯಶೋಧನೆಯಲ್ಲಿ ಮುಂದೆ ಮುಂದೆ ಹೋದಂತೆಲ್ಲ ಸತ್ಯ ಸರ್ವಂಕಷವಾದ್ದು, ಸರ್ವಗರ್ಭ ಎಂಬ ಭಾವನೆ ನನ್ನಲ್ಲಿ ಬೆಳೆಯುತ್ತಿದೆ. ಶುದ್ಧ ಹೃದಯ, ಶುದ್ಧ ಬುದ್ಧಿಗೆ ಕಂಡದ್ದು ಆ ಕ್ಷಣಕ್ಕೆ ಸತ್ಯ. ಅದನ್ನೆ ಹಿಡಿದು ನಡೆದರೆ ಸತ್ಯದ ಬೇರೆ ಸಾರೆಲ್ಲ ಅದೇ ದಾರಿ ಕೊಟ್ಟೀತು. ಅಲ್ಲಿ ಕಿಂಕರ್ತವ್ಯತೆ, ಇದೋ ಅದೋ ಎಂಬ ಮಾತೇ ಇಲ್ಲ. ಆದರೆ ಎಷ್ಟೋ ಸಲ ಯಾವುದು ಅಹಿಂಸೆಯೋ ನಿಶ್ಚಯಿಸುವುದು ಕಷ್ಟ. ಧೂಪಾದಿ ಕ್ರಿಮಿನಾಶಕ ದ್ರವ್ಯಗಳ ಬಳಕೆ ಹಿಂಸೆಯೆ ; ಆದರೆ ನಮಗದು ಅಪರಿಹಾರ್ಯ. ಹಿಂಸಾಮಯವಾದ ಜಗತ್ತಿನ ನಡುವೆ ಇದ್ದು ನಾವು ಅಹಿಂಸೆಯಿಂದ ಬಾಳಬೇಕಾಗಿದೆ. ಸತ್ಯಕ್ಕೆ ಅಂಟಿಕೊಂಡರೆ ಮಾತ್ರವೇ ಅದು ಸಾಧ್ಯ. ಸತ್ಯದಲ್ಲಿ ಅಹಿಂಸೆಯನ್ನು ನಾನು ಕಂಡು ಕೊಳ್ಳುವುದು ಹೀಗೆಯೇ. ಸತ್ಯದಿಂದಲೆ ಪ್ರೀತಿ, ಮಾರ್ದವ, ವಿನಯ. ಸತ್ಯಾರಾಧಕ ಧೂಳಿ ಕಣದಂತೆ ವಿನಯವಂತನಾಗಬೇಕು. ಎಷ್ಟೆಷ್ಟು ಸತ್ಯವ್ರತಿಯಾಗುತ್ತಾನೋ ಅಷ್ಟಷ್ಟು ಅವನ ವಿನಯ ಬೆಳೆದೀತು. ಗಳಿಗೆಗಳಿಗೆಗೂ ನನ್ನ ಜೀವನದಲ್ಲಿ ಇದನ್ನು ನೋಡುತ್ತಿದ್ದೇನೆ. ಒಂದು ವರ್ಷದ ಕೆಳಗೆ ಇದ್ದುದಕ್ಕಿಂತ ಈಗ ನನ್ನ ಸತ್ಯಾನ್ವೇಷಣೆಯಲ್ಲಿ ನನ್ನ ಅಲ್ಪತೆಯ ಪರಿಜ್ಞಾನ ಬೆಳೆದಿದೆ. ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂಬ ಮಹಾ ಸತ್ಯದ ಅದ್ಭುತ ಅರ್ಥ ದಿನದಿನಕ್ಕೂ ನನಗೆ ತಿಳಿಯುತ್ತಿದೆ. ಇದು ನಮಗೆ ತಾಳ್ಮೆ ಕಲಿಸುತ್ತದೆ. ತಾಳ್ಮೆಯಿಂದ ನಿಷ್ಠುರತೆ ಕಳೆದು ಸಹನೆ ಬೆಳೆಯುತ್ತದೆ. ಇದರಿಂದ ನಾವು ನಮ್ಮ

ತೃಣದೋಷವನ್ನು ಪರ್ವತವಾಗಿ ತಿಳಿದೇವು. ಪರರ ದೋಷಪರ್ವತವನ್ನು ತೃಣವಾಗಿ ತಿಳಿದೇವು. ಅಹಂಕಾರ ಕಳೆಯದಿದ್ದುದರಿಂದಲೇ ಈ ದೇಹ ಬೆನ್ನುಬಿಡದಿದೆ. ಈ ಅಹಂಕಾರದ ದೇಹದ ಸಂಪೂರ್ಣಲಯವೇ ಮೋಕ್ಷ. ಇದನ್ನು ಸಾಧಿಸಿದವನು ಸತ್ಯರೂಪಿ; ಸತ್ಯವೇ ಬ್ರಹ್ಮ ಎಂದರೂ ಸರಿ.

ಆದ್ದರಿಂದಲೇ ದೇವರ ಪ್ರೀತಿಯ ಹೆಸರು ದಾಸಾನುದಾಸ. ನಿರಂತರ ತಪಸ್ಸಿಲ್ಲದೆ ಅಶುದ್ಧ ವಿಚಾರ ಪೂರ್ಣಲಯವಾಗದು. ಇದನ್ನು ಸಾಧಿಸಲು ಒಂದೇದಾರಿ. ಅಶುದ್ಧ ವಿಚಾರ ತಲೆಯಲ್ಲಿ ಬಂದೊಡನೆ ಅದಕ್ಕಿದಿರು ಶುದ್ಧವಿಚಾರವೊಂದನ್ನು ಹೂಡಬೇಕು. ದೈವಾನುಗ್ರಹದಿಂದ ಮಾತ್ರ ಇದು ಸಾಧ್ಯ. ಸಂಪೂರ್ಣ ಶರಣಾಗತಿ, ನಿರಂತರ ಧ್ಯಾನಗಳಿಂದಲ್ಲದೆ ದೈವಾನುಗ್ರಹ ಸಾಧ್ಯವಿಲ್ಲ. ಮೊದಮೊದಲು ಧ್ಯಾನ ಬರೀ ಶಬ್ದೋಚ್ಚಾರ, ತುಟಿಯಲುಗಾಡಿಸುವುದು ಆಗಬಹುದು; ಧ್ಯಾನಕ್ಕೆ ಅಶುದ್ಧ ವಿಚಾರ ಅಡ್ಡಿ ಬರಲೂ ಬಹುದು. ಕೊನೆಗೆ ಕೊನೆ ನಾಲಗೆಯ ಮೇಲಿದ್ದುದೇ ಹೃದಯಕ್ಕಿಳಿದು ಹೃದಯವನ್ನು ತುಂಬಿಬಿಟ್ಟೀತು. ಇನ್ನೂ ಒಂದು ಮಾತನ್ನು ನೆನೆಪಿಡಬೇಕು. ಮನಸ್ಸು ಚಂಚಲವಾಗಿ ಅಲೆದಾಡೀತು; ಅದರ ಜೊತೆಗೆ ಇಂದ್ರಿಯಗಳು ಅಲೆದಾಡದಿರಲಿ. ಮನಸ್ಸಿನ ಜೊತೆಗೆ ಇಂದ್ರಿಯಗಳೂ ವಿವಶವಾಗಿ ಅಲೆದಾಡತೊಡಗಿದರೆ ಆತ್ಮನಾಶ ತಪ್ಪಿದ್ದಲ್ಲ. ಬಹಿರಿಂದ್ರಿಯಗಳನ್ನು ನಿಗ್ರಹಿಸಬಲ್ಲವನು ಎಂದಾದರೊಂದು ದಿನ ತನ್ನ ಅಶುದ್ಧ ವಿಚಾರಗಳನ್ನು ನಿಗ್ರಹಿಸಿಯಾನು..............ಅಶುದ್ಧ ವಿಚಾರಗಳಿಗೆ ಬೆದರಬೇಡ. ಪ್ರಯತ್ನ ಪ್ರಪಂಚಕ್ಕೆ ಮಾತ್ರ ನಾವು ದೊರೆಗಳು. ಫಲಪ್ರಪಂಚದ ಒಡೆತನ ದೇವರದು.......... ನಿನ್ನ ಸುತ್ತಲೂ ಶುದ್ಧ ವಾತಾವರಣ ಬೆಳೆಸಿಕೊಳ್ಳಲು ಏನು ಮಾಡಬೇಕೋ ನೀನು ಬಲ್ಲೆ. ಮಿತಾಹಾರ, ಅಧೋದೃಷ್ಟಿ, ಕಣ್ಣು ಪಾಪ ಮಾಡಿದರೆ ಅದನ್ನು ಕಿತ್ತೀ ಹಾಕಿಬಿಡುವಷ್ಟು ಆತ್ಮ ದಂಡನೆ.'

* * * *

ಇಂಥ ಅನ್ನದಿಂದ ಪೋಷಿತರಾಗಿ ಆತ್ಮಸಂಶೋಧನೆಯನ್ನು ಬೆಳಸಿಕೊಂಡರು. ವರ್ಧಾದ ಸತ್ಯಾಗ್ರಹಾಶ್ರಮವನ್ನು ಮೊದಲಿನಿಂದ ನಡೆಸಿಕೊಂಡು ಬಂದ ಶ್ರೀ ವಿನೋಬಾರ ನಿರಂತರ ಸಹವಾಸ ಇದಕ್ಕೆ ವರ್ಧಕವಾಯಿತು. ಅವರ ಆತ್ಮವಿಶ್ವಾಸ ಅಖಂಡವಾದುದು. ಎಂದಾದರೊಂದು ದಿನ ರಾಷ್ಟ್ರಪತಿಯ ಕಂಟಕ ಕಿರೀಟ ತನ್ನ ತಲೆಯ ಮೇಲೆ ಬಂದರೆ ತಾನು ಆ ಭಾರ ಹೊರಬಲ್ಲೆನೆಂಬ ಧೈರ್ಯ ಅವರಿಗಿತ್ತು. ಆದರೆ ಅಸ್ಪೃಶ್ಯತಾ್ಯಗದ ಬಳಿ ಸಾರಲು ತಾನಿನ್ನೂ ಮಾಡಬೇಕಾದ ಆಧ್ಯಾತ್ಮ ಪ್ರಯಾಣವನ್ನು ನೆನೆದು ಎದೆಗೆಡುತ್ತಿದ್ದರು. ಹಣವಂತರೆಂದಲ್ಲ ಆ ಭಯ; ತಮ್ಮ ಸೊತ್ತಿನ ಒಡೆತನವನ್ನು ಅವರು ಎಂದೋ ತ್ಯಜಿಸಿದ್ದರು. ಆದರೆ ಇನ್ನೂ ಎಷ್ಟೋ ಗುಣ ಬೇಕಾಗಿತ್ತು. ಅಂತೆಯೇ ಎಲ್ಲ ಕಳಂಕವನ್ನು ನಿರ್ಮೂಲ

ಮಾಡಿಕೊಳ್ಳಬೇಕೆಂದು ತಮ್ಮ ಇಡೀ ಬಾಳಿನ ಹಿರಿಯಗೆಲಸವನ್ನು ಕೈಗೊಂಡರು; ಗೋಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡರು. ತಮ್ಮ ಮನೆಯನ್ನು ಬಿಟ್ಟು—ರಾಷ್ಟ್ರಪತಿಗಳಿಗೆ, ಶ್ರೀಮಂತ ಲೋಥಿಯನ್, ಶ್ರೀ ತೈ ಚಿ ತಾ, ಡಾ. ಜಾನ್‌ಮೋಟ್, ಮಿಶ್ರದೇಶದ ನಿಯೋಗಗೋಷ್ಠಿಗಳಿಗೆ ಅತಿಥಿಭವನವಾಗಿದ್ದ ಮನೆ—ಒಂದು ಗುಡಿಸಲಿಗೆ ಗೋಪುರಿಯೆಂದು ಹೆಸರಿಟ್ಟು ಅಲ್ಲಿರಲು ಹೋದರು. ಅಲ್ಲಿ ಸೂಲು ನೂತು, ರಾಜಾ 'ದಿಲೀಪನಂತೆ ಗೋಸಂರಕ್ಷಣೆ ಮಾಡುತ್ತ, ತಮ್ಮ ವಿಚಾರತರಂಗದ, ಕೃತಿಪರಂಪರೆಯ ದಿನಚರಿಯೊಂದನ್ನು ಬರೆಯುತ್ತಿದ್ದರು. ಅವರು ತೀರಿಕೊಂಡ ದಿನ ಗೋಪುರಿಗೆ ನಾವು ಹೋದಾಗ ಅವರ ಕಾಲ ಮುಂದಿನ ಬರೆಮಣೆಯಮೇಲೆ ದಿನಚರಿಯಿತ್ತು. ಆವೊತ್ತಿನವರೆಗೂ ದಿನಚರಿ ಸಂಪೂರ್ಣವಾಗಿ ಬರೆದಿತ್ತು.

ಅವರ ಬಾಳು ಹಾಗೇ ಪೂರ್ಣ, ನಿಯಮಿತ. ಒಳ್ಳೇ ಧೈವಭೀರು. ರಾಜಾ ದಿಲೀಪನಿಗೆ ನಂದಿನಿಯಿದ್ದಂತೆ ತನಗೆ ಗೋಮಾತೆ ಕಾಮಧೇನುವಾಗಲೆಂದು ಗೋಸೇವೆಗೆ ಶರಣುಹೋದರು. ಅವರಿಗೆ ಬಂದ ಸಾವು ಆ ಗೋಮಾತೆಯ ಅನುಗ್ರಹವೋ ಏನೋ ಹೇಳುವುದು ಬಿಗಿ. ಇದ್ದರೂ ಇರಬಹುದು. ಅದಕ್ಕಿಂತ ಬಯಸಬಹುದಾದ ಸಾವು ಮತ್ತಿಲ್ಲ. ತೀರ ಕೊನೆಯ ಗಳಿಗೆಯವರೆಗೂ ತಮ್ಮ ಗೋವು, ತಮ್ಮ ಗೋಪುರಿಗಳನ್ನು ಕುರಿತು ಆಲೋಚಿಸುತ್ತಿದ್ದರು. ಅವರ ಅಂತ್ಯ ಸಮಯ ತೀರ ಆಕಸ್ಮಿಕವಾಗಿ, ಅತಿ ಶೀಘ್ರವಾಗಿ ಬಂತು. ಇದ್ದಕ್ಕಿದ್ದಂತೆ ಅನಂತಮಯಶಾಂತಿಗೆ ಸರಕ್ಕನೆ ಸರಿದರೇನೋ ಎಂಬಂತಿತ್ತು. ಗೋವು ಅವರ ಕಾಮಧೇನು ಆಗಿತ್ತೋ, ಇಲ್ಲವೋ, ತಮ್ಮ ಶರಣ ಜೀವನದಿಂದ ಅವರಂತೂ ಗಾಂಧೀಜಿಯ ಕಾಮಧೇನುವಾಗಿದ್ದರು. ಮೊದಲು ವರ್ಧಾದಲ್ಲಿ, ತರುವಾಯ ಸೇವಾಗ್ರಾಮದಲ್ಲಿ, ಗಾಂಧೀಜೀ ನೆಲೆಸುವಂತೆ ಮಾಡಿದುದು ಅವರೇ. ಗಾಂಧೀಜಿಗೂ ಬಾಹ್ಯ ಜಗತ್ತಿಗೂ ಅವರೇ ತಂತು. ಅವರ ಸಾವಿನಿಂದ ಆ ಸೂತ್ರ ಹರಿದಂತಾಯಿತು; ಗಾಂಧೀಜಿಗೂ ಬಾಹ್ಯ ಜಗತ್ತಿಗೂ ಅಪಾರವಾದ ಕೊರತೆಯುಂಟಾಯಿತು.

೧೬—೨—೪೨ ಮ. ದೇ.

---

## ಒಬ್ಬ ಭಾರತ ಸೇವಕ

'ಭಾರತ ಸೇವಕ ಸಂಘ'ಕ್ಕೆ ಕೆಲವು ಕಾಲ ಸದಸ್ಯನಾಗಿದ್ದ ಹನುಮಂತರಾವು* ಕಾಲವಾದ. ತನ್ನ ಆದರ್ಶಗಳಿಗಾಗಿ ಪ್ರಾಣವನ್ನೆ ಬಲಿಯಾಗಿ ನೀಡಿದವನಾತ. ಅತನಿಗೆ

---

* ಕೋಪಲ್ಲೆ ಹನುಮಂತರಾವು ದೇಶಭಕ್ತ. ಗಾಂಧೀ ಯುಗದ ಆದಿಯಲ್ಲಿ ಆಂಧ್ರದೇಶದಲ್ಲಿದ್ದ ಮಹಾನುಭಾವರಲ್ಲಿ ಒಬ್ಬರು. ಆಂಧ್ರ ಜಾತೀಯ ಕಲಾಶಾಲೆಯನ್ನು ಸ್ಥಾಪಿಸಿ

ಪ್ರಕೃತಿ ಚಿಕಿತ್ಸೆಯಲ್ಲಿ ಬಲವಾದ ನಂಬಿಕೆ. ನಮ್ಮ ಮೈಗೆ ಸಹಜವಾದ ಅನೇಕ ರೋಗಗಳಿಗೆ ಔಷಧ ಕೊಟ್ಟು ಗುಣಪಡಿಸುವ ಪದ್ಧತಿಯಲ್ಲಿ ಆತನಿಗೆ ನಂಬಿಗೆಯಿರಲಿಲ್ಲ. ಪ್ರಕೃತಿ ಚಿಕಿತ್ಸೆಗೆ ಅಲ್ಪಸ್ವಲ್ಪ ಸಹಾಯ ಬೇಕಾದರೆ ಅದಕ್ಕೆ ಲೂಯಿ ಕೂನೆ†ಯ ಜಲಚಿಕಿತ್ಸೆಯೊಂದೇ ಸರಿ, ಬೇರೆ ಯಾವುದೂ ಅಲ್ಲ ಎಂದು ಆತನ ಅಭಿಪ್ರಾಯ. ಈ ಚಿಕಿತ್ಸೆಯ ತತ್ವದಲ್ಲಿ ಆತನಿಗಿದ್ದ ನಂಬಿಗೆಯನ್ನು ಒಂದು ಬಗೆಯ ಧರ್ಮಶ್ರದ್ಧೆ ಎನ್ನುವ ಹಾಗಿತ್ತು. ಅಷ್ಟು ದೃಢ. ಹಳ್ಳಿ ಜನರಲ್ಲಿ ಈ ಪದ್ಧತಿಯನ್ನು ಪ್ರಚಾರ ಮಾಡಿ ಅದು ಬಳಕೆಗೆ ಬರುವಂತೆ ಮಾಡಬೇಕೆಂದು ಆತ ಕನಸು ಕಾಣುತ್ತಿದ್ದ. ಪರರಿಗೆ ಹೇಳುತ್ತಿದ್ದುದನ್ನು ತಾನು ಮಾಡಿ ತೋರಿಸುತ್ತಿದ್ದ ಉತ್ತಮಜೀವಿ ಹನುಮಂತರಾವು. ಒಂದು ವರ್ಷದ ಕೆಳಗೆ ಆತನಿಗೆ ಬಹಳ ಕಾಯಿಲೆಯಾಯಿತು. ಜಲಚಿಕಿತ್ಸೆ ಮಾಡಿದರು. ಗುಣವಾಯಿತೆಂದೇ ಎಲ್ಲರೂ ನಂಬಿದ್ದರು. ವಿಶಾಖಪಟ್ಟಣದಲ್ಲಿ ಆರೈಕೆ ಪಡೆಯುತ್ತಿದ್ದ [illegible] ತಾರೀಖಿನ ದಿನ ತೀರಿಕೊಂಡ. ಕೊನೆಯ ಗಳಿಗೆಯವರೆಗೂ ಆತ ತನ್ನ ಶ್ರದ್ಧೆಯನ್ನು ಬಿಡಲಿಲ್ಲ. ಸಾಯಲಿಕ್ಕೆ ಕೆಲವು ದಿನ ಮೊದಲು ತನ್ನ ದೃಢಶ್ರದ್ಧೆಯನ್ನು ತೋರಿಸುವ ಕಾಗದ ಬರೆದಿದ್ದ. ಆತನ ಹಾಗೆಯೆ ಪ್ರಕೃತಿ ಚಿಕಿತ್ಸಾ ಪಂಥಿಯಾದ ನಾನು ಅತ್ಯಗತ್ಯವಾಗಿ ಕ್ವಯಿನಾ ತೆಗೆದುಕೊಂಡುದನ್ನೂ ಸೂಜಿಮದ್ದು ಚುಚ್ಚಿಸಿಕೊಳ್ಳುತ್ತ ಬಂದುದನ್ನೂ ಆಕ್ಷೇಪಿಸಿದ್ದ. ಅದಕ್ಕಿಂತ ಹೆಚ್ಚು ಮನೋಸ್ಥೈರ್ಯ ನನಗಿರಬೇಕಾಗಿತ್ತೆಂದು ಆತನ ಅಪೇಕ್ಷೆ. ಆಡುವುದಕ್ಕೂ ಮಾಡುವುದಕ್ಕೂ ಪರಸ್ಪರ ವಿರೋಧವೆ ಸಾಮಾನ್ಯವಾಗಿರುವ ಈ ಕಾಲದಲ್ಲಿ, ಸತ್ತರೂ ಚಿಂತೆಯಿಲ್ಲ, ನನ್ನ ಶ್ರದ್ಧೆ ನಾ ಬಿಡೆನೆಂಬ ಹನುಮಂತರಾಯರಂಥ ವ್ಯಕ್ತಿಗಳು ಸಿಗುವುದು ದಣಿದವನಿಗೆ ಹೊಸ ಜೀವ ಬಂದಂತೆ. ಆತನ ಶ್ರದ್ಧೆ [illegible] ಆಗಿರಬಹುದು. ಆದರೇನು? ಆತ ಸತ್ಯಶೋಧಕ. ತಾನು ಸತ್ಯವೆಂದು ನಂಬಿದುದನ್ನು ಅನುಸರಿಸುವುದರಿಂದಲೇ, ಅದರಿಂದ ಮಾತ್ರವೇ, [illegible] ರಾವು ಬದುಕಿಯೇ ಇದ್ದಾನೆ. ಸತ್ತು ಮಣ್ಣಾಗುವ ಮೈಯಲ್ಲಿ ಸಾಯದೆ ಬಾಳುವ ಆತ್ಮವಿದೆ ಎಂಬುದನ್ನು ಆತ ಅರಿತಿದ್ದ.

---

ತೆಲುಗಿನ ಸೀಮೆಗೆ ಹೊಸ ಬೆಳಕು, ಹೊಸ ಸ್ಫೂರ್ತಿ ಕೊಟ್ಟವರು. ಮಚಲೀಪಟ್ಟಣ ಆಗ ಆಂಧ್ರರ ಸ್ವರ್ಗ. ಹನುಮಂತರಾಯರು, ಕೃಷ್ಣರಾವು ಪಂತುಲು, ಪಟ್ಟಾಭಿ- ಮೂರೂ ಮಂದಿ ಅಲ್ಲೇ ಇದ್ದರು. ಆಂಧ್ರ ಚಿತ್ರಕಲೆ, ಆಂಧ್ರ ನವ್ಯ ಸಾಹಿತ್ಯ ಬೆಳೆದದ್ದು ಆ ಬೆಳಕಿನಲ್ಲಿ. ಆಂಧ್ರ ಜಾತೀಯ ಕಳಾಶಾಲೆ ಇನ್ನೂ ನಡೆದಿದೆ.

† ಲೂಯಿ ಕೂನೆ: ಜರ್ಮನ್ ವಿಜ್ಞಾನಿ. ವೈದ್ಯಶಾಸ್ತ್ರ ಬರೀ ವಿಷಶಾಸ್ತ್ರ ಆದುದರಿಂದ ಹಿತಕ್ಕಿಂತ ಅಹಿತವೇ ಹೆಚ್ಚು; ದೇಹಕ್ಕೆ ಬರುವ ದಣಿವಿಗೆಲ್ಲ ನೀರೇ ಮಹದೌಷಧ [illegible] ಎಂಬುದು ಅವನ ಸಿದ್ಧಾಂತ. ತೊಟ್ಟಿ ಸ್ನಾನ, ಆವಿ ಸ್ನಾನ ಅವನ [illegible].

ಹನುಮಂತರಾವು ದೇಶಭಕ್ತ. ತಾಯಿನಾಡಿನ ಸೇವೆಯ ಉತ್ಸಾಹದಲ್ಲಿ ಆತನನ್ನು ಮೀರಿಸಿದವರಿಲ್ಲ. ಆದರೂ ಆತನಲ್ಲಿ ಕಟುತನವಿರಲಿಲ್ಲ. ಆತನಿಗೆ ಅಹಿಂಸೆ ತಂತ್ರವಲ್ಲ, ಧರ್ಮ. ಅಂತಲೆ ನನ್ನ ಪ್ರಥಮ ವರ್ಗದ ಸತ್ಯಾಗ್ರಹಿ (ಶಾಸನೋಲ್ಲಂಘನದಲ್ಲಿ)ಗಳ ಪಟ್ಟಿಯಲ್ಲಿ—ಬರೆದಿಟ್ಟಿರಲಿಲ್ಲವಾಗಲಿ—ಆತನ ಹೆಸರಿತ್ತು. ನೆಲ್ಲೂರಿನಬಳಿ ಒಂದು ಸಂಸ್ಥೆಯನ್ನು ಪ್ರಾರಂಭಿಸಿ, ಖಾದಿ ಕೆಲಸವನ್ನು ಹರಡಿ, ನೆರೆಹೊರೆಯ ಹರಿಜನರ ಸೇವೆ ಮಾಡುತ್ತಿದ್ದ. ಆತನ ನೆರವಿಗೆ ಜೊತೆಕೆಲಸಗಾರರ ಗುಂಪೂ ಒಂದಿತ್ತು. ಆತನ ಹೆಂಡತಿಗೆ—ಈಗಾಕೆ ವಿಧವೆ—ತನ್ನ ಗಂಡನಲ್ಲಿ ಅಪರಿಮಿತ ಭಕ್ತಿ. ಆತ ತೊಟ್ಟ ದಾರಿದ್ರ್ಯ ವ್ರತವನ್ನು, ಒಪ್ಪಿದ ಅತ್ಯಂತ ಸರಲಜೀವನದ ಧರ್ಮವನ್ನು ತಾನೂ ಸ್ವೀಕರಿಸಿ ಆತನಿಗೆ ಬೆಂಬಲವಾಗಿದ್ದಳಾಕೆ.

# ನಾನು ಕಂಡ ಸ್ವಾಮಿಜೀ

ನನಗೆ ಸ್ವಾಮಿಜಿಯ ಪ್ರಥಮ ಪರಿಚಯವಾದುದು ಅವರು ಮಹಾತ್ಮಾ ಮುನಷೀರಾಮರಾಗಿದ್ದಾಗ. ಅದೂ ಪತ್ರವ್ಯವಹಾರದ ಮೂಲಕ. ಆಗ ಅವರು ಕಾಂಗಡಿ ಗುರುಕುಲದ ಯಜಮಾನರಾಗಿದ್ದರು. ಆ ಗುರುಕುಲ ಶಿಕ್ಷಣಪ್ರಪಂಚಕ್ಕೆ ಅವರು ನೀಡಿದ ಸ್ವತಂತ್ರದಾನ. ಸಾಂಪ್ರದಾಯಿಕವಾದ ಪಾಶ್ಚಾತ್ಯಪದ್ಧತಿ ಅವರಿಗೆ ತೃಪ್ತಿಕರವಾಗಲಿಲ್ಲ. ತಮ್ಮ ವಿದ್ಯಾರ್ಥಿಗಳು ವೇದಾಧ್ಯಯನಸಂಪನ್ನರಾಗಬೇಕೆಂದು ಅವರಿಗೆ ಆಸೆ. ಆ ಕಾರಣದಿಂದ ಹುಡುಗರಿಗೆ ಅವರು ಇಂಗ್ಲೀಷಿನಲ್ಲಿ ಪಾಠ ಹೇಳಲಿಲ್ಲ, ಹಿಂದಿಯಲ್ಲಿ ಹೇಳಿದರು. ವಿದ್ಯಾರ್ಥಿದಶೆಯಲ್ಲಿ ಹುಡುಗರು ಬ್ರಹ್ಮಚಾರಿಗಳಾಗಿ ಇರಬೇಕೆಂದು ಅವರ ಬಯಕೆ. ದಕ್ಷಿಣ ಆಫ್ರಿಕಾದ ಸತ್ಯಾಗ್ರಹಿಗಳಿಗಾಗಿ ಆಗ ನಿಧಿ ಸಂಗ್ರಹ ನಡೆದಿತ್ತು. ಯಥಾಮತಿ ಅದಕ್ಕೆ ಕೊಡುವಂತೆ ತಮ್ಮ ಹುಡುಗರನ್ನು ಪ್ರೋತ್ಸಾಹಿಸಿದರು. ಆದರಲ್ಲೂ ಕೂಲಿ ದುಡಿದು ಆ ನಿಧಿಗೆ ಕೊಡುವಂತೆ ಸೂಚಿಸಿದರು. ದಕ್ಷಿಣ ಆಫ್ರಿಕಾ ಸತ್ಯಾಗ್ರಹವು ಕೂಲಿಗಳ ಹೋರಾಟವಲ್ಲವೆ! ಆ ಹುಡುಗರೂ ಸಂದರ್ಭಯೋಗ್ಯವಾಗಿ ನಡೆದುಕೊಂಡರು. ಕೂಲಿದುಡಿದು ಬಂದ ಹಣವನ್ನು ನನಗೆ ಕಳಿಸಿದರು. ಈ ಸಂಗತಿಯನ್ನು ವರ್ಣಿಸಿ ಸ್ವಾಮಿಜೀ ಬರೆದ ಪತ್ರ ಹಿಂದಿ ನುಡಿಯಲ್ಲಿತ್ತು. ನನ್ನ ಪ್ರಿಯ ಭಾಯಿ—ಎಂದು ನನ್ನನ್ನು ಪತ್ರದಲ್ಲಿ ಸಂಬೋಧಿಸಿದ್ದರು. ನಾವು ಒಬ್ಬರನ್ನೊಬ್ಬರು ಅದಕ್ಕೆ ಮೊದಲು ನೋಡಿರಲಿಲ್ಲವಾದರೂ ಅದು ಮಹಾತ್ಮಾ ಮುನಷೀರಾಮರಿಗೂ ನನಗೂ ಗಂಟನ್ನು ಹಾಕಿತು.

ನಮ್ಮಿಬ್ಬರ ನಡುವಿನ ಬೆಸುಗೆ ಅಂಡ್ರೂಸ್. ನಾನು ತಾಯಿನಾಡಿಗೆ ಬಂದಾಗೆಲ್ಲ ಕವಿ ರವೀಂದ್ರ, ಪ್ರಿನ್ಸಿಪಾಲ ರುದ್ರ, ಮಹಾತ್ಮಾ ಮುನಷೀರಾಮರ–ಇವರನ್ನು ಅಂಡ್ರೂಸರ ತ್ರಿಮೂರ್ತಿಗಳೆಂದು ನಾನು ಕರೆಯುತ್ತಿದ್ದೆ–ಪರಿಚಯಮಾಡಿಕೊಳ್ಳಬೇಕೆಂದು ಅಂಡ್ರೂಸ್‌ಗೆ ಬಹಳ ಉತ್ಸುಕತೆ.

ಆ ಪತ್ರ ಬಂದ ದಿನದಿಂದ ನಾವಿಬ್ಬರೂ ಸಹಶೋಧರಾದೆವು. ೧೯೧೫ರಲ್ಲಿ ಅವರ ಪ್ರೀತಿಯ ಗುರುಕುಲದಲ್ಲಿ ಪರಸ್ಪರ ಮುಖ ದರ್ಶನವಾಯಿತು. ಪರಸ್ಪರ ದರ್ಶನವಾದಂತೆ ಒಂದೊಂದು ಸಲಕ್ಕೂ ನಮ್ಮ ಪರಿಚಯ ಗಾಢವಾಯಿತು; ಒಬ್ಬರನ್ನೊಬ್ಬರು ಹೆಚ್ಚಾಗಿ ಅರ್ಥಮಾಡಿಕೊಂಡೆವು. ಪ್ರಾಚೀನ ಭರತವರ್ಷ, ಹಿಂದಿ, ಸಂಸ್ಕೃತಗಳ ಬಗ್ಗೆ ಅವರಿಗೆ ಅಪಾರ ಪ್ರೇಮ. ಅಸಹಕಾರ ಎಂಬುದು ಹುಟ್ಟುವ ಮೊದಲೇ ಅವರು ಅಸಹಕಾರಿ; ನಿಸ್ಸಂದೇಹವಾಗಿ ಸ್ವರಾಜ್ಯ ಬೇಗ ಸಿಗಲಿ ಎಂಬ ಹಂಬಲ ಅವರದು. ಅಸ್ಪೃಶ್ಯತೆ ಕಂಡರೆ ಅವರಿಗೆ ಆಗದು. ಅಸ್ಪೃಶ್ಯೋದ್ಧಾರಕ್ಕಾಗಿ ಅವರು ಹಾತೊರೆಯುತ್ತಿದ್ದರು. ಅವರ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವ ಯಾವ ನಿರ್ಬಂಧವೂ ಮುನಷೀರಾಮರಿಗೆ ಸಹಿಸುತ್ತಿರಲಿಲ್ಲ.

ರೌಲಟ್ ಚಳುವಳಿ ಪ್ರಾರಂಭವಾದಾಗ ಅದನ್ನು ಸ್ವಾಗತಿಸಿದ ವೀರ ಮೊದಲಿಗರಲ್ಲಿ ಅವರೊಬ್ಬರು. ನನಗೆ ಬಹಳ ಅಭಿಮಾನಪೂರ್ಣವಾದ ಕಾಗದ ಬರೆದಿದ್ದರು. ಆದರೆ ಅಮೃತಸರ, ವಿರಾಮಗಾಂ ದುರ್ಘಟನೆಗಳ ತರುವಾಯ ಸತ್ಯಾಗ್ರಹ ನಿಲಿಸುವುದರ ಅರ್ಥ ಅವರಿಗೆ ಮುಂದಟ್ಟಾಗಲಿಲ್ಲ. ಅಲ್ಲಿಂದ ನಮ್ಮ ಅಭಿಪ್ರಾಯಭೇದದ ಕಾಲ ಮೊದಲಾಯಿತು. ಅದರಿಂದ ನಮ್ಮ ಸೋದರವಾತ್ಸಲ್ಯಕ್ಕೇನೂ ಭಂಗ ಬರಲಿಲ್ಲ. ಆ ಭೇದಗಳಿಂದ ಅವರ ಮಗುವಿನಂಥ ಮನಸ್ಸು ನನಗೆ ತಿಳಿಯಿತು. ಪರಿಣಾಮವೇನಾಗುತ್ತೆಂಬುದರ ಲಕ್ಷ್ಯವಿಲ್ಲದೆ ಕಂಡುದನ್ನು ಕಂಡಂತೆ ಆಡುವ ಖಂಡಿತವಾದಿ ಅವರು. ಅವರ ಧೈರ್ಯವೇ ಒಂದು ತಪ್ಪಾಗಿತ್ತು ಒಂದೊಂದು ಸಲ. ತಪ್ಪೇ ಮಾಡಿದರೂ ಧೈರ್ಯವಾಗಿ ಮಾಡಬಲ್ಲ ಎದೆ ಅವರದು. ಕಾಲ ಕಳೆದಂತೆ ನಮ್ಮಿಬ್ಬರ ಮನೋಧರ್ಮದ ಭೇದಗಳು ಚೆನ್ನಾಗಿ ಕಾಣಬಂದವು. ಅದರಿಂದ ಅವರ ಉತ್ತಮಜೀವದ ಪರಿಚಯವೇ ಹೆಚ್ಚು ಹೆಚ್ಚಾಗಿ ಬೆಳೆಯಿತು, ಅಷ್ಟೆ. ಹತ್ತು ಜನ ಕೇಳುವಹಾಗೆ ಆಲೋಚನೆ ಮಾಡುವುದು ತಪ್ಪಲ್ಲ; ಅದು ಉತ್ತಮ ಗುಣ. ಅದು ಸತ್ಯದ ಲಕ್ಷಣ. ಸ್ವಾಮಿಜಿಯವರಿಗೆ ಗಟ್ಟಿಯಾಗಿಯೆ ಆಲೋಚಿಸುವ ರೂಢಿ.

ಬಾರ್ಡೋಲಿಯ ನಿರ್ಧಾರ ಅವರ ಮನಸ್ಸನ್ನೆ ಮುರಿಯಿತು. ನನ್ನ ಆಸೆಬಿಟ್ಟರು. ಬಹಿರಂಗವಾಗಿ, ಬಹಳ ಬಲವಾಗಿಯೆ ಟೀಕಿಸಿದರು, ನನಗೆ ಬರೆದ, ಅಂತರಂಗದ ಪತ್ರಗಳ

ಲ್ಲಿಯೂ ಅದೇ ಧಾಟಿ ; ಇನ್ನೂ ತೀವ್ರ. ಆದರೆ ಅದರ ಜೊತೆಯಲ್ಲಿ ನಮ್ಮ ಪ್ರೀತಿ ವಿಶ್ವಾಸ ಗಳ ಬಗ್ಗೆಯೂ ಅಷ್ಟೇ ಬಲವಾದ ಬರಹ. ಹಾಗೆ ಪತ್ರಗಳಲ್ಲಿ ಪ್ರೀತಿ ತೋರಿಸಿದ ಮಾತ್ರಕ್ಕೆ ಅವರಿಗೆ ತೃಪ್ತಿಯಾಗತಿಲ್ಲ. ಸಂದರ್ಭ ದೊರೆತೊಡನೆ ನನ್ನನ್ನು ಹುಡುಕಿ ಕೊಂಡು ಬಂದು ತಮ್ಮ ಪಕ್ಷವನ್ನು ನನಗೆ ತಿಳಿಸಿ ನನ್ನ ಪಕ್ಷವನ್ನು ತಾವು ತಿಳಿದು ಕೊಳ್ಳಲು ಪ್ರಯತ್ನಪಡುತ್ತಿದ್ದರು. ನನ್ನ ಮೇಲಣ ಭ್ರಾತೃವಾತ್ಸಲ್ಯ ತಮಗೆ ತಗ್ಗ ಲಿಲ್ಲವೆಂದು ನನಗೆ—ಅಗತ್ಯವಿದ್ದರೆ-ವಚನ ಕೊಡಬೇಕೆಂಬುದೇ ಅವರು ಹಾಗೆ ನನ್ನನ್ನು ಹುಡುಕಿಕೊಂಡು ಬರುತ್ತಿದ್ದುದರ ನಿಜವಾದ ಕಾರಣ.

ಆರ್ಯ ಸಮಾಜದ ವಿಷಯವಾಗಿ, ಅದರ ಸಂಸ್ಥಾಪಕರಾದ ಮಹಾಪುರುಷನ ವಿಷ ಯವಾಗಿ ನಾನು ಆಡಿದ ಮಾತಿನಿಂದ ಸ್ವಾಮಿಜಿಗೆ ತುಂಬಾ ನೋವಾಯಿತು. ಆದರೆ ಈ ನೋವನ್ನು ತಡೆದುಕೊಳ್ಳುವಷ್ಟು ಬಲವಾಗಿತ್ತು ನಮ್ಮ ಸ್ನೇಹ. ತಮಗಾದ ಅಪಾ ಯಕ್ಕೆ ಸ್ವಾಮಿಜೀ ಕೆರಳುತ್ತಿರಲಿಲ್ಲ; ಬಲು ಸಹನೆ ತೋರುತ್ತಿದ್ದರು. ಅದೇ ಅಪಾರ ಕ್ಷಮಾಗುಣವನ್ನು ಮಹರ್ಷಿಯ ಇಡೀವ್ಯಕ್ತಿಯ ವಿಮರ್ಶೆಯ ಬಗ್ಗೆಯೂ ತೋರಿ, ಆ ಗುಣವನ್ನಿಲ್ಲಿ ತಳುಕುಹಾಕಿ ಸಮಾಧಾನಕ್ಕೆ ಬರುವುದು ಸಾಧ್ಯವೆಂದು ಅವರಿಗನಿಸಲಿಲ್ಲ. ಮಹರ್ಷಿಯನ್ನಾಗಲಿ ಅವರ ಸಿದ್ಧಾಂತವನ್ನಾಗಲಿ ಯಾರಾದರೂ ವಿಮರ್ಶಿಸಿದರೆ ಅವರಿಗೆ ಸಹಿಸುತ್ತಿರಲಿಲ್ಲ. ಮಹರ್ಷಿಯ ಮೇಲೆ ಅಷ್ಟು ಭಕ್ತಿ ಅವರಿಗೆ.

ಅವರ ಶುದ್ಧಿ ಚಳುವಳಿಗಾಗಿ ಮುಸಲ್ಮಾನ ಪತ್ರಿಕಾ ಪ್ರಪಂಚ ಅವರನ್ನು ಕಠಿನವಾಗಿ ಟೀಕಿಸಿದೆ. ನಾನೇ ಸ್ವಾಮಿಜಿಯ ಸಿದ್ಧಾಂತವನ್ನೊಪ್ಪಲಿಲ್ಲ. ಈಗಲೂ ಒಪ್ಪಲಾರೆ. ಆದರೆ ಅವರ ದೃಷ್ಟಿಯಿಂದ ಆ ಸಿದ್ಧಾಂತಕ್ಕೆ ಸಂಪೂರ್ಣ ಸಮರ್ಥನೆ ಯಿತ್ತು. ನೀತಿ, ನ್ಯಾಯ, ಈ ಎರಡು ಕಟ್ಟೆಗೊಳಗಾಗಿರುವ ತನಕ ತಬಲೀಗಿಗೆ ತೋರಬೇಕೆನ್ನುವ ತಾಳ್ಮೆಯನ್ನು ಶುದ್ಧಿಗೂ ತೋರಿಸಬೇಕು. ಆ ವಿವಾದ ಪರಿ ಶೀಲನೆಗಿದು ಸ್ಥಳವಲ್ಲ. ತಬಲೀಗೂ ಬದಲಾಗಬೇಕು. ಅದಕ್ಕೆ ಪ್ರತಿಯಾದ ಶುದ್ಧಿ ಯೂ ವ್ಯತ್ಯಾಸವಾಗಬೇಕು; ಸಂಪೂರ್ಣವಾಗಿ. ಈಗ ರೂಢಿಯಲ್ಲಿರುವ ಮತಪರಿವ ರ್ತನೆಯ ಪದ್ಧತಿಯಲ್ಲಿ ಅಂತಃಸತ್ವಕ್ಕಿಂತ ಬಾಹ್ಯವೇಷಕ್ಕೆ ಹೆಚ್ಚು ಪ್ರಾಧಾನ್ಯ ಕೊಡ ಲಾಗುತ್ತಿದೆ. ವಿಶಾಲಬುದ್ಧಿಯಿಂದ ಮಾಡಿದ ಸರ್ವಧರ್ಮಾಧ್ಯಯನ ಹೆಚ್ಚಿದಂತೆ ಮತಪರಿವರ್ತನೆಯ ಈಗಿನ ಕೊಳಕು ಪದ್ಧತಿಯಲ್ಲಿ ದೊಡ್ಡ ಕ್ರಾಂತಿಯಾಗುತ್ತದೆ; ಖಂಡಿತ. ಈಗಿನ ರೀತಿ ಒಂದು ಗುಂಪಿನಿಂದ ಮತ್ತೊಂದು ಗುಂಪಿಗೆ ಬರೀ ವರ್ಗ, ಪರಸ್ಪರ ಮತದೂಷಣೆ; ಅದರ ಮೂಲಕ ಹಗೆತನ, ಅಷ್ಟೆ.

ಬುದ್ಧಿಯ ಅಂತರಾರ್ಥವನ್ನು ಅರಿತುಕೊಳ್ಳಬಲ್ಲವಾದರೆ ಹಿಂದೂ ಮುಸಲ್ಮಾನರು ಶಾಂತಿ, ಸ್ವಾತಂತ್ರ್ಯ ಶಕ್ತಿಯನ್ನು ನಮ್ಮ 'ಕಲ್ಯಾಣಕ್ಕಾಗಿಯೆ ಉಪಯೋಗಿಸಬಹುದು.

ಕೆಲವು ದಿನಗಳ ಹಿಂದೆ ಸ್ವಾಮಿಜೀ ಸತ್ಯಾಗ್ರಹಾಶ್ರಮಕ್ಕೆ ಬಂದಿದ್ದರು. ಅದನ್ನು ನೆನೆಯದೆ ನಾನೀ ಜೀವನಸ್ಮೃತಿಯನ್ನು ಮುಗಿಸಲಾರೆ. ನನ್ನ ಮುಸ್ಲಿಮ ಗೆಳೆಯರಿಗೆ ನಾನು ಆಶ್ವಾಸನ ಕೊಡುತ್ತೇನೆ: ಅವರು ಮುಸ್ಲಿಮ ದ್ವೇಷಿಗಳಾಗಿರಲಿಲ್ಲ. ಅನೇಕ ಜನ ಮುಸಲ್ಮಾನರನ್ನು ಅವರು ನಂಬುತ್ತಿರಲಿಲ್ಲ; ನಿಜ. ಆದರೆ ಅವರನ್ನು ದ್ವೇಷಿಸುತ್ತಿರಲಿಲ್ಲ. ಹಿಂದುಗಳನ್ನು ಬಹಳ ಅದುಮಿಬಿಟ್ಟಿದಾರೆಂದೂ, ಅವರು ಧೈರ್ಯಶಾಲಿಗಳಾಗಿ ಆತ್ಮಸಂರಕ್ಷಣೆ ಮಾನಸಂರಕ್ಷಣೆ ಮಾಡಿಕೊಳ್ಳಲು ಸಮರ್ಥರಾಗಬೇಕೆಂದೂ ಸ್ವಾಮಿಜೀ ತಿಳಿದಿದ್ದರು. ಈ ವಿಷಯದಲ್ಲಿ ಬಹುಜನ ತಪ್ಪು ತಿಳಿದುಕೊಂಡಿದಾರೆಂದೂ, ಜನ ತಮ್ಮ ತಲೆಗೆ ಕಟ್ಟಿದ ಅನೇಕ ಸಂಗತಿಗಳಿಗೂ ತಮಗೂ ಸಂಬಂಧವಿಲ್ಲೆಂದೂ ನನಗವರು ಹೇಳಿದರು. ಅವರನ್ನು ಬೆದರಿಸಿ ಭಯಪಡಿಸಬೇಕೆಂದು ಬರೆದಂಥ ಪತ್ರ ಅನೇಕ ಬಂದಿದ್ದವಂತೆ ಅವರಿಗೆ. ನೀವು [illegible] ಪಯಣ ಮಾಡಬೇಡಿ ಎಂದು ಗೆಳೆಯರು ಎಚ್ಚರಿಕೆ ಕೊಟ್ಟಿದ್ದರಂತೆ. ಆದರೆ ಈ ಶ್ರದ್ಧಾವಂತರು 'ದೇವರ ವಿನಾ ಬೇರೇನು ರಕ್ಷಣೆಯದೆ? ಅವನ ಇಚ್ಛೆಯಿಂದಲ್ಲದೆ ಹುಲ್ಲುಕಡ್ಡಿಯೂ ಅಳಿಯದು. ಈ ದೇಹದ ಮೂಲಕ ಸೇವೆ ಮಾಡಿಸುವ ಇಚ್ಛೆ ಅವನಿಗಿರುವತನಕ ಏನೂ ನಡೆಯದು' ಎಂದರು.

ಆಶ್ರಮಕ್ಕೆ ಬಂದಾಗ ಆಶ್ರಮದ ಹುಡುಗ ಹುಡುಗಿಯರಿಗಾಗಿ ಒಂದು ಭಾಷಣ ಮಾಡಿದರು. ಹಿಂದೂ ಧರ್ಮ ಸಂರಕ್ಷಣೆಯಾಗಬೇಕಾದರೆ ನಮ್ಮ ಹೃದಯಾಂತರಾಳದ ಶಕ್ತಿಯಿಂದ, ನಮ್ಮ ಅಂತಃಕರಣಶುದ್ಧಿಯಿಂದ ಎಂದರು. ಧೈರ್ಯವನ್ನೂ ಗುಣವನ್ನೂ ಬೆಳೆಸಲು ಬ್ರಹ್ಮಚರ್ಯ ಅಗತ್ಯವೆಂದು ಒತ್ತಿ ಹೇಳಿದರು.

೬–೧–೩೭

## ಮೂಕಸೇವೆ

ಶ್ರೇಷ್ಠಮಿತ್ರರೂ ಮೂಕ ಸೇವಾ ನಿರತರೂ ಆದವರೊಬ್ಬರ ಸಾವಿನಿಂದ ನನಗೊದಗಿದ ದುಃಖವನ್ನು ಓದುಗರೂ ಹಂಚಿಕೊಳ್ಳಬೇಕೆಂದು ಬೇಡುತ್ತೇನೆ. ಪ್ರಿನ್ಸಿಪಾಲ್ ಸುಶೀಲ-ರುದ್ರರು ಜೂನ್ ೩೦; ಮಂಗಳವಾರ (೧೯೨೫) ತೀರಿಕೊಂಡರು.

ಹಿಂದುಸ್ಥಾನದ ಮುಖ್ಯರೋಗ ಗುಲಾಮಗಿರಿ. ಬ್ಯುರಾಕ್ರಸಿ ಮೂರುಹರಿಸೆ ಕಂದಕ ಕಟ್ಟಿಕೊಂಡು ಭದ್ರಮಾಡಿಕೊಂಡಿದೆ: ಸೇನಾಬಲ; ಅರ್ಥಬಲ, ಅರ್ಥ ಸೂತ್ರ; ಕುಟಿಲತಂತ್ರ. ಈ ಹಗೆಯನ್ನು ಬಹಿರಂಗವಾಗಿ ಇದಿರಿಸಿ ಗುಲಾಮ ಗಿರಿಯನ್ನು ಕಳೆಯಲು ಹೊಡೆದಾಡುವವರಿಗೆ ಮಾತ್ರವೆ ಹಿಂದೂಸ್ಥಾನದಲ್ಲಿ ಗೌರವ, ಮರ್ಯಾದೆ. ಕೇವಲ ರಾಜಕೀಯಕ್ಕಿಂತ ಏನೂ ಕಡಮೆಯಿಲ್ಲದ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಿಸ್ವಾರ್ಥಿಗಳೂ ಕೀರ್ತಿವಿಮುಖರೂ ಆದವರ ಗುರುತೇ ಹಿಂದುಸ್ಥಾನಕ್ಕಿಲ್ಲ.

ಸ್ಟೀಫನ್ ಕಾಲೇಜಿನ ಪ್ರಿನ್ಸಿಪಾಲ ಸುಶೀಲ ರುದ್ರರು ಅಂಥವರು. ಒಳ್ಳೆ ಉಚ್ಚ ತರಗತಿಯ ಶಿಕ್ಷಣಶಾಸ್ತ್ರಜ್ಞರು. ಪ್ರಿನ್ಸಿಪಾಲ ಕೆಲಸದಲ್ಲಿ ಎಲ್ಲರಿಗೂ ಬೇಕಾದವರಾಗಿ ದ್ದರು. ಅವರಿಗೂ ಅವರ ವಿದ್ಯಾರ್ಥಿಗಳಿಗೂ ಇದ್ದ ಸಂಬಂಧ ಒಂದು ಬಗೆಯ ಅಧ್ಯಾತ್ಮ ಸಂಬಂಧ. ಸ್ವಯಂ ಕ್ರಿಸ್ತಾನರಾಗಿದ್ದರೂ ಹಿಂದೂ ಮಹಮ್ಮದೀಯ ಧರ್ಮಗಳ ಬಗೆಗೂ ಅವರ ಹೃದಯದಲ್ಲಿ ತುಂಬ ಅಭಿಮಾನ, ಜೊತೋ ಗೌರವ. ಯೇಸುಕ್ರಿಸ್ತನ ವಿನಾ ಬೇರೆ ಜಗದ್ರಕ್ಷಕರಿಲ್ಲವೆಂದು ನಂಬದವರಿಗೆಲ್ಲ ನರಕವೇ ಗತಿ ಎಂಬ ವೀರಕ್ರಿಸ್ತಾನ ವಲ್ಲ ಅವರದು. ಸ್ವಧರ್ಮ ಗೌರವದಲ್ಲಿ ನಿಷ್ಠೆಯಿದ್ದಷ್ಟೆ ಪರಧರ್ಮದಲ್ಲಿ ಸಹನೆಯೂ ಇತ್ತು. ರಾಜಕೀಯ ವಿಷಯಗಳನ್ನು ಸೂಕ್ಷ್ಮವಾಗಿ ಸಾವಧಾನವಾಗಿ ಅಭ್ಯಾಸ ಮಾಡಿ ದ್ದರು. ತೀವ್ರವಾದಿಗಳ ವಿಷಯದಲ್ಲಿ ತಮಗಿದ್ದ ಅಭಿಮಾನವನ್ನು ಅವರು ಡಂಗೂರ ಹೊಡೆಯುತ್ತಿರಲಿಲ್ಲ; ಗುಟ್ಟಾಗಿ ಇಟ್ಟಿರಲೂ ಇಲ್ಲ.

೧೯೧೫ರಲ್ಲಿ ನಾನು ಸ್ವದೇಶಕ್ಕೆ ಮರಳಿದ ನಂತರ ದೆಹಲಿಗೆ ಹೋದಾಗೆಲ್ಲ ನಾನು ಅವರ ಮನೆಯಲ್ಲಿಯೇ ಇಳಿದುಕೊಳ್ಳುತ್ತಿದ್ದೆ. ರೌಲಟ್ ಶಾಸನ ಸತ್ಯಾಗ್ರಹವನ್ನು ನಾನು ಹೂಡು ವವರೆಗೆ ಎಲ್ಲವೂ ಸುಗಮವಾಗಿತ್ತು. ಅವರಿಗೆ ಉಚ್ಚವರ್ಗದ ಇಂಗ್ಲಿಷ್ ಗೆಳೆಯರು ಎಷ್ಟೋ ಜನ. ಶುದ್ಧ ಇಂಗ್ಲಿಷ್ ಮಿಷನ್ ಅವರದು. ಅವರ ಕಾಲೇಜಿಗೆ ಇವರೇ ಮೊದ ಲನೆ ಹಿಂದೀ ಪ್ರಿನ್ಸಿಪಾಲರು. ಆದ್ದರಿಂದ ನನ್ನ ಅವರ ಆಪ್ತ ಪರಿಚಯ, ಅವರ ಮನೆ ಯಲ್ಲಿಯೆ ನನಗವರು ಮಾಡುತ್ತಿದ್ದ ಆತಿಥ್ಯಗಳಿಂದ ಅವರಿಗೂ ಅವರ ಕಾಲೇಜಿಗೂ ತೊಂದರೆಯಾದೀತೆಂದು ಯೋಚನೆಯಾಯಿತು. ಈ ಕಾರಣದಿಂದ ಬೇರೆ ಕಡೆ ಇಳಿಯ ತೊಡಗಿದೆ. ಆಗ ಅವರಾಡಿದ ಮಾತು ಅವರ ಸ್ವಭಾವಕ್ಕೆ ಮಾದರಿ. 'ನನ್ನ ಧರ್ಮ ಜನರು ತಿಳಿದುಕೊಳ್ಳುವುದಕ್ಕಿಂತ ಗಂಭೀರವಾದುದು. ನನ್ನ ವಿಚಾರ ಕೆಲವು ನನ್ನ ಬಾಳಿಗೆ ಜೀವಾಳದಂತಿವೆ. ಬಹುಕಾಲದ ಗಾಢವಾದ ಪ್ರಾರ್ಥನೆ ಧ್ಯಾನಗಳ ಫಲವಾಗಿ ಅವು ಮೂಡಿವೆ. ನನ್ನ ಇಂಗ್ಲಿಷ್ ಗೆಳೆಯರಿಗೆ ಆ ವಿಚಾರ ಗೊತ್ತು. ಗೆಳೆಯನಂತೆ, ಅತಿಥಿಯಂತೆ, ನಿಮ್ಮನ್ನು ನನ್ನ ಮನೆಯಲ್ಲಿಟ್ಟುಕೊಂಡರೆ ಅವರು ತಪ್ಪು ತಿಳಿಯಲಾರರು. ಒಂದು ವೇಳೆ ಇಂಗ್ಲಿಷ್ ಗೆಳೆಯರಲ್ಲಿ ನನಗಿರುವ ಮಾತುಬಾರಿ ಬೇಕೋ, ನೀವು ಬೇಕೋ,

ಎರಡರಲ್ಲಿ ಯಾವುದಾದರೊಂದನ್ನು ಬಿಡಬೇಕು ಎಂದರೆ ಯಾವುದನ್ನು ಆರಿಸಿಕೊಳ್ಳಬೇಕೋ ನನಗೆ ಗೊತ್ತಿದೆ. ನೀವು ನನ್ನನ್ನು ಬಿಡಕೂಡದು' ಎಂದರು. 'ನನ್ನನ್ನು ನೋಡಲು ನಾನಾತರದ ಗೆಳೆಯರು ಬರುತ್ತಾರಲ್ಲ; ಅವರನ್ನೇನುಮಾಡೋಣ. ನಾನು ದೆಹಲಿಯಲ್ಲಿದ್ದಾಗ ನಿಮ್ಮ ಮನೆ ಸತ್ರವಾಗಬಹುದು' ಎಂದೆ. ಅವರೆಂದರು: 'ನಿಜವಾಗಿ ಹೇಳಬೇಕೆಂದರೆ ನನಗೆ ಅದೆಲ್ಲ ಇಷ್ಟ. ನಿಮ್ಮನ್ನು ಕಾಣಲು ಬರುವ ಗೆಳೆಯರನ್ನು ಕಂಡರೆ ನನಗೆ ಇಷ್ಟ. ನಿಮ್ಮನ್ನು ಜೊತೆಯಲ್ಲಿ ಇರಿಸಿಕೊಂಡರೆ ಅದರಿಂದ ನಾನೂ ಸ್ವಲ್ಪ ದೇಶ ಸೇವೆ ಮಾಡಿದಂತಾಯಿತೆಂದು ನನಗೆ ಸಂತೋಷವಾಗುತ್ತದೆ.'

ಖಿಲಾಫತ್ ಸಮಸ್ಯೆಗೆ ರೂಪುಕೊಟ್ಟು ನಾನು ವೈಸರಾಯರಿಗೆ ಬರೆದ ಪತ್ರ ಹೊಳೆದುದು, ಬರೆದುದು ಪ್ರಿನ್ಸಿಪಾಲ ರುದ್ರರ ಮನೆಯಲ್ಲಿ ಎಂಬುದು ಓದುಗರಿಗೆ ತಿಳಿದಿರಲಿಕ್ಕಿಲ್ಲ. ರುದ್ರರೂ ಆಂಡ್ರೂಸರೂ ಅದನ್ನೋದಿ ಪರಿಶೀಲಿಸಿದವರು. ರುದ್ರರ ಮನೆಯಲ್ಲಿಯೆ ಅಸಹಕಾರ ಮಿಂಚಿದ್ದು, ಮೂಡಿದುದು. ಮೌಲಾನಾಗಳು, ಮುಸಲ್ಮಾನ ಗೆಳೆಯರು, ನಾನು ಸೇರಿದ್ದ ಅಂತರಂಗ ಸಭೆಯಲ್ಲಿ ಅವರು ಸದ್ದಿಲ್ಲದೆ ಬರಿ ಪ್ರೇಕ್ಷಕರಾಗಿದ್ದರು; ಆದರೆ ಆಸಕ್ತಿ ಮಾತ್ರ ವಿಶೇಷ. ಅವರು ಮಾಡಿದ ಸರ್ವಕರ್ಮಕ್ಕೂ ಧರ್ಮವೇ ಮೂಲೋದ್ದೇಶ. ಅಂತಲೆ ಪ್ರಭುತ್ವದ ಭಯ ಅವರಿಗಿರಲಿಲ್ಲ. ಪ್ರಭುತ್ವ ಎಂಬುದು ಬೇಕು, ಅದರಿಂದ ಉಪಯೋಗವಿದೆ, ಅದರ ಗೆಳೆತನವೂ ಸರಿ ಎಂಬುದರಲ್ಲಿ ಅವರದು ಧರ್ಮದೃಷ್ಟಿ. ಅವರ ಬಾಳು-ಬದುಕು ಈ ಸತ್ಯಕ್ಕೆ ನಿದರ್ಶನ. ಅತ್ಯುತ್ತಮ ಜೀವರನ್ನು ತಮ್ಮ ಕಡೆ ಸೆಳೆದು ಕೊಳ್ಳುವ ಕೌಶಲ ರುದ್ರರಿಗಿತ್ತು. ಸಿ. ಎಫ್. ಆಂಡ್ರೂಸರು ನಮಗೆ ರುದ್ರರು ನೀಡಿದ ದಾನ ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಅವರಿಬ್ಬರೂ ಅವಳಿಜವಳಿ ಮಕ್ಕಳಂತೆ. ಅವರ ಗೆಳೆತನ ಆದರ್ಶಸ್ನೇಹಕ್ಕೆ ಉದಾಹರಣೆ. ಪ್ರಿನ್ಸಿಪಾಲ್ ರುದ್ರರಿಗೆ ಇಬ್ಬರು ಗಂಡು ಮಕ್ಕಳೂ ಒಬ್ಬ ಮಗಳೂ ಇದ್ದಾರೆ. ಅವರೆಲ್ಲ ವಯಸ್ಸಿಗೆ ಬಂದು ಬದುಕು ನಡೆಸುತ್ತಿದ್ದಾರೆ. ಉದಾರಚರಿತರಾದ ಅವರ ತಂದೆಯ ಗೆಳೆಯರನೇಕರು ತಮ್ಮ ದುಃಖದಲ್ಲಿ ಭಾಗಿಗಳೆಂಬುದನ್ನು ಅವರು ಬಲ್ಲರು.

೯–೭–೨೫.

# ಡಾರ್ಜಿಲಿಂಗಿನಲ್ಲಿ

ಡಾರ್ಜಿಲಿಂಗಿನಲ್ಲಿ ದೇಶಬಂಧುವಿನೊಡನೆ ನಾನು ಕಳೆದ ಐದು ದಿನಗಳ ಪವಿತ್ರ ಸ್ಮೃತಿಯನ್ನು ಬರೆಯುವುದಾಗಿ ಓದುಗರಿಗೆ ಮಾತು ಕೊಟ್ಟಂತೆಯೆ ಆಗಿತ್ತು. ಆ ಐದು ದಿನ ನನ್ನ ಬಾಳಿನಲ್ಲಿ ಅತ್ಯಮೂಲ್ಯ ಕಾಲವೆಂದು ಹೇಳಿದೇನೆ. ದಿನ ಸವೆದಂತೆ ಅದರ

ಬೆಳೆ ಬೆಳೆಯುತ್ತಿದೆ. ಅದೇಕೆ ಎಂಬುದನ್ನು ನಾನು ಓದುಗರಿಗೆ ಹೇಳಬೇಕು. ಹಿಂದೆ ನಾನು ದೇಶಬಂಧುವಿನ ಮನೆಯಲ್ಲಿಯೆ ಇದ್ದೆನಾಗಲಿ ಆಗ ನಮ್ಮದು ಬರಿ ರಾಜಕೀಯ ಭೆಟ್ಟಿ. ಇಬ್ಬರೂ ನಮ್ಮ ನಮ್ಮ ಕೆಲಸದಲ್ಲಿ ಮುಳುಗಿದ್ದೆವು. ಡಾರ್ಜಿಲಿಂಗಿನಲ್ಲಿ ಹಾಗಿರಲಿಲ್ಲ. ಇದೇ ಬೇರೆ. ಅಲ್ಲಿ ದೇಶಬಂಧು, ನಾನು ಇಬ್ಬರೇ. ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ನಾನು ಬರೀ ಮಾತುಕತೆಗಾಗಿಯೆ ಹೋಗಿದ್ದೆ. ನಾನೂ ಡಾರ್ಜಿಲಿಂಗಿಗೆ ವಿಶ್ರಾಂತಿಗಾಗಿಯೆ ಹೋಗುತ್ತೇನೆಂಬುದು ಬರಿ ನೆಪ ಮಾತ್ರ. ಹಿಮಾಲಯ ಪರ್ವತ ತರಂಗ ಮನಸೆಳೆಯುತ್ತಿತ್ತಾಗಲಿ, ದೇಶಬಂಧು ಅಲ್ಲಿರದಿದ್ದರೆ ನಾನೇನು ಅಲ್ಲಿಗೆ ಹೋಗುತ್ತಿರಲಿಲ್ಲ.

ಈಚೆಗೆ ನನಗೆ ಅವರು ಬರೆಯಲು ಮೊದಲು ಮಾಡಿದ ಸೀಸದ ಕಡ್ಡಿಯ ಚೀಟಿ ಒಂದರಲ್ಲಿ 'ಜೋಕೆ! ನೀವು ಈಗ ಇರುವುದು ನನ್ನ ಅಧಿಕಾರದ ಸೀಮೆಯಲ್ಲಿ. ಸ್ವಾಗತ ಸಮಿತಿಯ ಅಧ್ಯಕ್ಷ ನಾನು; ತಿಳಿಯಿತೆ. ನಿಮ್ಮ ಪ್ರವಾಸದಲ್ಲಿ ಡಾರ್ಜಿಲಿಂಗನ್ನು ಸೇರಿಸಲೇಬೇಕು. ಇದು ನನ್ನ ಹುಕುಂ' ಎಂದು ಬರೆದರು. ಆ ಸವಿಬರೆಹದ ಚೀಟಿಗಳನ್ನು ನಾನು ಕಾದಿಟ್ಟಿದ್ದರೆ ಚೆನ್ನಾಗಿತ್ತು. ನನ್ನ ದೌರ್ಭಾಗ್ಯಕ್ಕೇನು ಮಾಡಲಿ! ನನ್ನಲ್ಲಿದ್ದ ನೂರಾರು ಕಾಗದ ಪತ್ರ ಹೋದ ದಾರಿಗೇ ಇವೂ ಹೋದವು. ನನ್ನ ಜೊತೆಯಲ್ಲಿ ವರ್ಕಿಂಗ್ ಕಮಿಟಿ ಜನ ಇದ್ದಾರೆ; ಹೇಗೆ ಎಂದು ನಾ ಬೇಡಿದೆ. 'ಹಾಗಾದರೆ ಎಲ್ಲರೂ ಬನ್ನಿ. ಅವರಿಗೆ ನಾನೆಲ್ಲ ಸರಿಯಾದ ವಸತಿ ಮಾಡುತ್ತೇನೆ. ಬಂಗಾಲ ಪ್ರಾಂತ ಕಾಂಗ್ರೆಸ್ ಕಮಿಟಿ ಅವರ ಗಾಡಿ ವೆಚ್ಚ ಕೊಡುತ್ತದೆ. ನಾನವರಿಗೆ ಆ ರೀತಿ ತಂತಿ ಕೊಡುತ್ತೇನೆ'. ಇದು ಅವರ ತಂತಿಯ ಉತ್ತರ. ವರ್ಕಿಂಗ್ ಕಮಿಟಿಯನ್ನು ಡಾರ್ಜಿಲಿಂಗಿಗೆ ಕರೆದೊಯ್ಯುವುದು ಸಾಧ್ಯವಾಗಲಿಲ್ಲವಾಗಲಿ, ಕಮಿಟಿಯ ಕೆಲಸ ಮುಗಿದ ಕೂಡಲೆ ಆದಷ್ಟು ಬೇಗ ನಾನು ಬರುವುದಾಗಿ ತಿಳಿಸಿದೆ. ಅದೇ ರೀತಿ ಹೋದೆ. ನಾನು ಹೋದದ್ದು ೨ ದಿನದ ಸಲುವಾಗಿ. ನಮ್ಮ ಜೊತೆಯಲ್ಲಿ ೫ ದಿನ ನಿಲ್ಲಿಸಿಕೊಂಡುಬಿಟ್ಟರವರು. ಆಸಾಮು ಪ್ರಾಂತದ ಪ್ರವಾಸವನ್ನು ಮುಂದಕ್ಕೆ ಹಾಕುವಂತೆ ಶ್ರೀ ಫೂಕನರಿಗೆ ಶ್ರೀ ವಾಸಂತೀ ದೇವಿಯಿಂದ ಬರೆಸಿದರು. ಬಂಗಾಲದ ಪ್ರವಾಸವನ್ನು ತಾವೇ ಮೂರು ದಿನ ಮುಂದಕ್ಕೆ ಹಾಕಿದರು. ಈ ವಿವರವನ್ನೆಲ್ಲ ಹೇಳುವ ಉದ್ದೇಶ ಇಷ್ಟೆ: ನಾವಿಬ್ಬರೂ ಕೂಡಿ ಕಲೆತು ಇರಬೇಕೆಂದು ನಮಗಿದ್ದ ಆಸೆ, ಉತ್ಸಾಹ ತೋರಿಸಲಿಕ್ಕೆ. ನಮಗೆ ತಿಳಿಯದೆಯೆ ನಮ್ಮ ಹಿಂದೆ ಕಾದಿದ್ದು, ಬೇಗನೆ ಬರಲಿದ್ದ ದೇಶಬಂಧುವಿನ ದೀರ್ಘನಿದ್ರೆ ನಮ್ಮ ಅಂತರಂಗ ಮಿಲನಕ್ಕೆ ದಾರಿ ಮಾಡಿದಂತಿತ್ತು.

ರೋಗವನ್ನು ದಾಟಿ ಆರೈಕೆ ಪಡೆಯುತ್ತ ಮಲಗಿದ್ದರು ದಾಸರು. ಅವರಿಗಷ್ಟೆ ಉಪಚಾರ ಬೇಕಾಗಿತ್ತು. ಅಂಥವರಲ್ಲೂ ನನ್ನ, ನನ್ನ ಸಂಗಡಿಗರ ಅನುಕೂಲ್ಯದ ಸಣ್ಣ

ಪುಟ್ಟ ವಿವರಗಳನ್ನು ಕೂಡ ಅವರು ಗಮನಿಸುತ್ತಿದ್ದರು. ಅವರದು ಭಾರಿ ಕೈ; ಏನೇ ಮಾಡಲಿ ದೊಡ್ಡ ಪ್ರಮಾಣ. ಗುಡ್ಡದ ಕೆಳಗಿನಿಂದ ನಾಲ್ಕು ಮೇಕೆ ತರಿಸಿದ್ದರು. ಒಂದು ಹೊತ್ತು ಕೂಡ ನನಗೆ ಹಾಲು ತಪ್ಪದೆ ಇರಲಿ ಎಂದು ಅವರ ಮನಸ್ಸು. ತಂಗಿ ವಾಸಂತಿ ದೇವಿಯ ಒಲವಿನಾತಿಥ್ಯದ ಪರಿಚಯ ನನಗಿತ್ತು. ಡಾರ್ಜಲಿಂಗಿನಲ್ಲಿ ದೇಶಬಂಧುವಿನ ಸ್ವಂತ ಅತಿಥ್ಯೋಪಚಾರದ ಭಾಗ್ಯ ನನಗೆ ಲಭಿಸಿತು. ಅದರಲ್ಲಿ ಡಂಭಾಚಾರವೇನೂ ಇರಲಿಲ್ಲ. ಆದರ ಸತ್ಕಾರ ಆತಿಥ್ಯಗಳು ಅವರ ಗುಂಪಿನ ಮುಖ್ಯಲಕ್ಷಣ. ಆ ಗುಂಪಿನವರ ಆತಿಥ್ಯದ ದುಂದುಗಾರಿಕೆಯ ಕತೆ, ಕೆಲವು ವಿಲಕ್ಷಣವಾದವನ್ನೂ ಹೇಳಿದರು. ತಮ್ಮ ವಿರೋಧಿಗಳನ್ನು ಕಂಡರೆ, ಹೊಸ ಜನರನ್ನು ಕಂಡರೆ ದಾಸರಿಗೆ ಎಷ್ಟು ಆದರವೂ ಡಾರ್ಜಲಿಂಗಿನಲ್ಲಿಯೆ ನನಗೆ ತಿಳಿದದ್ದು. ಬಂಗಾಲದಲ್ಲಿ ಖಾದೀ ಪ್ರಚಾರಕ್ಕಾಗಿ ನಾವು ಸಿದ್ಧಮಾಡಿದ್ದ ಯೋಜನೆಯನ್ನು ಚರ್ಚಿಸಲು ಅವರ ಸೂಚನೆಯಂತೆ ಖಾದೀ ಪ್ರತಿಷ್ಠಾನದ ಸತೀಶ ಬಾಬುಗೆ ಹೇಳಿಕಳಿಸಲಾಯಿತು. ಸತೀಶಬಾಬುವನ್ನು ಎಲ್ಲಿ ಇಳಿಸೋಣ ಎಂದು ನಾನು ಕೇಳಿದೆ. 'ಯಾಕೆ, ಇಲ್ಲೇ' ಎಂದರವರು. 'ನಮ್ಮ ಗುಂಪು ಬಹಳವಾಗಿ ಹೋಗಿದೆ; ಇಲ್ಲೆಲ್ಲಿದೆ ಸ್ಥಳ? ಇಲ್ಲ' ಎಂದೆ ನಾನು. 'ಉಂಟು! ಬೇಕಾದರೆ ಅವರು ನನ್ನ ಕೊಠಡಿಯಲ್ಲೆ ಇರಲಿ' ಎಂದು ಬಂತು ಉತ್ತರದ ಬಾಣ. ಇತ್ತ ನನಗೆ ಅವರ ಚಿಂತೆ, ಇತಿಮಿತಿಗಾಣದ ದುಡಿತಕ್ಕೆ ಸಿಕ್ಕಿದ್ದ ಅವರ ಸಹಧರ್ಮಿಣಿಯ ಚಿಂತೆ; ಅವರಿಗೋ ಸತೀಶಬಾಬುವಿನ ಅನುಕೂಲದ ಚಿಂತೆ. 'ತಮ್ಮ ವಿಷಯದಲ್ಲಿ ನನ್ನದು ವಿರೋಧಾಭಿಪ್ರಾಯವೆಂದು ಸತೀಶಬಾಬು ತಿಳಿದಿದ್ದಾರೆ. ಆತ ನನಗೆ ಅಷ್ಟಾಗಿ ಪರಿಚಿತರಲ್ಲ. ಉಳಿದ ಗೆಳೆಯರ ಬಗ್ಗೆ ನನಗಷ್ಟು ಚಿಂತೆಯಿಲ್ಲ. ಸತೀಶಬಾಬು ನನ್ನನ್ನು ತಪ್ಪು ತಿಳಿದುಕೊಂಡಿದ್ದಾರೆ. ಅವರು ಇಲ್ಲೇ ಇರಲಿ' ಎಂದರು.

ನಾವು ಎಷ್ಟೋ ಮಾತಾಡಿದೆವು. ಅದನ್ನೆಲ್ಲ ಇಲ್ಲಿ ಬರೆಯಲಾರೆ. ಅದೊಂದು ಆಧ್ಯಾತ್ಮಿಕ ಚರ್ಚೆಯಾಗಿ ಬೆಳೆಯಿತು. ಚರ್ಚೆಯಲ್ಲ; ಪ್ರವಚನ. ತಾವು ಆಗ ಮಾಡುತ್ತಿದ್ದ ಕೆಲಸ, ಮೈ ಗುಣವಾದ ಮೇಲೆ ತಾವು ಮಾಡಬೇಕೆಂದಿದ್ದ ಕೆಲಸ, ಎಲ್ಲವನ್ನೂ ಒಂದೇ ಧಾರೆಯಾಗಿ ಕೊನೆಗಾಣದ ಪ್ರವಾಹದಂತೆ ಹೇಳಿದರು. ಈ ಪ್ರವಚನದಿಂದ ಆಳವಾದ ಅವರ ಆಧ್ಯಾತ್ಮ ಮನೋಧರ್ಮ ನನಗೆ ತಿಳಿದುಬಂತು. ಅದಕ್ಕೆ ಮುಂಚೆ ನನಗದು ಗೊತ್ತಿರಲಿಲ್ಲ. ಬಂಗಾಲಿ ಮಹಾಪುರುಷರನೇಕರಿಗಿದ್ದಂತೆ ಇವರಿಗೂ ಆಧ್ಯಾತ್ಮವು ಪ್ರಧಾನವೃತ್ತಿಯೆಂದು ನನಗನಿಸಿರಲಿಲ್ಲ. ನಾಲ್ಕು ವರ್ಷದ ಕೆಳಗೆ ಗಂಗಾತೀರದಲ್ಲೊಂದು ಗುಡಿಸಲು ಕಟ್ಟುವ ಮಾತನ್ನು ಅವರಾಡಿದಾಗಲೂ, ಸಸೂನ್ ಆಸ್ಪತ್ರಿಗೆ ನನ್ನನ್ನು ನೋಡಲು ಬಂದಾಗ ಅದೇ ಮಾತನ್ನೆ ಮತ್ತೆ ಹೇಳಿದಾಗಲೂ ಅದನ್ನು ಕೇಳಿ ನನ್ನೊಳಗೆ ನಾನೆ ನಕ್ಕಿದ್ದೆ. 'ನೀವು ಗುಡಿಸಲು ಕಟ್ಟಿದರೆ ನನಗೂ ಅದರಲ್ಲಿ ಸ್ವಲ್ಪ ಸ್ಥಳ ಕೊಡಬೇಕು' ಎಂದು ವಿನೋದಮಾಡಿದೆ. ಡಾರ್ಜಲಿಂಗಿನಲ್ಲಿ ಗೊತ್ತಾಯಿತು ನನ್ನ ತಪ್ಪು. ರಾಜಕೀಯಕ್ಕಿಂತ ಇದರಲ್ಲಿಯೆ ಅವರಿಗೆ ಹೆಚ್ಚು

ಉತ್ಸಾಹ, ಬಲು ಪ್ರೀತಿ. ರಾಜಕೀಯಕ್ಕವರು ಬಂದದ್ದು ಸಂದರ್ಭ ವಶದಿಂದ: ಅಷ್ಟೆ.

ನಮ್ಮ ಮಾತುಕತೆಯಲ್ಲಿ ರಾಟಿಯೆ ಮಧ್ಯ ಬಿಂದು. ದಿನಚರಿಯಲ್ಲೂ ಅಷ್ಟೆ. ಮನೆಯಲ್ಲಿ ಒಂದು ನೂಲುವ ಸಂಘವೆ ಆಗಿತ್ತು. ಮಹಾದೇವ, ಸತೀಶಬಾಬು, ನಾನು ಮೂವರೂ ಕಲಿಸುವವರು. ದೇಶಬಂಧುವಿಗೆ ಕಲಿಸುವ್ವದರಲ್ಲಿ ಮೂವರಿಗೂ ಪಾಲಿತ್ತು. ಪಟ್ನಾದಲ್ಲೇ ಪಾಠ ಪ್ರಾರಂಭವಾಗಿತ್ತು. ಉಪಾಧ್ಯಾಯನೊಬ್ಬನನ್ನು ಕಳಿಸಿರೆಂದು ರಾಜೇಂದ್ರ ಬಾಬುಗೆ ಹೇಳಿದ್ದರು. ಆಗ ದಾಸರಿಗೆ ಬಹಳ ಕಾಯಿಲೆ; ಹೆಚ್ಚು ಕಲಿಯಲಾಗಲಿಲ್ಲ. ಡಾರ್ಜಲಿಂಗಿನಲ್ಲಿ ಅವರಿಗೆ ಹೆಚ್ಚು ಆಸೆ ಕಂಡಿತ್ತು. ಎಡಭುಜ ನೋಯುತ್ತಿತ್ತು; ಆ ನೋವು ಇಳಿದ ಮೇಲೆ ಸರಿಯಾಗಿ ಕಲಿಯುತ್ತೇನೆ ಎಂದರು. "ಆದರೆ ಕೈಗೆಲಸದಲ್ಲಿ ನಾ ಬಲು ದಡ್ಡ; ನನ್ನ ಹೆಂಡತಿಯನ್ನು ಕೇಳಿರಿ ಬೇಕಾದರೆ, ನಾನು ಬಲು ಪರಾಧೀನ' ಎಂದರು. 'ಹೌದು. ತಮ್ಮ ಪೆಟ್ಟಿಗೆ ಬೀಗ ತೆಗೆಯಲಿಕ್ಕೂ ನನ್ನನ್ನೆ ಕರೆಯುತ್ತಾರೆ' ಎಂದರು ವಾಸಂತೀದೇವಿ. 'ಹೆಂಗಸರು, ನೀವು ಗಂಡಸರಿಗಿಂತ ಒಳ್ಳೇ ಚತುರೆಯರು. ಇಂಥ ಸಣ್ಣ ಪುಟ್ಟ ಮಾತಿನಲ್ಲಿಯೂ ನಿಮ್ಮ ಗಂಡನನ್ನು ಪರಾಧೀನರಾಗಿ ಮಾಡಿ ನಿಮ್ಮ ಕೈಯೊಳಗಿಟ್ಟುಕೊಳ್ಳುತ್ತೀರಲ್ಲ' ಎಂದೆ. ದೇಶಬಂಧುವಿನ ನಗೆಯುಕ್ಕಿಗೆ ಮನೆಯೆ ಬೀಳುವಂತಾಯಿತು.

ಅವರಿಗೆ ಮನಸ್ಸು ತುಂಬಿ ಅಳಲಿಕ್ಕೂ ಬರುತ್ತಿತ್ತು; ಹೊಟ್ಟೆ ತುಂಬ ನಗಲಿಕ್ಕೂ ಬರುತ್ತಿತ್ತು. ಅವರ ಹೆಂಡತಿಯು ಹಾಗೆಯೆ ಅವರೂ ಏಕಾಂತವಾಗಿ ಅಳುತ್ತಿದ್ದರು. ಇಷ್ಟು ದುಃಖಜಾಳದಲ್ಲಿ ಮುಳುಗಿದ್ದರೂ ವಾಸಂತೀದೇವಿ ತನ್ನ ಗಂಡನಿಗೆ ಕೇವಲ ಇಷ್ಟಮಿತ್ರರಾದವರ ಮುಂದೆ ಕೂಡ ದುಃಖ ತೋರಿಕೊಳ್ಳಲು ಒಪ್ಪಿಲ್ಲ. ಸಾವಿರಾರು ಜನರ ನಡುವೆ ನಗೆಯಾಡಿ, ಅವರ ಮೇಲೆ ತಮ್ಮ ನಗೆಯ ಹೊಂಬಿಸಿಲು ಹರಿಸಬಲ್ಲವರು ದೇಶಬಂಧು. ನಗೆಯಿಂದಲೆ ನಮ್ಮ ಗಂಭೀರ ಚರ್ಚೆ ಪ್ರಾರಂಭವಾದದ್ದು. ಆ ದೊಡ್ಡ ಮನೆಯೊಳಗಿದ್ದವರಿಗೆಲ್ಲ ನಮ್ಮ ಆ ನಗೆ ಕೇಳಿಸಿರಬೇಕು. ನನಗೆ ಪದ್ಮಾಸನಹಾಕಿ ಕೂಡುವುದು ರೂಢಿ. ಇದನ್ನವರು ಬಲ್ಲರು. ಅವರು ತಮ್ಮ ಹಾಸಿಗೆಯಲ್ಲಿ ಒರಗಿಕೊಂಡಿದ್ದರು; ನಾನು ಕುರ್ಚಿಯಲ್ಲಿ ಕೂತಿದ್ದೆ. ಕುರ್ಚಿಯಲ್ಲಿ ಕಾಲಿಳಿಯಬಿಟ್ಟು ನಾ ಪಡುತ್ತಿದ್ದ ಅವಸ್ಥೆ, ಅವರಲ್ಲಿ ಪದ್ಮಾಸನ ಹಾಕಿಕೊಂಡದ್ದು—ಅವರಿಗೆ ನೋಡಲಾಗಲಿಲ್ಲ. ತಮ್ಮ ಮಂಚದ ಮೇಲೆ ತಮ್ಮೆದಿರಿಗೆ ಒಂದು ದಿಂಬು ಹಾಕಿಸಿ, ಖಾದಿ ದುಪ್ಪಟಿ ಹಾಸಿ ಮೆತ್ತೆಯಹಾಗೆ ಮಾಡಿ, ಅದರ ಮೇಲೆ ನನ್ನನ್ನು ಕೂಡಿಸಿದರು. 'ಇದನ್ನು ನೋಡಿ ನನಗೇನು ನೆನಪಾಯಿತು ಗೊತ್ತೆ ?' ಅವರಿದಿರುಬದಿರು ಸಂಕೋಚವಾಗಿ ಕೂತು ನಾ ಕೇಳಿದೆ. 'ಸುಮಾರು ಹತ್ತು ವರ್ಷ ಹಿಂದಿನ ಮಾತು. ನನ್ನ ಮದುವೆಯಾದಾಗ ನಾನೂ ನನ್ನ ಹೆಂಡತಿ ಇಬ್ಬರೂ ಹೀಗೇ ಇದಿರುಬದಿರು ಕೂತಿದ್ದೆವು. ಪಾಣಿಗ್ರಹಣವಾಗೋಣ ಈಗ

ಬಾಕಿ. ವಾಸಂತೀದೇವಿ ಏನೆನ್ನುತ್ತಾಳೊ ಇದಕ್ಕೆಲ್ಲ!' ಎಂದೆ. ಆ ಮನೆ ನಗೆಹೊನಲಿನಿಂದ ಮಾರ್ಮೊಳಗಿತು. ಮತ್ತೆಂದೂ ಕೇಳಿಸಲಾರದಾನಗೆ; ಅಯ್ಯೋ!

೧೬–೭–೨೫

# ಒಬ್ಬ ಮೂಕಸೇವಕ

ಸಾಬರಮತಿಯ ಸತ್ಯಾಗ್ರಹಾಶ್ರಮದ ನಿವಾಸಿಗಳೆಲ್ಲರೂ ಇಂದು ಚೆದರಿಹೋಗಿದ್ದಾರೆ. ಅವರೆಲ್ಲರೂ ತೊಟ್ಟಿರುವ ಮೂಕಸೇವೆಯ ವ್ರತವೊಂದೇ ಅವರನ್ನು ಒಂದಾಗಿ ಪೋಣಿಸಿ ಹಿಡಿದಿರುವ ಸೂತ್ರ; ಅಷ್ಟೆ. ಅವರಲ್ಲೊಬ್ಬ, ಛೋಟೇಲಾಲ ಜೈನ, ಆತ್ಮಹತ್ಯೆ ಮಾಡಿಕೊಂಡನೆಂಬ ಸುದ್ದಿ ಕೇಳಿ ನಾ ನಿಶ್ಚೇತನನಾದೆ. ಕೀರ್ತಿಶೇಷ ಮಗನಲಾಲ ಗಾಂಧಿಯ ತರುವಾಯ ಮೌನಸೇವೆಯ ಸಂಪೂರ್ಣ ಆತ್ಮಸಮರ್ಪಣದ ಗುರಿ ಛೋಟೇಲಾಲನಲ್ಲಿ ರೂಪುಗೊಂಡಷ್ಟು ಮತ್ತಾರಲ್ಲೂ ಆಗಿರಲಿಲ್ಲ. ಸದ್ದಿಲ್ಲದೆ ಸೇವೆಮಾಡುವುದರಲ್ಲಿ ಅವನಿಗಿದ್ದ ಅಪರಿಮಿತ ಆಸಕ್ತಿಯನ್ನು ವರ್ಣಿಸಲು ತಕ್ಕ ನುಡಿ ನನಗೆ ಬಾರದು. ಬಹಿರಂಗವೆಂದರೆ ಅವನಿಗಂಜಿಕೆ. ಯಾರಿಗೂ ತಿಳಿಯದಂತೆ ಬದುಕಿಬಾಳಿ ಸೇವೆಮಾಡುವುದರಲ್ಲಿ ಅವನಿಗೆ ಬಲು ಪ್ರೀತಿ. ಎಡಗೈ ಮಾಡಿದುದು ಬಲಗೈಯರಿಯದು—ಎಂಬ ನುಡಿ ಅವನ ವಿಷಯದಲ್ಲಿ ನಿಜವಾಗಿತ್ತು. ಅವನ ಬಂಧುಬಳಗದವರು ಅವನನ್ನು ನೋಡಲು ಬಂದುದಾಗಲಿ, ಅವನು ಅವರನ್ನು ನೋಡಲು ಹೋದುದಾಗಲಿ ನಾ ಕಾಣೆ. ಬಂಧುಬಳಗದ ಮಾತನ್ನೆ ಅವನು ಯಾರಿದಿರಿಗೂ ಎತ್ತುತ್ತಿರಲಿಲ್ಲ. ಅವರಾರೋ, ಎಲ್ಲಿದಾರೋ ಈಗಲೂ ನಾನರಿಯೆ.

ನನ್ನ ಕೈಕಾಲಿನಂತೆಯೆ, ಭುಜಬಲವಾಗಿ ಇರುವ ಸಂಗಡಿಗರ ಗುಂಪೊಂದು ನನ್ನ ಪಾಲಿಗಿರುವುದು ನನ್ನ ಭಾಗ್ಯ. ಅವರು ಮನವಾರೆ ನೀಡಿದ ಭಕ್ತಿಪೂರ್ಣ ಸಹಕಾರವಿಲ್ಲದಿದ್ದರೆ ನಿಸ್ಸಹಾಯನಾಗಿಬಿಡುತ್ತಿದ್ದೆ ನಾನು. ಆ ಗುಂಪಿನಲ್ಲಿ ಛೋಟೇಲಾಲ ಮುಖ್ಯ. ಎಂಥ ಕಠಿನವಾದ ಕೆಲಸವಾದರೂ ಹಿಂದೆಗೆಯದ ಸರ್ವತೋಮುಖ ಪ್ರವೃತ್ತಿ ಅವನದು. ಬಹು ಭಾಷಾ ಪ್ರವೀಣ. ಅದು ಅವನ ಹುಟ್ಟುಗುಣ. ರಾಜಪುತಾನದವನಾದುದರಿಂದ ಹಿಂದಿ ಅವನಿಗೆ ತಾಯಿನುಡಿ. ಅದರ ಜೊತೆಗೆ ಅವನಿಗೆ ಗುಜರಾತಿ, ಮರಾಠಿ, ಬಂಗಾಲಿ, ತಮಿಳು, ಸಂಸ್ಕೃತ, ಇಂಗ್ಲೀಷು ಚೆನ್ನಾಗಿ ಬರುತ್ತಿದ್ದವು. ಉರ್ದು ಲಿಪಿಯೂ ಬರುತ್ತಿತ್ತು. ಹೊಸದೊಂದು ನುಡಿಯನ್ನಾಗಲಿ ಹೊಸ ಕೆಲಸವನ್ನಾಗಲಿ ಬಲು ಬೇಗನೆ ಕಲಿತು ಅದರಲ್ಲಿ ಪ್ರವೀಣನಾಗುವ ಕೌಶಲ ಬೇರೆಲ್ಲೂ ನಾ ಕಾಣೆನು. ಸಾಬರಮತಿ ಆಶ್ರಮದ ಅಂಥ ಸದಸ್ಯರಲ್ಲಿ ಒಬ್ಬ ಅವನು. ಆಶ್ರಮದ ಎಲ್ಲ ಕಾರ್ಯವಿಭಾಗಗಳಲ್ಲಿಯೂ ಸರಾಗವಾಗಿ ಕೆಲಸಮಾಡಿದ, ಅವನು ಮುಟ್ಟಿದ ಕೆಲಸವೆಲ್ಲ

ಮಟ್ಟಸ, ಮಾಟ. ಹಿಡಿದ ಕೆಲಸಕ್ಕೊಂದು ಮೆರುಗು ಕೊಡುತ್ತಿದ್ದ. ಅಡಿಗೆ ಕೆಲಸವಾಗಲಿ ಶೌಚಕೂಪ ಬಳಿಯುವುದಾಗಲಿ, ನೂಲುವುದಾಗಲಿ ನೇಯುವುದಾಗಲಿ, ಲೆಕ್ಕ ಬರೆಯುವುದಾಗಲಿ ಭಾಷಾಂತರ ಮಾಡುವುದಾಗಲಿ, ಪತ್ರವ್ಯವಹಾರವಾಗಲಿ, ಯಾವುದಾದರೂ ಸರಿಯೆ ಅವನಿಗೆಲ್ಲವೂ ಒಂದೇ; ಸರಾಗ. ಮಗನಲಾಲ ಬರೆದ 'ವಸತಾಶಾಸ್ತ್ರ'ದಲ್ಲಿ ಇವನೂ ಪಾಲುಗಾರ.

ಕೆಲಸ ಕಷ್ಟವಾದಷ್ಟೂ ಛೋಟೆಲಾಲನಿಗೆ ಹುಮ್ಮಸ್ಸು. ಅಂಥದ್ದೇ ಅವನಿಗೆ ಪ್ರೀತಿ. ಅದನ್ನೆ ಬಯಸುತ್ತಿದ್ದ. ಒಮ್ಮೆ ಕೆಲಸ ಹಿಡಿದರಾಯಿತು, ಅದು ಮುಗಿವತನಕ ವಿಶ್ರಾಂತಿಯಿಲ್ಲ. ದಣಿವೆಂಬುದನ್ನು ಅರಿಯದ ಶಕ್ತಿ ಅದು. ಕೈಗೊಂಡ ಕೆಲಸವನ್ನು ತನ್ನ ಸರ್ವಶಕ್ತಿಯಿಂದಲೂ ಮಾಡಿ, ಪುನಃ ಇನ್ನೊಂದು ಕೆಲಸಕ್ಕಾಗಿ ದಣಿವಿಲ್ಲದವನಂತೆ ಸಿದ್ಧವಾಗುತ್ತಿದ್ದ. ಬೇಸರ, ಬಳಲಿಕೆ ಎರಡು ಪದಗಳೂ ಅವನ ನಿಘಂಟಿನಲ್ಲಿರಲಿಲ್ಲ. ಸೇವೆ ಮಾಡಬೇಕಲ್ಲದೆ ಸೇವೆ ಮಾಡಿಸಿಕೊಳ್ಳಬಾರದೆಂಬುದು ಅವನ ಪಂಥ. ವರ್ಧಾದಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಸ್ಥಾಪಿತವಾದಾಗ ಮೊಟ್ಟಮೊದಲು ತಾನು ಗಾಣವಾಡಲು ಕಲಿತು, ಮಗನವಾಡಿಯಲ್ಲಿ ಗಾಣದ ಏರ್ಪಾಡು ಮಾಡಿದ. ನೆಲ್ಲು ಸುಲಿಯಲು ಮರದ ಬೀಸುವಕಲ್ಲನ್ನು ರೂಢಿಗೆ ತಂದವನು ಅವನೆ. ಮಗನವಾಡಿಯಲ್ಲಿ ಜೇನುಹುಳ ಸಾಕುವುದನ್ನು ಪ್ರಾರಂಭ ಮಾಡಿದವನೂ ಅವನೇ. ಅವನಿಲ್ಲದೆ ಇಂದು ನನ್ನ ಕೈ ಮುರಿದಂತಾಗಿದೆ, ಮನಸ್ಸು ಗಾಸಿಗೊಂಡಿದೆ ತಾಯ್ತನದೊಲವಿನಿಂದ ಅವನು ಕಾಪಾಡಿದ್ದ ಜೇನು ನೊಣಗಳಿಗೂ ಹೀಗೆಯೆ ಅನಿಸುತ್ತಿರಬೇಕು; ತಿಳಿದುಕೊಳ್ಳುವ ಸಾಧನ ನಮಗಿಲ್ಲ, ಅಷ್ಟೆ. ಅವನಹಾಗೆ ಅಷ್ಟು ಪ್ರೀತಿಯಿಂದ ಅವನ್ನು ಇನ್ನಾರು ಕಾಪಾಡುವರೊ ಕಾಣೆ. ಅವನ್ನು ಸಾಕುವುದೆಂದರೆ ಅವನಿಗೊಂದು ಹುಚ್ಚೇ ಆಗಿತ್ತು. ಅವನು ಮಾಡುತ್ತಿದ್ದ ಸಂಶೋಧನಾ ಪ್ರಯೋಗದಲ್ಲಿ ವಿಷಮಶೀತಜ್ವರ ತಗುಲಿ ಅವನನ್ನೆ ಕೊನೆಗಾಣಿಸಿತು. ಆರೇಳುದಿನ ಹಾಸಿಗೆ ಹಿಡಿದಿದ್ದನೋ ಇಲ್ಲವೊ, ಪರರಿಗೆ ಭಾರವಾಗಿ ಬದುಕಬೇಕಲ್ಲ ಎಂಬ ಚಿಂತೆ ಅವನಿಗೆ ದುಸ್ಸಹವಾಯಿತು. ಮಂಗಳವಾರ ರಾತ್ರಿ ಎಲ್ಲರೂ ಮಲಗಿದಮೇಲೆ ಮಗನವಾಡಿ ಭಾವಿಯಲ್ಲಿ ಹಾರಿಕೊಂಡು ಪ್ರಾಣಬಿಟ್ಟ. ಈ ದಿನ, ಬುಧವಾರ ಸಂಜೆ ೪ ಘಂಟೆಗೆ ಹೆಣ ತೇಲಿತು. ನಾನಿಲ್ಲಿ ಸೇವಾಗ್ರಾಮದಲ್ಲಿ ಈ ಸಾಲು ಬರೆಯುತ್ತಿರುವಾಗ— ೮ ಘಂಟೆಗೆ—ಅಲ್ಲಿ ವರ್ಧಾದಲ್ಲಿ, ಅವನ ಮೈಗೆ ದಹನ ಕ್ರಿಯೆ ನಡೆಯುತ್ತಿದೆ.

ಆತ್ಮಹತ್ಯೆ ಮಾಡಿಕೊಂಡುದಕ್ಕಾಗಿ ಛೋಟೇಲಾಲನನ್ನು ನಿಂದಿಸುವ ಮನಸ್ಸೆ ನನಗಿಲ್ಲ. ಅವನು ಹೇಡಿಯಲ್ಲ. ಮಾಡಬಾರದ ಕೆಲಸ ಯಾವುದನ್ನೂ ಮಾಡಿರಲಿಲ್ಲ. ಕಷ್ಟಬಂದಾಗ ನಗಬಲ್ಲ ಸಾಮರ್ಥ್ಯ ಅವನದು. ತನಗೆ ಒಬ್ಬರು ಉಪಚಾರ ಮಾಡಬೇಕಾಗಿ ಬಂತಲ್ಲ ಎಂಬ ಭಾವನೆಯಲ್ಲದೆ ಅವನೀ ಆತ್ಮಾಹುತಿಗೆ ಬೇರೆ ಕಾರಣ ನನಗೆ ತೋರದು. ಅದೂ ಒಂದು ಸೂಕ್ಷ್ಮವಾದ ಅಹಂಕಾರವೇ ನಿಜ. ಈ ಅಹಂಕಾರ ಅವನಲ್ಲಿತ್ತು; ಪಾಪ, ಇದೆಯೆಂಬುದನ್ನು ಅವನು ಅರಿಯ.

೧೯೧೯ರ ಚಳವಳಿ ಪಿತೂರಿ ವ್ಯವಹಾರದಲ್ಲಿ ಅವನ ಹೆಸರು ಬಂತು. ಆಗ ಅವನಿಗೆ ಶಿಕ್ಷೆಯಾಗಲಿಲ್ಲ, ಬಿಟ್ಟುಬಿಟ್ಟರು. ಯಾವಾಗಲೋ ನನ್ನ ಲೇಖನ ಕೆಲವನ್ನು ಓದಿದ. ಅದರಿಂದ ಅವನ ದೃಷ್ಟಿ, ಅವನ ಮನಸ್ಸು ಬದಲಾದವು. ನನ್ನ ದಕ್ಷಿಣ ಆಫ್ರಿಕಾದ ಜೀವನವನ್ನು ಚೆನ್ನಾಗಿ ಅಭ್ಯಾಸ ಮಾಡಿದ. ಹಿಂಸಾಕ್ರಾಂತಿಯ ಪೂಜಾರಿಯಾಗಿದ್ದವನು ಅಹಿಂಸಾವಲಂಬಿಯಾದ. ಅವನು ತನ್ನ ಹಿಂಸಾ ಪಥವನ್ನು ಹಾವು ಪರೆ ಬಿಡುವಂತೆ ಪೂರ್ಣವಾಗಿ ಬಿಟ್ಟಿದ್ದ. ಆದರೆ ಸ್ವಭಾವದಲ್ಲಿ ಆಳವಾಗಿ ನಾಟಿಕೊಂಡಿದ್ದ ಕೋಪ ಅಹಂಕಾರಗಳನ್ನು ಮಾತ್ರ ಪೂರ್ಣವಾಗಿ ಗೆಲ್ಲಲಾಗಲಿಲ್ಲ. ತನ್ನ ಪ್ರಾಣವನ್ನೆ ಬಲಿಗೊಟ್ಟು ಅವನ್ನು ಗೆದ್ದನೇನು ಈಗ ?

ಸಾಯುವಾಗ ಅವನಿಗೆ ೪೨ ವರ್ಷ. ಅವನ ಸಾವಿನಿಂದ ನನ್ನ ಋಣ ಹೆಚ್ಚಾಗಿದೆ. ಅವನಲ್ಲಿ ನಾನು ಬಹಳ ಆಶೋತ್ತರವಿಟ್ಟುಕೊಂಡಿದ್ದೆ. ಅವನಲ್ಲಿ ಎಳ್ಳಷ್ಟು ದೌರ್ಬಲ್ಯ ಕಂಡರೂ ನಾನು ಸಹಿಸುತ್ತಿರಲಿಲ್ಲ. ನನ್ನ ಅಸಹನೆಯ ಬಾಧೆಯನ್ನು ಅವನು ಪದೇ ಪದೇ ತಡೆದುಕೊಳ್ಳಬೇಕಾಗಿತ್ತು. ಅವನೂ ಇನ್ನೂ ಒಬ್ಬಿಬ್ಬರು ಮಾತ್ರವೇ ಅದನ್ನು ತಡೆದುಕೊಂಡಿದಾರೆ. ಛೋಟೇಲಾಲನಂತೂ ಒಮ್ಮೆಯಾದರೂ ತುಟಿಪಿಟಕ್ಕನಲಿಲ್ಲ. ಅವನಿಗೀ ಅಗ್ನಿಪ್ರವೇಶದ ಸಂಕಟ ಕೊಡಲು ನನಗೇನಧಿಕಾರವಿತ್ತು ! ಹಿಂದು-ಮುಸ್ಲಿಮ ಸೌಹಾರ್ದಕ್ಕೋ, ಗೋರಕ್ಷಣೆಗೋ ಅಸ್ಪೃಶ್ಯತೆಗೋ, ಎಂದಾದರೊಂದು ದಿನ ಅವನನ್ನು ಬಲಿದಾನವಾಗಿ ಅರ್ಪಿಸಿ ಅವನ ಋಣ ತೀರಿಸಿಕೊಳ್ಳಬೇಕೆಂದು ಮಾಡಿದ್ದೆ. ನಾವು ರೂಪಿಸಿಕೊಂಡ ಸ್ವರಾಜ್ಯದ ಮಹಾಯಜ್ಞದಲ್ಲಿ ಇವು ಕೆಲವು ಮಂಟಪ, ಕೆಲವು ಹೋಮಕುಂಡ ; ಈ ಅಧಿಕಾರಕ್ಕೆ ತಕ್ಕ ಜನ ನನಗೆ ಗೊತ್ತಿದ್ದ ಹಾಗೆ ಬಹಳಿಲ್ಲ. ಎಲ್ಲೋ ಕೆಲವರು. ಅವರಲ್ಲಿ ಛೋಟೇಲಾಲನದು ಮೊದಲ ಸಾಲು.

ಅವನಂಥ ಮೂಕ ಸೇವಕರದೊಂದು ಸೇನೆಯೇ ಬೇಕು ನಾಡಿಗೆ. ನನ್ನ ಪಾಲಿಗೆ ಸ್ವರಾಜ್ಯವೆಂದರೂ ರಾಮರಾಜ್ಯವೆಂದರೂ ಒಂದೇ. ಅದು ಸಿಗಬೇಕಾದರೆ ಬಾಯಿಮಾತಲ್ಲ. ಛೋಟೇಲಾಲನ ಜೀವನದ ಈ ಸೂಕ್ಷ್ಮ ಪರಿಚಯ ನಮ್ಮ ಸ್ವಾತಂತ್ರ್ಯ ಸಮರದಲ್ಲಿ ಉಳಿದವರಿಗೆ ಸ್ಫೂರ್ತಿಕೊಡಲಿ.

೧೧—೯—೨೭.

## ಪ್ರಫುಲ್ಲಚಂದ್ರ ರಾಯ್

ಡಾಕ್ಟರ್, ಸರ್ ಪ್ರಫುಲ್ಲ ಚಂದ್ರರಾಯ್ ೬೬ ವರುಷದ ಮುದುಕರು. ಚಿಕ್ಕಂದಿನಿಂದಲೂ ಅವರು ದೃಢಾಂಗರೇನಲ್ಲ. ಆದರೂ ಇವೊತ್ತಿಗೆ ಪ್ರಪಂಚದ ರಸಾಯನ

ಹಾಸ್ಯಪ್ರಜ್ಞರಲ್ಲಿ ಅವರು ಮುಂದಾಳು. ತಾರುಣ್ಯದ ಉತ್ಸಾಹ, ಚುರುಕು, ಬಲ ಅವರಿಗೆ ಇನ್ನೂ ಹಾಗೆಯೇ ಇದೆ. ಅವರ ಸೇವಾ ಶಕ್ತಿಯಂತೂ ಎಂದಿಗೂ ತೃಪ್ತಿಯಾಗದ, ತೀರದ ಹಂಬಲ. ಕಷ್ಟದಲ್ಲಿದ್ದವರಿಗೆ, ಅದರಲ್ಲಿಯೂ ವಿದ್ಯಾರ್ಥಿಗಳಿಗೆ, ಸಹಾಯ ಮಾಡುವುದರಲ್ಲಿ ಎತ್ತಿದ ಕೈ. ನಾಸ್ತಿ ಎಂಬುದೆ ಇಲ್ಲ. ಬಲು ಧಾರಾಳ. ಈ ಧಾರಾಳ ಗುಣವನ್ನು ಕಂಡು ಎಷ್ಟೋ ಜನ ಅವರಿಗೆ ಮೋಸಮಾಡುವುದೂ ಉಂಟು. ಅವರಿಗೆ ಅದು ಲಕ್ಷ್ಯವೇ ಇಲ್ಲ. ತಮ್ಮ ಪುಂಡ ಗಾರಿಕೆಯ ಬಗ್ಗೆ ಅವರಿಗೆ ಸಂತೋಷ. ಸ್ವಲ್ಪ ಹಿಂದುಮುಂದು ವಿಚಾರಿಸಬಾರದೆ ಎಂದು ಯಾರಾದರೂ ಹೇಳಿದರೆ ಅವರ ಸಹವಾಸಕ್ಕೆ ಕೈ ಮುಗಿದೇಬಿಡುತ್ತಾರೆ. ರಾತ್ರಿ ಹೊತ್ತಾಗುವವರೆಗೂ ದುಡಿಯುತ್ತಾರೆ. ಅವರ ಮನೆ ಬಾಗಿಲು ಯಾವಾಗಲೂ ತೆಗೆದೇ ಇರುತ್ತದೆ; ಯಾರನ್ನು ಕಂಡರೂ ಅವರ ಮುಖದಲ್ಲಿ ನಗೆಸೂಸುತ್ತದೆ. ಅಷ್ಟೆಲ್ಲ ದುಡಿದರೂ ಅವರು ಇಷ್ಟು ಚುರುಕಾಗಿ ಹೇಗಿರುತ್ತಾರೋ? ಅವರ ಜೊತೆಗಾರರು ಎಷ್ಟೋ ಜನ ಅಗಲಿ ಕಣ್ಣು ಮುಚ್ಚಿದಾರೆ; ಕೆಲವರು ಕೈಕಾಲು ಆಡದೆ ಮೂಲೆ ಹಿಡಿದಿದಾರೆ. ಈ ಪ್ರಶ್ನೆಗೆ ಅವರೇ ಉತ್ತರ ಕೊಟ್ಟಿದಾರೆ ತಮ್ಮ ಆತ್ಮಕಥೆಯ ಎರಡನೆ ಭಾಗದಲ್ಲಿ. ಬಲು ಸೊಗಸಾಗಿದೆ ಆ ಪ್ರಕರಣ. ಮೊನ್ನೆ ನನ್ನ ಹುಟ್ಟಿದ ಹಬ್ಬದ ದಿನ ಪತ್ರ ಬರೆದರು. ಆ ಸುದ್ದಿಯನ್ನೆತ್ತಿದೆ (ಅವರಿಗದು ಚಿಲ್ಲರೆ ವಿಷಯ; ನನಗಿಂತ ಹಿರಿಯರಲ್ಲವೆ ಅವರು!) ಮೇಲೆ ಹೇಳಿದ ಪ್ರಕರಣವನ್ನು ನನಗೆ ಕಳಿಸಿಕೊಟ್ಟರು. ಎಷ್ಟು ಉತ್ಸಾಹಪೂರ್ಣವಾಗಿದೆ ಆ ಬರಹ! ಮುದುಕರಿಗೆ, ಮುಪ್ಪಾದವರಿಗೆ-ಹುಡುಗರಿಗೂ—ಅದು ಚಲೋ ರಾಮಬಾಣ. ತಮ್ಮ ಆಯುಸ್ಸಿನಲ್ಲಿ ಕಾಣಬರುವ ಈ ತಾರುಣ್ಯಕ್ಕೆ ಅವರು ಹೇಳಿರುವ ಕಾರಣಗಳ ಜೊತೆಗೆ ನಾನು ಇನ್ನೆರಡು ಸೇರಿಸುತ್ತೇನೆ: ಅವರ ಹುಡುಗಾಟ, ಅವರ ಬಿಚ್ಚು ಹಾಸ್ಯ. ಚವನಾಳಜೀ, ಹಾಳಕಾಲಿಯಂಥ ಭೀಮಕಾಯರಾದ ಗೆಳೆಯರ ಬೆನ್ನ ಮೇಲೆ ನಾಚಿಕೆಯಿಲ್ಲದೆ ಏರಿ, ನಾನಾ ತರದ ವಿನೋದ, ಹಾಸ್ಯ ಮಾಡುವುದನ್ನು ನಾ ಬಲ್ಲೆ. - ತಾವೊಬ್ಬ ದೊಡ್ಡ ಶಿಕ್ಷಣಿ, ದೊಡ್ಡದೊಂದು ವಿಜ್ಞಾನಶಾಲೆಯ ಯಜಮಾನ, ಆ ಕಾಲೇಜಿನ ಸಂಸ್ಥಾಪಕ ಇದು ಯಾವುದೂ ಆ ಗಳಿಗೆಯಲ್ಲಿ ಅವರಿಗೆ ನೆನಪಿರದು.

● ● ●

# ಆಚಾರ್ಯ ಆನಂದಶಂಕರ ಧ್ರುವ

ಆಚಾರ್ಯ ಆನಂದ ಶಂಕರ ಧ್ರುವರ ಸಾವು ಗುಜರಾತಿಗಲ್ಲದೆ ಮಹಾಕೋಸಲಕ್ಕೂ ಅಪಾರ ನಷ್ಟ. ಆಚಾರ್ಯರು ಬಹುಕಾಲ ಕಾಶೀ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದರು. ಅವರಂಥವರನ್ನು ಮತ್ತೆ ಪಡೆಯುವುದು ಅಸಂಭವವಲ್ಲದಿದ್ದರೂ ದುಸ್ಸಾಧ್ಯ. ಕೊನೆಯತನಕ ಅವರು ಅಧ್ಯಯನ [illegible]ಧ್ಯಾಪನಗಳಲ್ಲೇ ನಿರತರಾಗಿದ್ದರು. ಎಷ್ಟೋ ಜನ ವಿದ್ಯಾರ್ಥಿಗಳಿಗೆ ನಿಜವಾದ ಗ[illegible]ರು [illegible]ಸಂತಾ

ಯಿತು ಈಗ. ಆಚಾರ್ಯರು ಮಾಲವೀಯರ ಬಲಗೈಯಾಗಿದ್ದರು. ಮಾಲವೀಯರ ಶೋಕವಂತೂ ವರ್ಣಿಸಲಳವಲ್ಲ ; ಊಹಿಸಬೇಕಾದ್ದು. ಆದರೆ ಆನಂದಶಂಕರ ಧ್ರುವರು ಬರೀ ಶಿಕ್ಷಣ ಪಂಡಿತರಾಗಿರಲಿಲ್ಲ. ನಾನಾ ವಿಷಯಗಳಲ್ಲಿ ಅವರಿಗೆ ಅಭಿರುಚಿಯಿತ್ತು. ರಾಜಕೀಯದಲ್ಲಿ ತೀವ್ರ ಶ್ರದ್ಧೆ ; ಸ್ವರಾಜ್ಯದಲ್ಲಿ ಭಕ್ತಿ ; ಸಂಘ ಸುಧಾರಣೆಯಲ್ಲಿ ಆಸಕ್ತಿ. ವೈದಿಕರೊಡನೆ ಸ್ನೇಹವಾಗಿದ್ದರು. ಎಷ್ಟೋ ವೈದಿಕ ಕರ್ಮಗಳನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಆದರೆ ಅವರ ಬುದ್ಧಿ ಹೃದಯ ಸುಧಾರಣೆಯ ಕಡೆಯೇ ಇತ್ತು. ಸುಧಾರಣೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ನಿರ್ಭಯವಾಗಿ ಹೇಳುತ್ತಿದ್ದರು. ಅವರ ಸಂಸ್ಕೃತ ಪಾಂಡಿತ್ಯ, ಧರ್ಮಶಾಸ್ತ್ರಾಧ್ಯಯನ ಅಗಾಧವಾದ್ದು. ಆದಕ್ಕಾಗಿ ಜನ ಅವರನ್ನು ವಿಶೇಷವಾಗಿ ಗೌರವಿಸುತ್ತಿದ್ದರು. ಹಿಂದೂಧರ್ಮಕ್ಕೆ ಒಳ್ಳೇ ಪ್ರತಿನಿಧಿ ಆಚಾರ್ಯರು. ನನಗಂತೂ ಅವರ ಸಹಾಯ ಸದಾ ಸಿಗುತ್ತಿತ್ತು. ಬಂಡವಾಳಗಾರರು, ಕೂಲಿಕಾರರು ಇಬ್ಬರಿಗೂ ಗೆಳೆಯರಾಗಿ, ಎರಡೂ ಕಡೆಯ ವಿಶ್ವಾಸ ಸಂಪಾದಿಸಿ, ಅಹಮದಾಬಾದಿನಲ್ಲಿ ಎರಡು ಗುಂಪಿಗೂ ಬಹಳ ಸೇವೆ ಸಲ್ಲಿಸಿದರು. ದುಃಖಗೊಂಡ ಆಚಾರ್ಯರ ಕುಟುಂಬದ ಜನಕ್ಕೆ ಆಚಾರ್ಯರ ಪರಿಚಯವಿದ್ದವರೆಲ್ಲರ ಸಾನುಭೂತಿಯಿದೆ.

## ರಾಯಚಂದ್ ಭಾಯಿ

ಇಪ್ಪತ್ತೈದಕ್ಕಿಂತ ಹೆಚ್ಚಿರಲಿಲ್ಲ ಆತನ ವಯಸ್ಸು. ಆದರೂ ಪ್ರಥಮ ದರ್ಶನದಲ್ಲೇ ಆತ ಮಹಾಜ್ಞಾನಿ, ಉತ್ತಮ ಗುಣವಂತ ಎಂದು ನನಗೆ ಮನದಟ್ಟಾಯಿತು. ಆತ ಶತಾವಧಾನಿಯೂ ಆಗಿದ್ದ. ನನ್ನ ಐರೋಪ್ಯ ಭಾಷಾಭಾಂಡಾರವನ್ನೆಲ್ಲ ಬಿಚ್ಚಿ ನಾನು ಹೇಳಿದ ಪದಗಳನ್ನು ಮತ್ತೆ ಹೇಳಬೇಕೆಂದೆ. ನಾನು ಹೇಳಿದ ಕ್ರಮದಲ್ಲೇ ಒಂದೂ ತಪ್ಪಿಲ್ಲದಂತೆ ಆತ ಹೇಳಿದ. ಆತನ ಆ ಅದ್ಭುತ ಶಕ್ತಿಗೆ ಮರುಳಾಗಲಿಲ್ಲವಾಗಲಿ ಮೆಚ್ಚಿದೆ. ನನ್ನ ಮೇಲೆ ನಿಜವಾಗಿ ಪ್ರಭಾವಬೀರಿದ್ದು ಬೇರೆ; ನನಗಾಮೇಲೆ ತಿಳಿಯಿತು ಅದು: ಆತನ ವಿಶಾಲ ಶಾಸ್ತ್ರಜ್ಞಾನ, ನಿಷ್ಕಳಂಕ ಚಾರಿತ್ರ್ಯ, ಆತ್ಮಸಾಕ್ಷಾತ್ಕಾರ ದಾಹ. ಕ್ರಮೇಣ ನನಗೆ ತಿಳಿಯಿತು, ಆತ ಬದುಕಿದ್ದುದೇ ಅದಕ್ಕೆ. ಮುಕ್ತಾನಂದನ ಈ ಶ್ಲೋಕ ಸದಾ ಆತನ ಬಾಯಲ್ಲಿರುತ್ತಿತ್ತು ; ಆತನ ಹೃದಯ ಫಲಕದಲ್ಲಿ ಕೊರೆದಿತ್ತು.

ರಾಯಚಂದ್ ಭಾಯಿಯ ಲೆಕ್ಕಾಚಾರ ಲಕ್ಷಗಟ್ಟಲೆ. ಅವರದು ರತ್ನಪಡಿ ವ್ಯಾಪಾರ. ವ್ಯವಹಾರದ ಎಂಥ ಜಟಿಲ ಪ್ರಶ್ನೆಯೂ ಆತನಿಗೆ ಕಷ್ಟವಾಗಿರಲಿಲ್ಲ. ಆದರೆ ಇವು ಯಾವುದೂ ಆತನ ಬಾಳ ತಿರುಗಣಿಯಾಗಿರಲಿಲ್ಲ. ದೇವರನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಉತ್ಕಟೇಚ್ಛೆ ಆತನ ಬಾಳಬಯಕೆ. ಆತನ ಅಂಗಡಿ ಮೇಜಿನಮೇಲೆ ಕೆಲವು ಧರ್ಮ

ಗ್ರಂಥ, ಆತನ ದಿನಚರಿ ಯಾವಾಗಲೂ ಇದ್ದೇ ಇರುತ್ತಿದ್ದವು. ವ್ಯಾಪಾರ ಮುಗಿದ ಕೂಡಲೆ ಆ ಪುಸ್ತಕವನ್ನೊ ದಿನಚರಿಯನ್ನೊ ತೆರೆಯುತ್ತಿದ್ದ. ಪ್ರಕಟವಾಗಿರುವ ಆತನ ಲೇಖನರಾಶಿಯೆಲ್ಲ ಬಹುಮಟ್ಟಿಗೆ ಆತನ ದಿನಚರಿಯಿಂದ ತೆಗೆದದ್ದು. ಭಾರಿ ಭಾರಿ ವ್ಯಾಪಾರದಮಾತು ಮುಗಿಸಿದೊಡನೆಯೆ ಆಧ್ಯಾತ್ಮದ ಗುಹ್ಯವಿಚಾರಗಳ ಬಗ್ಗೆ ಬರೆಯಬಲ್ಲ ಜೀವ ವ್ಯಾಪಾರಿಯಾಗಲಾರ; ನಿಜವಾದ ಸತ್ಯಶೋಧಕ. ಹೀಗೆ ಆತ ವ್ಯಾಪಾರದ ನಡುವೆ ಆಧ್ಯಾತ್ಮ ಚಿಂತನೆಯಲ್ಲಿ ಮಗ್ನನಾಗಿದ್ದುದನ್ನು ಒಂದೆರಡು ಸಲವಲ್ಲ, ಅನೇಕಬಾರಿ, ಪದೇ ಪದೇ ನಾನು ನೋಡಿದೇನೆ. ತನ್ನ ಸಮಚಿತ್ತವನ್ನು ಆತ ಕಳೆದುಕೊಂಡುದನ್ನು ನಾನೆಂದೂ ನೋಡಲಿಲ್ಲ. ನನಗೂ ಆತನಿಗೂ ಯಾವ ವ್ಯವಹಾರ ಬಂಧನವಾಗಲಿ ಸ್ವಾರ್ಥವಾಗಲಿ ಇರಲಿಲ್ಲ. ಆದರೂ ನಮ್ಮ ಬಾಂಧವ್ಯ ಬಹಳ ಆಪ್ತವಾಗಿತ್ತು. ಆಗ ನಾನಿನ್ನೂ ಕೆಲಸವಿಲ್ಲದ ವಕೀಲ. ಆದರೂ ಆತ ನನ್ನೊಡನೆ ಗಂಭೀರವಾದ ಧರ್ಮ ಜಿಜ್ಞಾಸೆಯ ಮಾತನಾಡುತ್ತಿದ್ದ. ನಾನು ಕತ್ತಲಲ್ಲಿ ತೊಳಲಾಡುತ್ತಿದ್ದೆ. ಧರ್ಮಮಂಥನದಲ್ಲಿ ನನಗಂಥ ತೀವ್ರ ಆಸಕ್ತಿಯೇನಿರಲಿಲ್ಲ. ಆದರೂ ಆತನ ಸಂಭಾಷಣೆಯಲ್ಲಿ ಮಗ್ನನಾಗಿ ಹೋಗುತ್ತಿದ್ದೆ ಅಂಥ ಮೋಹಕತೆಯಿತ್ತು ಆತನ ಮಾತಿನಲ್ಲಿ. ಅಲ್ಲಿಂದೀಚೆ ಎಷ್ಟೋ ಜನ ಧರ್ಮ ಗುರುಗಳನ್ನೂ ಉಪದೇಶಕರನ್ನೂ ಕಂಡಿದೇನೆ. ಬೇರೆ ಬೇರೆ ಧರ್ಮಗಳ ಮುಖಿಗಳ ದರ್ಶನ ಮಾಡುವ ಯತ್ನಮಾಡಿದೇನೆ. ಆದರೆ ರಾಯಚಂದ್ ಭಾಯಿ ನನ್ನ ಮೇಲೆ ಪ್ರಭಾವ ಬೀರಿದಷ್ಟು ಮತ್ತಾರೂ ಬೀರಲಿಲ್ಲವೆಂದು ಹೇಳಬೇಕು. ಅವರ ಮಾತು ನನ್ನ ಮನಸ್ಸಿಗೆ ನೇರಾಗಿ ಮುಟ್ಟುತ್ತಿತ್ತು. ಅವರ ನೀತಿ ಶ್ರದ್ಧೆ ಎಷ್ಟು ಗೌರವಾರ್ಹವಾಗಿತ್ತೋ ಅವರ ಬುದ್ಧಿಶಕ್ತಿಯೂ ಅಷ್ಟೇ ಗೌರವನೀಯವಾಗಿತ್ತು. ನನಗೇನೋ ಒಳಗೊಳಗೇ ಒಂದು ವಿಶ್ವಾಸ: ಈತ ಇಚ್ಛಾಪೂರ್ವಕವಾಗಿ ನನ್ನನ್ನು ಅತ್ತಹಾದಿ ಹಿಡಿಸಲಾರ; ತನ್ನ ಅಂತರಂಗದ ಒಳಮಾತನ್ನು ಕೂಡ ಯಾವಾಗಲೂ ನನಗೆ ಹೇಳುತ್ತಾನೆ ಎಂತ. ಅಂತೇ, ನನಗೆ ಆಧ್ಯಾತ್ಮ ಸಂಕಟ ಬಂದಾಗ ಆತನೇ ನನ್ನ ಆಸರೆಯಾಗಿದ್ದ.

ಇಷ್ಟೆಲ್ಲ ಗೌರವ ಕೊಟ್ಟರೂ ಆತನನ್ನು ನನ್ನ ಹೃದಯ ಸಿಂಹಾಸನದಲ್ಲಿ ಗುರುವಾಗಿ ಅಭಿಷೇಕಮಾಡಲಾರದೆ ಹೋದೆ. ಇವೊತ್ತಿಗೂ ಆ ಸಿಂಹಪೀಠ ತೆರವಾಗಿಯೇ ಇದೆ. ನನ್ನ ಗುರುಶೋಧನೆ ನಡೆಯುತ್ತಲೇ ಇದೆ.

ಹಿಂದೂ ಧರ್ಮದಲ್ಲಿ ಹೇಳಿರುವ ಗುರುತತ್ವವನ್ನೂ ಆತ್ಮಸಾಕ್ಷಾತ್ಕಾರದಲ್ಲಿ ಗುರುವಿಗಿರುವ ಮಹತ್ ಸ್ಥಾನವನ್ನೂ ನಾನು ನಂಬುತ್ತೇನೆ. ಗುರುಕರುಣವಿಲ್ಲದೆ ನಿಜವಾದ ಜ್ಞಾನವಿಲ್ಲವೆಂಬ ಸಿದ್ಧಾಂತದಲ್ಲಿ ಬಹಳ ಸತ್ಯವಿದೆ. ವ್ಯವಹಾರದಲ್ಲಿ ಅಪೂರ್ಣ ಜ್ಞಾನಿಯಾದ ಗುರುವನ್ನು ಹೇಗಾದರೂ ಸಹಿಸಿಕೊಳ್ಳಬಹುದು! ಆಧ್ಯಾತ್ಮದಲ್ಲಿ ಅಪೂರ್ಣ ಜ್ಞಾನಿಯಿಂದ ಲಾಭವಿಲ್ಲ, ಗುರುವೆನಿಸಿಕೊಳ್ಳಲು ಸಂಪೂರ್ಣಜ್ಞಾನಿಯಾಗಿರಬೇಕು.

ಅಷ್ಟರಿಂದ ಸಂಪೂರ್ಣತೆಯ ಪ್ರಯತ್ನ ನಿರಂತರವೂ ಅನಂತವೂ ಆಗಿರಬೇಕು. ಏಕೆಂದರೆ ನಮ್ಮ ಯೋಗ್ಯತೆಗೆ ತಕ್ಕಂತೆ ನಮ್ಮ ಗುರು. ಪರಿಪೂರ್ಣತೆಗಾಗಿ ಅನಂತ ಪ್ರಯತ್ನ ಮಾಡುವುದು ನಮ್ಮ ಹಕ್ಕು, ಕರ್ತವ್ಯ. ಆ ಪ್ರಯತ್ನವೇ ಅದರ ಫಲ. ಉಳಿದುದೆಲ್ಲ ದೈವ ಚಿತ್ತ.

ರಾಯಚಂದ್ ಭಾಯಿಯನ್ನು ಗುರುವಾಗಿ ಮಾಡಿಕೊಂಡು ನನ್ನ ಹೃದಯಪೀಠದಲ್ಲಿ ಕೂಡಿಸಲಾರದಿದ್ದರೂ ಎಷ್ಟೋ ಸಂದರ್ಭಗಳಲ್ಲಿ ಅತ ನನ್ನ ಮಾರ್ಗದರ್ಶಿ, ಆಶ್ರಯ ಆಗಿದ್ದ. ಮೂವರು ಆಧುನಿಕರು ನನ್ನ ಬಾಳಿನ ಮೇಲೆ ವಿಶೇಷ ಪ್ರಭಾವ ಬೀರಿದ್ದಾರೆ; ನನ್ನನ್ನು ಮೋಹಗೊಳಿಸಿದ್ದಾರೆ: ತನ್ನ ಸಹವಾಸದಿಂದ ರಾಯಚಂದ್ ಭಾಯಿ; 'ಕೈಲಾಸ ತನ್ನೊಳಗೇ, ಬೇರಿಲ್ಲ' ಎಂಬ ಪುಸ್ತಕದ ಮೂಲಕ ಟಾಲ್‌ಸ್ಟಾಯ್; 'ಸರ್ವೋದಯ'—ಎಂಬ ಪುಸ್ತಕದಿಂದ ರಸ್ಕಿನ್. ಇವರ ಬಗ್ಗೆ ಮತ್ತೊಮ್ಮೆ.

# ಗೋಖಲೆಯವರೊಡನೆ ಒಂದು ತಿಂಗಳು

ಗೋಖಲೆಯವರ ಜೊತೆಗಿದ್ದ ಮೊದಲನೆ ದಿವಸವೆ ನನಗೆ ನಮ್ಮ ಮನೆಯಲ್ಲಿದ್ದ ಹಾಗೇ ಆಯಿತು. ಆಪ್ತರಂತೆ ನಡೆದುಕೊಂಡರು ಅವರು; ನನ್ನನ್ನು ತಮ್ಮ ಕಿರಿಯ ತಮ್ಮನಂತೆ ನೋಡಿದರು; ನನಗೇನು ಬೇಕೋ ತಿಳಿದುಕೊಂಡು ಎಲ್ಲವನ್ನೂ ಒದಗಿಸಿ ಕೊಡುತ್ತಿದ್ದರು. ನನಗೆ ಬೇಕಾದ್ದೇ ಅತ್ಯಲ್ಪ; ಜೊತೆಗೆ ಸ್ವಾವಲಂಬನವನ್ನು ರೂಢಿ ಮಾಡಿಕೊಂಡಿದ್ದೆ; ಅದರಿಂದ ನನಗೆ ಹೆಚ್ಚಾಗಿ ಸಹಾಯವೇನೂ ಬೇಕಾಗುತ್ತಿರಲಿಲ್ಲ. ನನ್ನ ಆರೈಕೆ ನಾನೇ ಮಾಡಿಕೊಳ್ಳುವುದು, ನನ್ನ ಶುಚಿ, ಕಾರ್ಯದೃಢತೆ, ಕಾಲನಿಯಮ—ಎಲ್ಲಾ ಗೋಖಲೆಯವರನ್ನು ಮೆಚ್ಚಿಸಿದವು. ಎಷ್ಟೋ ಸಲ ನನ್ನನ್ನು ಹೊಗಳಿಕೆಯಲ್ಲಿ ಮುಳುಗಿಸಿಬಿಡುತ್ತಿದ್ದರು.

ನನ್ನಿಂದ ಯಾವುದನ್ನೂ ಅವರು ಮರೆಮಾಚುತ್ತಿರಲಿಲ್ಲವೆನಿಸುತ್ತಿತ್ತು. ಅವರ ಬಳಿಗೆ ಬಂದ ಪ್ರಮುಖರೆಲ್ಲರಿಗೂ ನನ್ನ ಪರಿಚಯ ಮಾಡಿಕೊಡುತ್ತಿದ್ದರು. ಅಂಥವರಲ್ಲಿ ಈಗ ನನಗೆ ನೆನಪುಳಿದಿರುವವರಲ್ಲಿ ಮುಖ್ಯರು ಶ್ರೀ ಪ್ರಫುಲ್ಲ ಚಂದ್ರರಾಯ್. ಅವರು ನೆರೆಯಲ್ಲಿ ವಾಸವಾಗಿದ್ದರು. ಮೇಲಿಂದ ಮೇಲೆ ಬಂದು ಹೋಗುತ್ತಿದ್ದರು.

ಆಚಾರ್ಯ ರಾಯರನ್ನು ಅವರು ಪರಿಚಯ ಮಾಡಿಕೊಟ್ಟದ್ದು ಹೀಗೆ: ಇವರು ಪ್ರೊಫೆಸರ್ ರಾಯ್, ಇವರಿಗೆ ಬರುವ ೮೦೦ ರೂಪಾಯಿ ಸಂಬಳದಲ್ಲಿ ೪೦ ರೂಪಾಯನ್ನು

ಮಾತ್ರ ಇಟ್ಟುಕೊಂಡು ಉಳಿದುದನ್ನೆಲ್ಲ ಸಾರ್ವಜನಿಕ ಕಾರ್ಯ (ಧರ್ಮ)ಕ್ಕಾಗಿ ವಿನಿಯೋಗಿಸುತ್ತಾರೆ. ಇವರಿಗೆ ಮದುವೆಯಿಲ್ಲ ; ಮಾಡಿಕೊಳ್ಳುವ ಇಷ್ಟವೂ ಇಲ್ಲ.

ರಾಯರ್ ಆಗ ಇದ್ದುದ್ದಕ್ಕೂ ಈಗಿರುವುದಕ್ಕೂ ನನಗೇನೂ ವ್ಯತ್ಯಾಸ ಕಾಣದು. ಈಗಿರುವಷ್ಟೇ ಸರಳವಾಗಿತ್ತು ಆಗಲೂ ಉಡಿಗೆ ತೊಡಿಗೆ. ಭೇದವಿಷ್ಟೆ : ಆಗ ಸ್ವದೇಶಿ ಗಿರಣಿ ಬಟ್ಟೆ ; ಈಗ ಖಾದಿ. ಗೋಖಲೆಯವರಿಗೂ ಡಾ ರಾಯರ್‌ಗೂ ನಡೆಯುತ್ತಿದ್ದ ಸಂವಾದ ಎಷ್ಟು ಕೇಳಿದರೂ ಸಾಕೆನಿಸುತ್ತಿರಲಿಲ್ಲ ; ಆ ಸಂವಾದವೆಲ್ಲ ಜೀವ ಧನ ದವಸು, ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದ್ದು. ಅದರಲ್ಲಿ ಜನನಾಯಕರ ಟೀಕೆಯುದ್ದುದರಿಂದ ನನಗಾಗ ಮನಸ್ಸಿಗೆ ನೋವಾಗುತ್ತಿತ್ತು. ಧೀರ ಯೋಧರೆಂದು ನಾ ತಿಳಿದಿದ್ದ ಜನ ಕೆಲವರು ಅವರಿಂದ ಕ್ಷುದ್ರರಾಗಿ ಕಾಣ ತೊಡಗಿದರು

ಗೋಖಲೆಯವರು ಕಾರ್ಯಮಗ್ನರಾಗಿದ್ದುದನ್ನು ನೋಡಿದರೆ ಆನಂದವಾಗುತ್ತಿತ್ತು. ಶಿಕ್ಷಣವೂ ದೊರೆಯುತ್ತಿತ್ತು. ಒಂದು ಗಳಿಗೆಯನ್ನಾದರೂ ಅವರು ವ್ಯರ್ಥ ಗೊಳಿಸುತ್ತಿರಲಿಲ್ಲ ಅವರ ಬಳಗ, ಸ್ನೇಹ ಎಲ್ಲವೂ ಸಾರ್ವಜನಿಕ ಹಿತಕ್ಕಾಗಿಯೇ ಅವರ ಮಾತಿನಲ್ಲಿ ಸದಾ ದೇಶ ಹಿತದ ವಿಚಾರವೇ ಇರುತ್ತಿತ್ತು ಅದರಲ್ಲಿ ಅಸತ್ಯ, ಅಪ್ರಮಾಣಿಕತನದ ಸೋಂಕೇ ಇರುತ್ತಿರಲಿಲ್ಲ. ಭಾರತದ ಬಡತನ, ಪರಾಧೀನತೆ ಅವರ ಮನಸ್ಸನ್ನು ಸದಾ ಕೊರೆಯುತ್ತಿತ್ತು. ಬೇರೆ ಬೇರೆ ಜನ ಬಂದು ಬೇರೆ ಬೇರೆ ವಿಷಯಗಳಲ್ಲಿ ಅವರಿಗೆ ಆಸಕ್ತಿ ಹುಟ್ಟಿಸಲು ಪ್ರಯತ್ನ ಮಾಡುತ್ತಿದ್ದರು. ಅವರೆಲ್ಲರಿಗೂ ಒಂದೇ ಉತ್ತರ : ಅದನ್ನು ನೀವೇ ಮಾಡಿ. ನನ್ನ ಕೆಲಸ ನಾನು ಮಾಡುತ್ತೇನೆ. ನನಗೆ ಬೇಕಾದ್ದು ನಮ್ಮ ದೇಶದ ಸ್ವಾತಂತ್ರ್ಯ. ಅದನ್ನು ಗಳಿಸಿದ ಮೇಲೆ ಉಳಿದುದರ ವಿಚಾರ. ಸದ್ಯ ನನ್ನ ಸಾಮರ್ಥ್ಯಕೆ ಕಾರ್ಯಕ್ಕೆ ಅದೊಂದೇ ಸಾಕು.’

ರಾನಡೆಯವರ ಬಗ್ಗೆ ಗೋಖಲೆಯವರಿಗೆ ತುಂಬಾ ಗೌರವ; ಗಳಿಗೆ ಗಳಿಗೆಯಲ್ಲೂ ಅದು ಒಡೆದು ಕಾಣುತ್ತಿತ್ತು. ರಾನಡೆಯವರ ಮಾತು ವೇದವಾಕ್ಯ. ಹೆಜ್ಜೆ ಹೆಜ್ಜೆಗೂ ರಾನಡೆ ವಾಕ್ಯವನ್ನು ಉದಾಹರಿಸುತ್ತಿದ್ದರು. ನಾನು ಗೋಖಲೆಯವರ ಜೊತೆಯಲ್ಲಿದ್ದಾಗ ರಾನಡೆಯವರ ವರ್ಧಂತಿ ಬಂತು ಗೋಖಲೆಯವರು ಆ ವರ್ಧಂತಿಯನ್ನು ತಪ್ಪದೆ ಆಚರಿಸುತ್ತಿದ್ದರು. ಆಗ ನಾನಲ್ಲದೆ ಅವರ ಗೆಳೆಯರಾದ ಪ್ರೊ. ಕಾಥವಟೆ, ಇನ್ನೊಬ್ಬರು ಸಬ್‌ಜಡ್ಜರು ಇದ್ದರು. ಆ ಉತ್ಸವದಲ್ಲಿ ಪಾಲುಗೊಳ್ಳಲು ನಮ್ಮನ್ನೂ ಕರೆದರು ಗೋಖಲೆಯವರು ಆಗ ಮಾಡಿದ ಭಾಷಣದಲ್ಲಿ ರಾನಡೆಯ ಜೀವನಸ್ಮೃತಿಯನ್ನು ತಿಳಿಸಿದರು. ರಾನಡೆ, ತೆಲಾಂಗ್, ಮಾಂಡಲಿಕ್ ಮೂವರನ್ನೂ ಹೋಲಿಸಿದರು. ತೆಲಾಂಗರ ಬೋಧಕ ಶೈಲಿಯನ್ನೂ ಮಾಂಡಲಿಕರ ಸುಧಾರಕತನವನ್ನೂ ಹೊಗಳಿದರು.

ಕಕ್ಷಿಗಾರರಲ್ಲಿ ಮಾಂಡಲಿಕರಿಗಿದ್ದ ಅಪಾರ ವಿಶ್ವಾಸವನ್ನು ವರ್ಣಿಸುತ್ತ ಒಂದು ಕತೆ ಹೇಳಿದರು. ಒಂದು ಸಲ ಮಾಂಡಲಿಕರಿಗೆ ರೈಲು ತಪ್ಪಿತು. ಕಕ್ಷಿಗಾರನ ಹಿತಕ್ಕಾಗಿ ಕಚೇರಿಗೆ ಹೋಗಲೇಬೇಕೆಂದು ಸ್ಪೆಷಲ್ ರೈಲು ಮಾಡಿಕೊಂಡು ಹೋದರು. ಆದರೆ ಮೂವರಲ್ಲಿ ರಾನಡೆ ಗೋಪುರವಿದ್ದಂತೆ. ಅವರ ಪ್ರತಿಭೆ ಸರ್ವಂಕಷ. ಅವರು ಶ್ರೇಷ್ಠ ನ್ಯಾಯಾಧೀಶರು ಮಾತ್ರವಲ್ಲ; ಅಷ್ಟೇ ಶ್ರೇಷ್ಠ ಇತಿಹಾಸಕಾರರು, ಅರ್ಥ ಶಾಸ್ತ್ರಜ್ಞರು, ಸುಧಾರಕರು. ನ್ಯಾಯಾಧೀಶರಾಗಿದ್ದರೂ ನಿರ್ಭಯವಾಗಿ ಕಾಂಗ್ರೆಸ್ಸಿಗೆ ಹೋಗುತ್ತಿದ್ದರು. ಅವರ ತೀರ್ಮಾನಕ್ಕೆ ಇದಿರಾಡುವವರಿಲ್ಲ; ಅವರ ವಿವೇಕದಲ್ಲಿ ಎಲ್ಲರಿಗೂ ಅಷ್ಟು ನಂಬಿಗೆ. ತಮ್ಮ ಗುರುವಿನ ಈ ಬುದ್ಧಿ ಅಂತಃಕರಣಗಳ ಶಕ್ತಿಯನ್ನು ವರ್ಣಿಸುವಾಗ ಗೋಖಲೆಯವರ ಆನಂದಕ್ಕೆ ಪಾರವೇ ಇರಲಿಲ್ಲ.

ಆ ಕಾಲದಲ್ಲಿ ಗೋಖಲೆಯವರಿಗೆ ಒಂದು ಕುದುರೆ ಗಾಡಿಯಿತ್ತು. ಅವರಿಗೆ ಕುದುರೆ ಗಾಡಿ ಏಕೆ ಬೇಕಾಯಿತೋ ನನಗೆ ಗೊತ್ತಿರಲಿಲ್ಲ. ಒಂದು ದಿನ ಕೇಳಿದೆ: 'ಇಲ್ಲಿಂದಿಲ್ಲಿಗೆ ಟ್ರಾಂ ಬಂಡಿಯಲ್ಲಿ ಓಡಾಡಿದರೆ ಆಗದೆ? ಅದು ನಾಯಕತನಕ್ಕೆ ಅವಲಕ್ಷಣವೇನು?'

ಅವರಿಗೆ ಕೊಂಚ ನೋವಾಯಿತು. 'ನೀನೂ ನನ್ನನ್ನು ಅರ್ಥಮಾಡಿಕೊಳ್ಳಲಾರದೆ ಹೋದೆ. ನನ್ನ ಶಾಸನ ಸಭಾ ಸಂಭಾವನೆಯನ್ನು ನಾನು ಸ್ವಂತಕ್ಕಾಗಿ ಉಪಯೋಗಿಸುತ್ತಿಲ್ಲ. ಟ್ರಾಂ ಬಂಡಿಗಳಲ್ಲಿ ಹೋಗಲು ನಿನಗಿರುವ ಸ್ವಾತಂತ್ರ್ಯವನ್ನು ನೋಡಿ ನನಗೆ ಅಸೂಯೆಯಾಗುತ್ತದೆ. ಆದರೆ ನಾನು ಹಾಗೆ ಮಾಡಲಾರೆ. ನನ್ನ ಹಾಗೆ ಇಷ್ಟು ವಿಸ್ತಾರವಾಗಿ ಜನಕ್ಕೆ ಗೊತ್ತಾದ ಮೇಲೆ ಈಗಿನ ಹಾಗೆ ಟ್ರಾಂಬಂಡಿಗಳಲ್ಲಿ ಹೋಗುವುದು ನಿನಗೂ ಅಶಕ್ಯವಾಗುತ್ತದೆ; ಅಸಾಧ್ಯವಲ್ಲದಿದ್ದರೂ ದುಸ್ಸಾಧ್ಯವಾಗುತ್ತದೆ. ನಾಯಕರು ಮಾಡುವುದೆಲ್ಲ ಸ್ವಂತ ಸುಖಕ್ಕಾಗಿ ಎಂದು ತಿಳಿಯುವ ಕಾರಣವಿಲ್ಲ. ನಿನ್ನ ಸರಳತನದ ರೀತಿಗಳನ್ನು ಮೆಚ್ಚಿದೇನೆ. ನಾನೂ ಸಾಧ್ಯವಾದಷ್ಟು ಸರಳವಾಗಿಯೇ ಇದೇನೆ. ಆದರೆ ನನ್ನಂಥವನಿಗೆ ಕೊಂಚ ವೆಚ್ಚ ಅನಿವಾರ್ಯ.'

ಹೀಗೆ ಒಂದು ಪ್ರಶ್ನೆಗೇನೋ ಸಮಂಜಸವಾಗಿ ಸಮಾಧಾನ ಹೇಳಿದರು. ಇನ್ನೊಂದಕ್ಕೆ ಹೇಳಿದ ಉತ್ತರದಿಂದ ಅಷ್ಟು ಸಮಾಧಾನವಾಗಲಿಲ್ಲ.

'ನೀವು ಗಾಳೀ ಸವಾರಿಗೆ ಕೂಡ ಹೋಗುವುದಿಲ್ಲವಲ್ಲ' ಎಂದೆ. 'ನಿಮಗೆ ಸದಾ ಕಾಯಿಲೆಯಿದ್ದರೆ ಏನಾಶ್ಚರ್ಯ? ಸಾರ್ವಜನಿಕ ಕಾರ್ಯದಲ್ಲಿ ಶರೀರ ವ್ಯಾಯಾಮಕ್ಕೂ ಬಿಡುವು ಬೇಡವೆ'?

'ನನಗೆ ಗಾಳೀ ಸವಾರಿಗೆ ಹೋಗಲು ಪುರುಸೊತ್ತೆಲ್ಲಿದೆ? ನೀನೇ ನೋಡುತ್ತಿದೀಯಲ್ಲ' ಎಂದರು ಅವರು.

ನನಗೆ ಗೋಖಲೆಯವರನ್ನು ಕಂಡರೆ ತುಂಬಾ ಗೌರವ. ಅವರೊಡನೆ ಯಾವಾಗಲೂ ವಾದಮಾಡಿಲ್ಲ. ಈ ಉತ್ತರ ನನಗೆ ಸಮಾಧಾನಕರವಾಗಿಲ್ಲದಿದ್ದರೂ ಸುಮ್ಮನಿದ್ದೆ. ಎಷ್ಟೇ ಕೆಲಸದ ರಾಶಿಯಿರಲಿ ಊಟಕ್ಕೆ ಬಿಡುವುಮಾಡಿಕೊಳ್ಳುವಂತೆ ವ್ಯಾಯಾಮಕ್ಕೂ ಬಿಡುವುಮಾಡಿಕೊಳ್ಳಲೇಬೇಕೆಂದು ಆಗ ನಾನು ನಂಬಿದ್ದೆ; ಈಗಲೂ ಅದೇ ನಂಬಿಗೆಯಿಂದೆ ಕೆಲಸ ಮಾಡುವ ಸಾಮರ್ಥ್ಯ ಅದರಿಂದ ತಗ್ಗುವುದಿಲ್ಲ; ಹೆಚ್ಚುತ್ತದೆಯೆಂದು ನನ್ನ ವಿನಯಪೂರ್ಣ ಅಭಿಪ್ರಾಯ.

* * *

ಈಗತಾನೆ ಹಾಡಿದ ಹಾಡಿನಲ್ಲಿ ಒಂದು ಮಾತನ್ನು ಹೇಳಿದಾರೆ. ಮಲಿನವಸನ, ಛಿದ್ರ ವಸ್ತ್ರ, ದೇವರಿಗೆ ಬಲು ಇಷ್ಟ. ಯಾರ ಬಟ್ಟೆ ಹರಕೋ ಯಾರ ಉಡುಪು ಧೂಳಿಧೂಸರಿತವೋ ಅವರಲ್ಲಿ ದೇವರು ಇದಾನಂತೆ. ಈ ಹಾಡು ಕೇಳಿದೊಡನೆಯೆ ನನ್ನ ಉಡುಪಿನ ಅಂಚು ನೆನಪಾಯಿತು; ಮುಟ್ಟಿ ನೋಡಿಕೊಂಡೆ; ಅದು ಮಲಿನವೂ ಅಲ್ಲ, ಛಿದ್ರವೂ ಅಲ್ಲ, ಶುಭ್ರವಾಗಿದೆ, ಸರಿಯಾಗಿದೆ. ನನ್ನೊಳಗೆ ದೇವರಿಲ್ಲ. ಇಷ್ಟೇ ಅಲ್ಲ. ಇನ್ನೂ ಕೆಲವು ನಿಯಮ ಇವೆ. ಅದರಲ್ಲೂ ನಾನು ಗೆಲ್ಲಲಾರೆ, ಸೋತೇನು. ನೀವೂ ಸೋತೀರಿ. ಈ ಹೆಮ್ಮಾತು ನಮಗೆ ಸದಾ ನೆನಪಿದ್ದರೆ, ಇವೊತ್ತು ಯಾರ ಭಾವಚಿತ್ರವನ್ನು ಇಲ್ಲಿ ಅನಾವರಣ ಮಾಡುತ್ತೇವೋ ಅವರ ನಾಮಸ್ಮರಣೆಗೆ ಅಗೌರವವಾಗಲಿಕ್ಕಿಲ್ಲ. ರಾಜಕೀಯ ರಂಗದಲ್ಲಿ ನಾನವರ ಶಿಷ್ಯನೆಂದು ಹೇಳಿಕೊಂಡಿದೇನೆ. ಅವರನ್ನು ನನ್ನ ರಾಜಗುರುವೆಂದು ನಂಬಿದೇನೆ. ಭಾರತೀಯರ ಪರವಾಗಿ ಹೀಗನ್ನುತ್ತೇನೆ. ೧೮೯೬ರಲ್ಲಿ ಹೀಗೆ ಬಹಿರಂಗವಾಗಿ ಹೇಳಿದೆ. ನನ್ನ ಆಯ್ಕೆ ತಪ್ಪಾಯಿತೆಂದು ನನಗೆ ಅನಿಸಿಲ್ಲ.

ಬರೀ ಮಾತಿನಮಲ್ಲರಾಗಿ ಭಾಷಾ ವೈಖರಿ ಬೆಳಗುವುದರಲ್ಲೇ ಮುಗಿಯಬಾರದ್ದು ನಮ್ಮ ಶೌರ್ಯ; ದೇಶದ ರಾಜಕೀಯವನ್ನು ಧರ್ಮ ಮಾರ್ಗದಲ್ಲಿ ನಡೆಸಬೇಕು, ರಾಜಕೀಯ ಸಂಸ್ಥೆಗಳಲ್ಲಿ ಧರ್ಮದೃಷ್ಟಿಯನ್ನು ಬೆಳೆಸಬೇಕು: ದೇಶಪ್ರೇಮಿಯೆನ್ನುವ ಪ್ರತಿಯೊಬ್ಬ ಭಾರತೀಯನಿಗೂ ಇದು ಗುರಿಯಾಗಬೇಕು. ಗೋಖಲೆ ನನ್ನ ಬಾಳಿಗೊಂದು ಬೆಳಕು ಕೊಟ್ಟರು; ಇನ್ನೂ ಆ ಸ್ಫೂರ್ತಿದಾನ ನಿಂತಿಲ್ಲ. ಆ ಸ್ಫೂರ್ತಿಯಲ್ಲಿ ಆತ್ಮಶುದ್ಧಿ ಪಡೆಯಬೇಕೆಂದಿದೇನೆ. ಗುರಿಯನ್ನು ಸಾಧಿಸಲು ಬಾಳನ್ನು ಮುಡಿಪುಮಾಡಿದೇನೆ. ಈ ಪ್ರಯತ್ನದಲ್ಲಿ ನಾನು ಸೋಲಬಹುದು. ಸೋತರೆ ಆ ಗುರುವಿನ ಶಿಷ್ಯತ್ವಕ್ಕೆ ಅರ್ಹನಲ್ಲವೆಂದೇನು.

ಆ ರಾಜರ್ಷಿಯ ಜೊತೆಯಲ್ಲಿ ಅವರ ಬದುಕಿನ ಕೊನೆ ಗಳಿಗೆಯವರೆಗೂ ನಾನಿದ್ದೆ. ಒಮ್ಮೆಯಾದರೂ ಅವರಲ್ಲಿ ಅಹಂಕಾರವನ್ನು ನಾ ಕಂಡಿದಿಲ್ಲ ತನ್ನಲ್ಲಿದ್ದ ಸರ್ವಗುಣವನ್ನೂ ಅವರು ಪರಿಪಕ್ವಗೊಳಿಸಿಕೊಂಡರು. ತಮ ..ಯಲ್ಲಿ, ತಮ್ಮ ದೇಶ

ಕ್ಕಾಗಿ. ಜನರ ಮೆಚ್ಚುಗೆಯೂ ಅವರಿಗೆ ದೊರೆಯಿತು. ಬಯಸಿ ಬಂದದ್ದಲ್ಲ ಅದು; ಬಯಸದೆ ಸುರಿದ ಹೂ ಮಳೆ.

# ಲೋಕಮಾನ್ಯ ತಿಲಕರು

ಲೋಕಮಾನ್ಯ ಬಾಲ ಗಂಗಾಧರ ತಿಲಕರು ಇನ್ನಿಲ್ಲ. ಅವರು ಸತ್ತರೆಂದರೆ ನಂಬುವುದೇ ದುಸ್ಸಾಧ್ಯ; ಜನತೆಯಲ್ಲಿ ಅವರು ಅಷ್ಟು ಮಟ್ಟಿಗೆ ಬೆರೆತು ಹೋಗಿದ್ದರು. ಜನರ ಮೇಲೆ ತಿಲಕರಿಗಿದ್ದ ಹಿಡಿತ ಇನ್ನಾರಿಗೂ ಇರಲಿಲ್ಲ. ದೇಶದ ಸಹಸ್ರಾರು ಜನ ಅವರಲ್ಲಿ ತೋರುತ್ತಿದ್ದ ಭಕ್ತಿಯೂ ಅಷ್ಟೆ; ಅಸಾಧಾರಣವಾದುದು. ಅವರು ಜನತೆಯ ಕಣ್ಣಿನ ಬೆಳಕು ಆರಾಧ್ಯ ಮೂರ್ತಿ. ಅವರ ಒಂದೊಂದು ಮಾತೂ ಜನರ ಪಾಲಿಗೆ ಅನುಲ್ಲಂಘನೀಯ ಶಾಸನ. ಮಾನವರಲ್ಲಿಯ ಅವತಾರ ಪುರುಷನೊಬ್ಬ ಮರೆಯಾದ. ಕಂಠೀರವನ ಗಂಭೀರ ಘರ್ಜನೆ ಅಡಗಿತು.

ಜನರು ತಿಲಕರನ್ನು ಅಷ್ಟು ಪ್ರೀತಿಸುತ್ತಿದ್ದಾರೇಕೆ? ಇದರ ಉತ್ತರ ತುಂಬಾ ಸುಲಭ. ದೇಶಪ್ರೇಮವೆಂದರೆ ತಿಲಕರಿಗೆ ಅಮಿತ ಉತ್ಸಾಹ. ಅದಕ್ಕೂ ಮಿಗಿಲಾದ ಧರ್ಮವೇ ಇರಲಿಲ್ಲ ಅವರ ಪಾಲಿಗೆ. ಹುಟ್ಟು ಪ್ರಜಾಪ್ರಭುತ್ವವಾದಿ ತಿಲಕರು. ಬಹು ಸಂಖ್ಯಾತರ ಆಳ್ವಿಕೆಯಲ್ಲಿ ಅವರಿಗಿದ್ದ ಗಾಢ ಪ್ರೇಮ, ಎಷ್ಟೋ ಸಾರಿ ನನಗೆ ಹೆದರಿಕೆಯಾಗುವ ಹಾಗೆ ಮಾಡಿದೆ. ಅದೇ ಅವರ ಹಿಡಿತದ ಗುಟ್ಟು. ವಜ್ರದಂಥ ಮನಸ್ಸು ಅವರದು. ಆ ಮನಸ್ಸು ಪೂರಾ ದೇಶಕ್ಕೇ ಮೀಸಲಾಗಿತ್ತು. ಅವರ ಬಾಳು ತೆರೆದ ಪುಸ್ತಕದಂತೆ ತೀರಾ ಸರಳ ಅಭಿರುಚಿ ಅವರದು. ಅಂತರಂಗ ಜೀವನವಂತೂ ಪೂರಾ ಪರಿಶುದ್ಧ; ಅಣು ಮಾತ್ರವಾದರೂ ದೋಷವಿರಲಿಲ್ಲ. ತಮ್ಮ ಅದ್ಭುತ ಶಕ್ತಿಯನ್ನೆಲ್ಲಾ ದೇಶಕ್ಕೆ ಧಾರೆ ಎರೆದು ಬಿಟ್ಟಿದ್ದರು ತಿಲಕರು. ಸ್ವರಾಜ್ಯದ ಸಂದೇಶವನ್ನು ಲೋಕಮಾನ್ಯರಷ್ಟು ಒತ್ತಾಯವಾಗಿ, ಸತತವಾಗಿ ಸಾರಿದವರು ಇನ್ನೊಬ್ಬರಿಲ್ಲ. ಎಂತಲೇ ದೇಶ ಅವರನ್ನು ಪೂರಾ ನಂಬಿತ್ತು. ಉಗ್ಗಲಾರದ ಕೆಚ್ಚಿದ್ದ, ಎಂದೂ ಮುಸುಕಾಗದ ಉತ್ಸಾಹದ ತಿಲಕರು ತಮ್ಮ ಜೀವಮಾನ ಕಾಲದಲ್ಲೇ ಪೂರ್ಣ ಸ್ವರಾಜ್ಯ ಸ್ಥಾಪನೆಯನ್ನು ಕಣ್ಣಾರೆ ಕಾಣುವೆನೆಂದು ತಿಲಕರು ಬಯಸಿದ್ದರು. ಆ ಬಯಕೆ ಈಡೇರದಿದ್ದರೆ, ಆ ತಪ್ಪು ಅವರದಲ್ಲ. ಅವರ ತಪಸ್ಸಿನ ಪ್ರಭಾವದಿಂದ ಆ ಶುಭ ಮುಹೂರ್ತ ಎಷ್ಟೋ ವರ್ಷ ಹತ್ತಿರ ಬಂದಿದೆ ಖಂಡಿತವಾದ ಮಾತು ಇದು. ಅದಷ್ಟು ಬೇಗ ಅವರ ಕನಸನ್ನೂ ನನಸಾಗಿ ಮಾಡುವ ಕರ್ತವ್ಯ ಹಿಂದುಳಿದ ನಮ್ಮದು; ಇಮ್ಮಡಿಯಾಗಿ ದುಡಿದು ಅದನ್ನು ಸಾಧಿಸಬೇಕು.

ಲೋಕಮಾನ್ಯರು ಅಧಿಕಾರಿ ವರ್ಗದ ಆಜನ್ಮ ವಿರೋಧಿಗಳು. ಹಾಗೆಂದರೆ ಆಂಗ್ಲರನ್ನಾಗಲೀ, ಆಂಗ್ಲ ಅಧಿಕಾರಿಯನ್ನಾಗಲಿ ಅವರು ದ್ವೇಷಿಸುತ್ತಿದ್ದರೆಂದಲ್ಲ. ತಿಲಕರು ತನ್ನ ವೈರಿಯಾಗಿದ್ದರು ಎಂದುಕೊಳ್ಳುವ ತಪ್ಪನ್ನು ಆಂಗ್ಲರು ಎಂದೂ ಮಾಡಬಾರದು.

ಕಳೆದ ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ, ಹಿಂದಿ ರಾಷ್ಟ್ರಭಾಷೆಯಾಗಬೇಕೆಂದು ಏನೂ ಸಿದ್ಧತೆಮಾಡಿಕೊಳ್ಳದೆ ತಿಲಕರು ಮಾಡಿದ ಪಾಂಡಿತ್ಯಪೂರ್ಣವಾದ ಭಾಷಣವನ್ನು ಕೇಳುವ ಸುಯೋಗ ನನಗೆ ಒದಗಿತ್ತು. ಆಗ ತಾನೆ ಕಾಂಗ್ರೆಸ್ ಡೇರೆಯಿಂದ ಬಂದಿದ್ದರು. ಆದರೂ ಎಂಥ ಭಾಷಣಮಾಡಿದರು? ಕೇಳುವವರಿಗೆ ಅದೊಂದು ರಸಭೋಜನ. ಆಂಗ್ಲರು ದೇಶಭಾಷೆಗಳ ಬಗ್ಗೆ ತೋರಿದ ಉಪೇಕ್ಷೆಯನ್ನು ಬಾಯಿತುಂಬಾ ಹೊಗಳಿದರು. ಇಂಗ್ಲೆಂಡಿಗೆ ಹೋಗಿ ಬಂದ ಮೇಲಂತೂ ತಿಲಕರು ಬ್ರಿಟಿಷ್ ಪ್ರಜಾಪ್ರಭುತ್ವವನ್ನು ಪೂರಾ ನಂಬಿದ್ದರು. ಅವರ ನ್ಯಾಯಾಲಯದ ಅನ್ಯಾಯ ಕಂಡೂ ಈ ನಂಬಿಕೆ ಸಡಲಿರಲಿಲ್ಲ. ಅಷ್ಟೇ ಅಲ್ಲ ಈ ಭಾವನೆಯನ್ನು ಭಾರತ ಚಲಚ್ಚಿತ್ರದ ಮೂಲಕ ಪಂಜಾಬಿಗೆ ಕಲಿಸಬೇಕೆಂದು ಕೂಡಾ ಸೂಚಿಸಿದರು. ಇದನ್ನು ಕಂಡು ಜನರಿಗೆ ಎಷ್ಟೋ ಸೋಜಿಗ! ತಿಲಕರ ನಂಬಿಕೆಯೇ ನನಗೂ ಇದೆಯೆಂದು ನಾನೀ ಘಟನೆಯನ್ನಿಲ್ಲಿ ಹೇಳುತ್ತಿಲ್ಲ—ನನಗಾ ನಂಬಿಕೆ ಎಳ್ಳಷ್ಟೂ ಇಲ್ಲ, ತಿಲಕರು ಆಂಗ್ಲದ್ವೇಷಿಗಳು ಎಂದು ತೋರಿಸಲು ಅಷ್ಟೆ. ಈ ಅಭಿಮಾನವೇನೋ ಇತ್ತಾಗಲಿ, ಭಾರತಕ್ಕೆ ಸಾಮ್ರಾಜ್ಯದಲ್ಲಿರುವ ಕೀಳ್ದರ್ಜೆ ಕಂಡರೆ ಕಿಡಿಕಿಡಿಯಾಗುತ್ತಿದ್ದರು. ತತ್‌ಕ್ಷಣ ನಮ್ಮ ದೇಶಕ್ಕೆ ಇತರ ದೇಶದೊಂದಿಗೆ ಸಮಾನಸ್ಥಾನ ಕೊಡಬೇಕು, ಅದು ನಮ್ಮ ಜನ್ಮಸಿದ್ಧ ಹಕ್ಕು ಎಂತಲೇ ಲೋಕಮಾನ್ಯರು ನಂಬಿದ್ದರು. ಭಾರತದ ಸ್ವಾತಂತ್ರ್ಯ ಸಮರದಲ್ಲಿ ಸರ್ಕಾರವನ್ನು ಮುಳ್ಳುಮೊನೆಯಷ್ಟು ಕೂಡಾ ಉಳಿಸಲಿಲ್ಲ; ಕದನದಲ್ಲಿ ಕೃಪೆ ತೋರುತ್ತಲೂ ಇರಲಿಲ್ಲ, ಬೇಡುತ್ತಲೂ ಇರಲಿಲ್ಲ. ಭಾರತ ಪೂಜಿಸುತ್ತಿರುವ ಈ ಜೀವದ ಘನತೆಯನ್ನು ಆಂಗ್ಲರು ಅರಿತುಕೊಂಡಾರೆಂದೇ ನಾನು ಆಶಿಸುತ್ತೇನೆ.

ಇನ್ನೂ ಬೆಳಕು ಕಾಣದ ಸಾವಿರ ಸಂತಾನಗಳ ಕಾಲಕ್ಕೂ ಲೋಕಮಾನ್ಯರು ನವೀನ ಭಾರತದ ನಿರ್ಮಾಪಕರು ತಮಗಾಗಿ ಬಾಳಿ, ತಮಗಾಗಿಯೇ ಅಳಿದ ಹುತಾತ್ಮನೆಂದು ಅವರು ಪೂಜಿಸುತ್ತಾರೆ; ನಾ ಬಲ್ಲೆ. ಇಂಥ ಜೀವದ ಬಗ್ಗೆ ಮೃತ ಎನ್ನುವುದೂ ದ್ರೋಹ. ಅವರ ನಿತ್ಯಾತ್ಮ ನಮ್ಮಲ್ಲಿ ವಾಸಿಸುತ್ತಿದೆ; ಎಂದೆಂದಿಗೂ ವಾಸಿಸುತ್ತದೆ. ತಿಲಕರ ಧೈರ್ಯ, ಸರಳತೆ, ಅದ್ಭುತ ಕರ್ತವ್ಯದಕ್ಷತೆ, ಅಮಿತ ದೇಶಪ್ರೇಮವನ್ನು ನಮ್ಮ ಬಾಳಿನಲ್ಲೂ ನಾವು ಬೆಳೆಸಿಕೊಳ್ಳೋಣ. ಅದೇ ಅವರ ಅಮರ ಸ್ಮಾರಕ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ!

೪-೮-೧೯೨೦

# ಗೋಖಲೆ, ತಿಲಕ್ ಮತ್ತು ಮೆಹತಾ

[ ೧೯೨೧ ಜುಲೈ ೧೩ 'ಯಂಗ್ ಇಂಡಿಯಾ'ದಲ್ಲಿ ಬರೆದ ಈ ಲೇಖನದಲ್ಲಿ ತಮ್ಮ ಸಾರ್ವಜನಿಕ ಜೀವನದ ಆರಂಭದಲ್ಲಿ ಪರಿಚಯವಾದ ಮೂವರು ಹಿರಿಯರ ವ್ಯಕ್ತಿತ್ವದ ವಿಶಿಷ್ಟ ಗುಣಗಳನ್ನು ಗಾಂಧೀಜೀ, ಚಿತ್ರಿಸಿದಾರೆ ]

ನನಗೊಂದು ವಿಚಿತ್ರ ಅನಾಮಿಕ ಪತ್ರ ಬಂದಿದೆ. ಅದರಲ್ಲಿ ಲೋಕಮಾನ್ಯರಿಗೆ ಪ್ರಿಯವಾದ ಕಾರ್ಯವನ್ನು ಕೈಗೊಂಡಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, 'ಅವರ ಆತ್ಮ ನಿಮ್ಮಲ್ಲಿ ವಾಸಮಾಡುತ್ತಿದೆ. ಅವರಿಗೆ ತಕ್ಕ ಅನುಯಾಯಿಗಳಾಗಿ' ಎಂದು ಹೇಳಿದ್ದಾರೆ. ಜೊತೆಗೆ, ಸ್ವರಾಜ್ಯ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಎದೆಗುಂದ ಬಾರದೆಂದು ನನಗೆ ಬುದ್ಧಿವಾದ ಹೇಳಿದ್ದಾರೆ, ರಾಜನೀತಿಯಲ್ಲಿ ನಾನು ಗೋಖಲೆಯ ಶಿಷ್ಯ ಎಂದುಕೊಂಡುದು ಬರೀ ಮೋಸ ಎಂದು ದೂರಿ ಕಾಗದ ಮುಗಿಸಿದ್ದಾರೆ. ಕಾಗದ ಬರೆದವರು ಹೆಸರು ಹಾಕದೆ ಬರೆವ ದಾಸ್ಯಬುದ್ಧಿಯನ್ನು ಬಿಡಬೇಕು. ಸ್ವರಾಜ್ಯದ ಭಾವನೆ ಬೆಳೆಸಿಕೊಳ್ಳುತ್ತಿರುವ ನಾವು, ಮನಸಿನಲ್ಲಿರುವುದನ್ನು ಸ್ಪಷ್ಟವಾಗಿ ಹೆದರಿಕೆಯಿಲ್ಲದೆ ಹೇಳುವುದನ್ನು ಕಲಿಯಬೇಕು. ಈ ಕಾಗದದ ವಿಷಯ ಸಾರ್ವಜನಿಕ ಪ್ರಾಮುಖ್ಯತೆಯನ್ನುಳ್ಳದ್ದರಿಂದ, ಇದಕ್ಕೆ ಉತ್ತರ ಕೊಡಲೇಬೇಕಾಗಿದೆ.

ನಾನು ದಿವಂಗತ ಲೋಕಮಾನ್ಯರ ಶಿಷ್ಯನಲ್ಲ, ಆ ಗೌರವ ನನಗಿಲ್ಲ. ದೇಶದ ಕೋಟಿ ಜನರಂತೆ ನಾನೂ ಅವರನ್ನು—ಅವರ ಅಜೇಯ ಮನೋನಿರ್ಧಾರ, ಅದ್ಭುತ ಪಾಂಡಿತ್ಯ, ದೇಶಪ್ರೇಮ ಎಲ್ಲಕ್ಕಿಂತ ಹೆಚ್ಚಾಗಿ ಅವರ ಸ್ವಂತ ಜೀವನದ ಶುದ್ಧತೆ, ತ್ಯಾಗಬುದ್ಧಿಗಳಾಗಿ ಮೆಚ್ಚಿಕೊಂಡಿದೇನೆ. ಈ ಕಾಲದಲ್ಲಿ ಅವರ ಹಾಗೆ ಜನರನ್ನು ಸೆಳೆದ ವ್ಯಕ್ತಿ ಮತ್ತೊಬ್ಬರಿಲ್ಲ. ನಮ್ಮಲ್ಲಿ ಸ್ವರಾಜ್ಯದ ಉಸಿರು ಊದಿದವರು ಲೋಕಮಾನ್ಯರು. ಈಗಿನ ಸರಕಾರದ ದೋಷ, ಕೆಡಕು ಮತ್ತಾರಿಗೂ ಅವರಷ್ಟು ಅರಿವಾಗಿರಲಿಲ್ಲ. ಅವರ ಉತ್ತಮ ಶಿಷ್ಯರು ಮಾಡುವಂತೆಯೇ ನಾನೂ ಅಷ್ಟೇ ಸತ್ಯವಾಗಿ ಅವರ ಸಂದೇಶವನ್ನು ಜಗತ್ತಿಗೆ ಸಾರಲು ಯತ್ನಿಸುತ್ತೇನೆ.

ಆದರೂ ನನಗೇ ಗೊತ್ತಿದೆ: ನನ್ನದು ತಿಲಕರ ದಾರಿಯಲ್ಲ. ಎಂತಲೇ ಕೆಲವು ಮಹಾರಾಷ್ಟ್ರ ನಾಯಕರೊಡನೆ ವ್ಯವಹಾರ ಮಾಡುವಾಗ ನನಗೆ ಕಷ್ಟವಾಗುತ್ತಿದೆ. ಆದರೆ ತಿಲಕರು ನನ್ನ ದಾರಿಯನ್ನು ನಂಬದೆ ಇರಲಿಲ್ಲ. ನಾ ಬಲ್ಲೆ, ಅವರಿಗೆ ನನ್ನಲ್ಲಿ ನಂಬಿಕೆಯಿತ್ತು. ಸಾಯುವುದಕ್ಕೆ ಹದಿನೈದೇ ದಿನ ಮೊದಲು, ಕೆಲವು ಗೆಳೆಯರೆದುರು ಅವರು

ನನಗೆ ಹೇಳಿದರು: ನನ್ನ ವಿಧಾನವನ್ನು ಜನ ಅನುಸರಿಸುವಂತೆ ಮಾಡಬಹುದಾದರೆ ನನ್ನದು ಉತ್ಕೃಷ್ಟ ವಿಧಾನ ಎಂದು. ಇದೇ ಅವರು ನನಗೆ ಹೇಳಿದ ಕೊನೆಯ ಮಾತು. ಅವರ ಸಂಶಯ ಅವರಿಗೆ ಇದ್ದೇ ಇತ್ತು. ನನಗೆ ಮಾತ್ರ ಬೇರೆ ದಾರಿಯೇ ಗೊತ್ತಿಲ್ಲ. ಅಂತಿಮ ಪರೀಕ್ಷೆಯ ಕಾಲ ಬರುವ ಹೊತ್ತಿಗಾದರೂ ದೇಶ ಅಹಿಂಸಾತ್ಮಕ ಅಸಹಕಾರ ವಿಧಾನವನ್ನು ಅರ್ಥಮಾಡಿಕೊಂಡು ಆ ಪರೀಕ್ಷೆಗೆ ಸಿದ್ಧವಾದೀತೆಂದು ನಾ ಬಯಸುತ್ತೇನೆ. ಅಷ್ಟೆ. ನನ್ನ ಮಿತಿ ನನಗೆ ಗೊತ್ತಿಲ್ಲದೆ ಇಲ್ಲ. ನಾನು ಪಂಡಿತನಲ್ಲ. ಅವರಿಗಿದ್ದ ಸಂಸ್ಥೆ ಕಟ್ಟುವ ಶಕ್ತಿಯಾಗಲಿ, ನಡೆಸಲು ಶಿಸ್ತಿಗೆ ಒಳಪಟ್ಟ ಸಂಘವಾಗಲಿ ನನಗಿಲ್ಲ; ೨೪ ವರ್ಷ ಕಾಲ ದೇಶಭ್ರಷ್ಟನಾಗಿದ್ದವನು ನಾನು. ಭಾರತದ ಬಗ್ಗೆ ಲೋಕಮಾನ್ಯರಿಗಿದ್ದಷ್ಟು ಅನುಭವ ನನಗಿಲ್ಲ. ನಮ್ಮಿಬ್ಬರಿಗೂ ಸಂಪೂರ್ಣ ಸಮಾನವಾಗಿದ್ದ ಸಂಗತಿ ಎರಡು: ದೇಶ ಪ್ರೇಮ, ಸ್ವರಾಜ್ಯ ಸಾಧಿಸುವ ಛಲ. ಅನಾಮಿಕ ಪತ್ರ ಲೇಖಕರಿಗೆ ನಾನಿಷ್ಟು ಭರವಸೆ ಕೊಡಬಲ್ಲೆ. ಮೃತರ ಬಗ್ಗೆ ಎಲ್ಲರಿಗಿಂತ ಹೆಚ್ಚಾಗಿ ನನಗೆ ಗೌರವವಿದೆ, ಸ್ವರಾಜ್ಯ ಸಾಧನೆಗಾಗಿ ಲೋಕಮಾನ್ಯರ ಶಿಷ್ಯರ ಹೆಗಲಿಗೆ ಹೆಗಲುಕೊಟ್ಟು ನಾನೂ ದುಡಿಯುತ್ತೇನೆ. ತಿಲಕರಿಗೆ ನಾವು ಅರ್ಪಿಸಬಹುದಾದ, ಅವರು ಒಪ್ಪಬಹುದಾದ ಕಾಣಿಕೆ: ಆದಷ್ಟು ಬೇಗ ಭಾರತಕ್ಕೆ ಸ್ವರಾಜ್ಯ ಗಳಿಸುವುದು. ಇದೊಂದರಿಂದಲೇ ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ.

ಶಿಷ್ಯವೃತ್ತಿ ಪವಿತ್ರವಾದ ಆತ್ಮ ವಿಚಾರ. ಹೇಗಾದರಾಗಲಿ: ನಾನು ೧೮೮೮ರಲ್ಲಿ ದಾದಾಭಾಯಿಯ ಚರಣಕ್ಕೆ ಎರಗಿದೆ. ನನಗೂ ಅವರಿಗೂ ಎಷ್ಟೋ ದೂರವಿದ್ದ ಹಾಗೆ ಅನಿಸಿತು ಆಗ. ನಾನವರಿಗೆ ಮಗನಾಗಬಹುದೇ ಹೊರತು ಶಿಷ್ಯನಾಗಲು ಸಾಧ್ಯವೇ ಇಲ್ಲ. ಶಿಷ್ಯ ಮಗನಿಗಿಂತ ಹೆಚ್ಚು. ಶಿಷ್ಯವೃತ್ತಿ, ಪುನರ್ಜನ್ಮ, ಸ್ವಯಂ ಶರಣಾಗತಿ. ೧೮೯೬ರಲ್ಲಿ ದಕ್ಷಿಣ ಆಫ್ರಿಕದ ಕೆಲಸದ ವಿಚಾರವಾಗಿ ಭಾರತದ ಎಲ್ಲಾ ಪ್ರಮುಖ ನಾಯಕರನ್ನೂ ನೋಡಿದೆ. ನ್ಯಾಯಮೂರ್ತಿ ರಾನಡೆಯನ್ನು ನೋಡಿ ದಿಗಿಲಾಯಿತು. ಅವರ ಇದಿರಿನಲ್ಲಿ ಮಾತನಾಡಲು ನಾಲಿಗೆಯೇ ಏಳಲಿಲ್ಲ. ಬದ್ರುದ್ದೀನ್ ತಾಯಬ್ಜಿ ತಂದೆಯ ಹಾಗೆ ಕಂಡರು; ರಾನಡೆ, ಫಿರೋಜ್ ಷಾ ಹೇಳಿದ ಹಾಗೆ ಮಾಡು ಎಂದರು. ಫಿರೋಜ್ ಷಾ ನನ್ನ ಪೋಷಕರಾದರು. ಅವರ ಮಾತು ನನಗೆ ಶಾಸನವಾಯಿತು. 'ಸೆಪ್ಟೆಂಬರ್ ೨೬ರ ದಿನ ನೀನು ಸಾರ್ವಜನಿಕ ಸಭೆಯಲ್ಲಿ ಮಾತನಾಡಬೇಕು. ಕಾಲಕ್ಕೆ ಸರಿಯಾಗಿ ಬರಬೇಕು' ಎಂದರು. ಆಜ್ಞೆಯನ್ನು ಶಿರಸಾವಹಿಸಿದೆ. ೨೫ರ ಸಾಯಂಕಾಲ ಬಂದು ನನ್ನನ್ನು ನೋಡು ಎಂದು ಹೇಳಿದರು. ಹೋಗಿ ನೋಡಿದೆ.

'ನಿನ್ನ ಭಾಷಣ ಬರೆದಿದೀಯಾ' ಎಂದು ವಿಚಾರಿಸಿದರು ಫಿರೋಜ್ ಷಾ.

'ಇಲ್ಲ'

'ಹಾಗಾದರಾಗದು. ಈ ದಿನ ರಾತ್ರಿ ಅದನ್ನು ಬರೆಯಲು ಸಾಧ್ಯವಿದೆಯೇನು ನಿನಗೆ ?'

'ಮುನ್ಶಿ! ಈ ರಾತ್ರಿ ನೀನು ಗಾಂಧೀ ಮನೆಗೆ ಹೋಗಿ ಅವರ ಭಾಷಣದ ಹಸ್ತಪ್ರತಿ ತೆಗೆದುಕೊಂಡು ಬರಬೇಕು. ಇವೊತ್ತು ರಾತ್ರಿಯೇ ಅದನ್ನು ಅಚ್ಚು ಮಾಡಿಸಿ ನನಗೊಂದು ಪ್ರತಿ ಕಳಿಸಿಕೊಡು' ಎಂದು ಹೇಳಿ ನನ್ನ ಕಡೆ ತಿರುಗಿ 'ಗಾಂಧೀ, ಭಾಷಣ ಚಿಕ್ಕದಾಗಿರಲಿ. ಬೊಂಬಾಯಿ ಜನಕ್ಕೆ ದೀರ್ಘ ಭಾಷಣವೆಂದರೆ ಬೇಸರ' ಎಂದರು. ನಾನದಕ್ಕೆ ಅಗಲಿ ಎಂದು ತಲೆ ಬಾಗಿದೆ.

ಬೊಂಬಾಯಿ ಸಿಂಹ ನನಗೆ ಅಪ್ಪಣೆ ಪಾಲಿಸುವುದನ್ನು ಕಲಿಸಿತು ನನ್ನನ್ನು ಅವರು ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಲಿಲ್ಲ. ಅದಕ್ಕವರು ಪ್ರಯತ್ನಿಸಲೂ ಇಲ್ಲ

ಅಲ್ಲಿಂದ ನಾನು ಪೂನಕ್ಕೆ ಹೋದೆ. ಪೂನಾಕ್ಕೆ ನಾನು ಪೂರಾ ಹೊಸಬ. ನಾನಿಳಿದುಕೊಂಡಿದ್ದ ಮನೆಯಾತ ನನ್ನನ್ನು ಮೊದಲು ತಿಲಕರ ಬಳಿಗೆ ಕರೆದುಕೊಂಡು ಹೋದ. ನಾ ಹೋದಾಗ ತಿಲಕರ ಸುತ್ತ ಅವರ ಗೆಳೆಯರ ಗುಂಪು ನೆರೆದಿತ್ತು. ನಾ ಹೇಳಿದ್ದೆಲ್ಲಾ ಕೇಳಿ. ನಿಜ, ನಿಜ. ಇದಕ್ಕಾಗಿ ಒಂದು ಸಾರ್ವಜನಿಕ ಸಭೆ ಸೇರಿಸಲೇ ಬೇಕು. ಆದರೆ ನಿನಗೆ ಗೊತ್ತಿದೆಯೋ ಇಲ್ಲವೋ; ನಮ್ಮ ದುರದೃಷ್ಟಕ್ಕೆ ಇಲ್ಲಿ ಎರಡು ಪಕ್ಷಗಳಿವೆ ಯಾವ ಪಕ್ಷಕ್ಕೂ ಸೇರದವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಹೋಗಿ ಡಾ|| ಭಾಂಡಾರಕರರನ್ನು ನೋಡುತ್ತೀಯೇನು ? ಎಂದರು ಅಗಲಿ ಎಂದು ಅಲ್ಲಿಂದ ಹೊರಟೆ ನನ್ನ ಮೇಲೆ ತಿಲಕರು ಮಾಡಿದ ಪ್ರಥಮ ಪ್ರಭಾವ ಎಂಥದೋ ನಾ ಹೇಳಲಾರೆ. ಇಷ್ಟು ಮಾತ್ರ ನಿಜ: ಅವರು ತಮ್ಮ ಸಲಿಗೆಯಿಂದ ನನ್ನ ಹೆದರಿಕೆಯನ್ನು ಓಡಿಸಿದರು ಅಲ್ಲಿಂದ ಗೋಖಲೆಯವರ ಬಳಿಗೆ; ಆಮೇಲೆ ಡಾ|| ಭಾಂಡಾರಕರ ಹತ್ತಿರಕ್ಕೆ ಡಾ|| ಭಾಂಡಾರಕರ್ ನನ್ನನ್ನು ನೋಡಿ, ಶಿಷ್ಯನನ್ನು ಗುರು ಮಾತನಾಡಿಸುವಂತೆ ಮಾತನಾಡಿಸಿದರು.

'ಒಳ್ಳೆ ಉತ್ಸಾಹಿ ಯುವಕನಾಗಿ ಕಾಣುತ್ತೀಯೆ ನೀನು. ಇಂಥ ಬಿಸಿಲು ಹೊತ್ತಿನಲ್ಲಿ ಯಾರೂ ನನ್ನನ್ನು ನೋಡಲು ಬರುವುದಿಲ್ಲ. ಈಗೀಗ ನಾನು ಯಾವ ಸಾರ್ವಜನಿಕ ಸಭೆಗಳಿಗೂ ಹೋಗುವುದಿಲ್ಲ. ಆದರೂ ನೀ ಹೇಳುತ್ತಿರುವುದು ತುಂಬ ದುಃಖದ ಕಥೆ ಎಂತಲೇ ನಿನಗಾಗಿ ಈ ದಿನ ಸಭೆಗೆ ಬರುತ್ತೇನೆ'

ಜ್ಞಾನ ಸೂಸುವ ಮುಖ ಅವರದು. ಅವರನ್ನು ಮನಸಿನಲ್ಲೇ ಪೂಜಿಸಿದೆ ಆದರೆ ನನ್ನೆದೆಯ ಪುಟ್ಟ ಸಿಂಹಾಸನದಲ್ಲಿ ಅವರಿಗೆ ಸ್ಥಳವಿರಲಿಲ್ಲ. ಅದಿನ್ನೂ ಬರಿದಾಗೇ ಇತ್ತು. ಪೂಜ್ಯರು ಬೇಕಾದಷ್ಟು ಜನ ಇದ್ದರಾಗಲಿ, ದೊರೆ ಮಾತ್ರ ಇನ್ನೂ ಇರಲಿಲ್ಲ.

ಅದೇ ಗೋಖಲೆಯವರ ವಿಚಾರವೇ ಬೇರೆ. ಕಾಲೇಜಿನ ಆವರಣದಲ್ಲೇ ಇದ್ದ ಅವರ ಮನೆಯಲ್ಲಿ ಗೋಖಲೆಯವರನ್ನು ಹೋಗಿ ನೋಡಿದೆ. ಏತಕ್ಕೆಂದು ನಾ ಹೇಳಲಾರೆ. ಅವರನ್ನು ನೋಡಿದಾಗ ಬಹು ದಿನದ ಮಿತ್ರನನ್ನು ಕಂಡ ಹಾಗೆ ಆಯಿತು; ಅಲ್ಲ. ಬಹು ದಿನದ ಮೇಲೆ ತಾಯಿಯನ್ನು ನೋಡಿದ ಹಾಗಾಯಿತು. ಅವರ ಸೌಮ್ಯ ಮುಖ ನನ್ನನ್ನು ಸೆಳೆದು ಬಿಟ್ಟಿತು. ನನ್ನ ಬಗ್ಗೆ, ದಕ್ಷಿಣ ಆಫ್ರಿಕದ ಹೋರಾಟದ ಬಗ್ಗೆ ಅವರು ಕೇಳಿದ ಸೂಕ್ಷ್ಮ ಪ್ರಶ್ನೆಗಳಿಗೆ ಒಂದೇ ಗಳಿಗೆಯಲ್ಲಿ ಮಾರು ಹೋಗಿ, ಅವರನ್ನು ನನ್ನ ಎದೆಯ ಮಂದಿರದಲ್ಲಿಟ್ಟು ಪೂಜಿಸತೊಡಗಿದೆ. ಅವರಿಂದ ಅಗಲುವಾಗ ನನಗೆ ನಾನೆ ಹೇಳಿಕೊಂಡೆ, 'ನೀವು ನನ್ನವರು'! ಅಂದಿನಿಂದ ಒಂದು ದಿನವಾದರೂ ಗೋಖಲೆ ನನ್ನನ್ನು ಮರೆಯಲಿಲ್ಲ; ಕೈಬಿಡಲಿಲ್ಲ. ೧೯೦೧ರಲ್ಲಿ ನಾನು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಎರಡನೆಯ ಸಲ ಬಂದಾಗ, ನಮ್ಮಿಬ್ಬ ಸ್ನೇಹ ಮತ್ತಿಷ್ಟು ಹೊಸೆದುಕೊಂಡಿತು. ನನ್ನನ್ನು ತಮ್ಮ ಅಂಗೈಯಲ್ಲಿಟ್ಟುಕೊಂಡು ತಿದ್ದತೊಡಗಿದರು, ನನ್ನ ನಡೆ, ನುಡಿ, ಊಟ, ಉಡಿಗೆ ಎಲ್ಲವನ್ನೂ. ನನ್ನ ತಾಯಿಗೆ ಕೂಡಾ ಗೋಖಲೆಯವರಿಗೆ ನನ್ನಲ್ಲಿದ್ದಷ್ಟು ಆಸಕ್ತಿ ಇತ್ತೋ ಇಲ್ಲವೋ! ನಮ್ಮಿಬ್ಬರ ನಡುವೆ, ನನಗೆ ತಿಳಿದ ಮಟ್ಟಿಗೆ ಯಾವ ಮುಚ್ಚುಮರೆಯೂ ಇರಲಿಲ್ಲ. ನಿಜವಾಗಿಯೂ ಇದೊಂದು ಪ್ರಥಮ ನೋಟದಲ್ಲಿ ಚಿಗುರಿದ ಪ್ರೇಮದ ನಿದರ್ಶನ, ೧೯೧೩ರ ವಿಷಪರೀಕ್ಷೆಯಲ್ಲಿ ಕೂಡಾ ಇದು ಸೋಲಲಿಲ್ಲ. ರಾಜಕೀಯ ಕೆಲಸಗಾರರಲ್ಲಿ ನಾನು ಇರಬೇಕೆಂದು ಬಯಸುತ್ತಿದ್ದ ಗುಣಗಳೆಲ್ಲಾ ಅವರಲ್ಲಿತ್ತು—ಸ್ಫಟಿಕದಷ್ಟು ಶುದ್ಧ, ಹಸುವಿನಷ್ಟು ಸಾಧು, ಸಿಂಹದಂಥ ಪರಾಕ್ರಮ; ಕುಂದೇನೋ ಎನಿಸುವಷ್ಟು ಸೌಜನ್ಯ. ಅವರಲ್ಲಿ ಇವಾವುದೂ ಇಲ್ಲದಿದ್ದರೂ, ನನ್ನ ಪಾಲಿಗಂತೂ ಚಿಂತೆಯಿಲ್ಲ. ತೆಗಳುವಂಥ ದೋಷದ ಅಂಶವೂ ಅವರಲ್ಲಿರಲಿಲ್ಲ. ನನಗಷ್ಟು ಸಾಕು. ರಾಜಕೀಯ ರಂಗದಲ್ಲಿ ಅವರಷ್ಟು ಪರಿಪೂರ್ಣ ಮನುಷ್ಯನನ್ನು ನಾ ಕಾಣೆ. ಹಾಗೆಂದರೆ ನಮ್ಮ ನಡುವೆ ಏನೂ ಅಭಿಪ್ರಾಯಭೇದ ಇರಲೇ ಇಲ್ಲವೆಂತಲ್ಲ. ೧೯೦೧ರಲ್ಲೇ ವಿಧವಾವಿವಾಹದಂಥ ಸಾಮಾಜಿಕ ಸುಧಾರಣೆಗಳ ಬಗ್ಗೆ ನಮ್ಮಲ್ಲಿ ಅಭಿಪ್ರಾಯಭೇದವಿತ್ತು. ಪಾಶ್ಚಾತ್ಯ ನಾಗರಿಕತೆಯ ಬಗ್ಗೆ ನಮ್ಮಿಬ್ಬರಲ್ಲಿ ಒಮ್ಮತವಿರಲಿಲ್ಲ. ನನ್ನ ತೀವ್ರ ಅಹಿಂಸಾವಾದವನ್ನವರು ಸ್ಪಷ್ಟವಾಗೇ ಖಂಡಿಸಿದರು. ಆದರೆ ಈ ಭೇದಗಳು ನಮಗೆ ಲೆಕ್ಕವೇ ಇರಲಿಲ್ಲ; ಯಾವುದೂ ನಮ್ಮನ್ನು ಅಗಲಿಸಲಾಗಲಿಲ್ಲ. ಈ ದಿನ ಅವರು ಬದುಕಿದ್ದರೆ ಏನಾಗುತ್ತಿತ್ತೆಂದು ಯೋಚಿಸುವುದು ದೈವದ್ರೋಹದಂಥ ನೀಚ ಕೆಲಸ. ಬದುಕಿದ್ದಿದ್ದರೆ, ನಾನವರ ಕೈಕೆಳಗೆ ಕೆಲಸ ಮಾಡುತ್ತಿದ್ದೆ; ಇಷ್ಟು ಮಾತ್ರ ನಾ ಬಲ್ಲೆ. ಅನಾಮಿಕ ಪತ್ರ ಲೇಖಕರು ನನ್ನ ರಾಜಕೀಯ ಶಿಷ್ಯತ್ವದ ಬಗ್ಗೆ ಮಾಡಿದ ಅಪಾದನೆಯಿಂದ ನನ್ನ ಮನ ನೊಂದಿದೆ. ಎಂತಲೇ ಈ ಸ್ಪಷ್ಟೀಕರಣ. ಈಗ ಮಾತನಾಡಲಾರದಿರುವ ಗೋಖಲೆಯವರ

ಬಗ್ಗೆ ನಾ ಕರ್ತವ್ಯಲೋಪ ಮಾಡಿದೆನೇ? ಗೋಖಲೆಯವರ ಪ್ರತಿಪಕ್ಷದವರ ಶಿಬಿರದಲ್ಲಿ ನಾನಿದೇನೆ ಎಂತ ಜನ ತಿಳಿದುಕೊಂಡಿರುವಾಗ, ಸಾರಿ ಸಾರಿ ಹೇಳುತ್ತೇನೆ. ನಾ ಗೋಖಲೆಯವರ ಶಿಷ್ಯ; ಹಾಗೆಂದು ಹೇಳುವುದು ನನ್ನ ಕರ್ತವ್ಯ.

# ಹುತಾತ್ಮ

ಈ ತಿಂಗಳ (ಜೂನ್ ೧೯೩೧) ಮೊದಲ ಭಾಗದಲ್ಲಿ, ಬೊಂಬಾಯಲ್ಲಿ ವರ್ಕಿಂಗ್ ಕಮಿಟಿ ನಡೆಯುತ್ತಿದ್ದಾಗ, ಡೋಂಗ್ರಿಯಲ್ಲೊಂದು ಸಾರ್ವಜನಿಕ ಸಭೆ ಸೇರಿತ್ತು. ಅಲ್ಲಿ ದೊಡ್ಡ ಹೊಡೆದಾಟವಾಗಿ, ಒಬ್ಬಾತ ಚೂರಿ ಇರಿತದಿಂದ ಮೃತನಾದ. ಈ ವಿಚಾರವಾಗಿ ತುಂಬಾ ಗದ್ದಲವಾಯಿತಾದರೂ, ಸತ್ತವನು ಯಾರೋ ಗೊತ್ತಿಲ್ಲದವನು, ಗೊತ್ತಾಗದವನೆಂದೇ ತಿಳಿದಿದ್ದೆವು. ಬೊಂಬಾಯಿ ಬೋರ್ಸದಿಗೆ ಹಿಂದಿರುಗಿದ ಮೇಲೆ ಶ್ರೀ ಕಿಶೋರಿಲಾಲ ಮಶ್ರುವಾಲಾ ಈ ದುರಂತವನ್ನು ಖಂಡಿಸಿ, ಸತ್ತವನ ಬಗೆ ಅಷ್ಟಿಷ್ಟು ವಿವರ ತಿಳಿಸಿ ನನಗೊಂದು ಕಾಗದ ಬರೆದರು. ಆ ಬಳಿಕ ನಾನು ಅವರಿಗೆ ಪೂರಾ ವಿವರ ತಿಳಿಸುವಂತೆ ಬರೆದೆ. ಈಗ ಎಲ್ಲಾ ಗೊತ್ತಾಗಿದೆ

ಆ ದುರ್ದಿನದ ರಾತ್ರಿ ಉದ್ರಿಕ್ತ ಮುಸಲ್ಮಾನನೊಬ್ಬನ ಚೂರಿ ಇರಿತದಿಂದ ಸತ್ತ ಧೀರ, ಸುಗುಣಿ ಪನ್ನಾಲಾಲನಿಗೆ, ಸತ್ತಾಗ ೨೨ ವರ್ಷ ವಯಸ್ಸು. ಆ ದಿನ ಸಭೆಯಲ್ಲಿ ಖಾನ್ ಸಾಹೆಬ್ ಅಬ್ದುಲ್ ಗಫಾರ್ ಖಾನ್ ಭಾಷಣ ಮಾಡುವರೆಂದು ಗೊತ್ತಾಗಿತ್ತು. ಅವರ ಭಾಷಣ ಕೇಳಲೆಂದೇ ಪನ್ನಾಲಾಲ, ತನ್ನ ತಂದೆ ತಮ್ಮನೊಂದಿಗೆ, ಆ ದಿನದ ಸಭೆಗೆ ಹೋದ. ಖಾನ್‌ಸಾಹೇಬರ ಭಾಷಣ ಕೇಳಿದ್ದಾದ ಮೇಲೆ ಇವರು ಒಂದು ಕುದುರೆಗಾಡಿ ಕರೆದು, ಅದರಲ್ಲಿ ಕೂತುಕೊಂಡರು. ಖಾ ಯುಟ್ಟ ಇವರನ್ನು ನೋಡಿ, ಇವರೂ ಯಾರೋ ರಾಷ್ಟ್ರೀಯ ನಾಯಕರೇ ಎಂದುಕೊಂಡರು ಜನ. ಕಿರಿಚಾಡುತ್ತಾ ಇವರನ್ನು ಮುತ್ತಿದರು. ಕಲ್ಲಿನ ಮಳೆಯೇ ಸುರಿಯಿತು ಇವರ ಮೇಲೆ. ಎಲ್ಲರಿಗೂ ಗಾಯವಾಯಿತು. ಪನ್ನಾಲಾಲನ ಎಡ ಹುಬ್ಬಿನಿಂದ ನೆತ್ತರು ಸುರಿಯುತ್ತಿತ್ತು. ಆದರೆ ತನ್ನ ತಂದೆಯ ದುಃಖ ತಗ್ಗಿಸಲು ಪನ್ನಾಲಾಲ ಇದಾವುದನ್ನು ಲೆಕ್ಕ ಮಾಡಲಿಲ್ಲ. ಇದ್ದಕ್ಕಿದ್ದಂತೇ ಎಡಪಕ್ಕೆಯಲ್ಲಿ ಚೂರಿ ಇರಿಯಿತು. ಗಾಯದಿಂದ ರಕ್ತ ಛಿಲ್ಲೆಂದು ಚಿಮ್ಮಿತು. ಕರುಳು ಹೊರಗೆ ಬಂತು. ಈ ನೋವನ್ನೂ ಗಂಡುತನದಿಂದ ಸಹಿಸಿ 'ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಪಟ್ಟಿ ಕಟ್ಟಿದರೆ ಎಲ್ಲಾ ಸರಿಹೋಗುತ್ತದೆ' ಎಂದ. ಆದರೆ ಎಲ್ಲಾ ಸರಿಹೋಗಲಿಲ್ಲ. ವೈದ್ಯೋಪಚಾರದಿಂದ ಏನೂ ಉಪಯೋಗವಾಗಲಿಲ್ಲ. ಮರುದಿನ ಈ ಧೀರ ಯುವಕ ಇಹಲೋಕ ಬಿಟ್ಟ.

ದೊಡ್ಡ ಶ್ರೀಮಂತರ ಮಗ ಪನ್ನಾಲಾಲ. ಇವನ ತಂದೆ ನಗೀನಲಾಲ ಝುರಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಒಡವೆ ವ್ಯಾಪಾರಿ. ಇವರ ಪ್ರಾಮಾಣಿಕತೆ ಊರಿನಲ್ಲಿ ಎಲ್ಲರ ನಂಬಿಕೆ, ಗೌರವ ಗಳಿಸಿಕೊಟ್ಟಿತ್ತು ಇವರಿಗೆ. ಪನ್ನಾಲಾಲನ ಚಿಕ್ಕಪ್ಪ ಜೋಧಪುರದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು. ಕೇವಲ ಹದಿನೆಂಟು ತಿಂಗಳ ಹಿಂದೆ ಮದುವೆಯಾಗಿತ್ತು ಇವನಿಗೆ; ಆ ಪುಟ್ಟ ವಿಧವೆಯ ಗೋಳು ಹೇಳಲಿಕ್ಕಾಗದು. ತಂದೆ ತಾಯಿ ರಾಷ್ಟ್ರೀಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿ, ತುಂಬಾ ಸರಳ ಜೀವನ ನಡೆಸುತ್ತಿದಾರೆ. ದೇಶೀ ವಿದ್ಯಾಶಾಲೆಯಲ್ಲಾಗಿತ್ತು ಪನ್ನಾಲಾಲನ ಶಿಕ್ಷಣ. ಆರನೆ ತರಗತಿಯವರೆಗೆ ಓದಿ, ಪನ್ನಾಲಾಲ ತನ್ನ ತಂದೆಗೆ ವ್ಯಾಪಾರದಲ್ಲಿ ನೆರವಾಗಲೆಂದು ಶಾಲೆ ಬಿಟ್ಟ. ಆದರೆ ದೇಶದ ಸೇವೆ ಮಾತ್ರ ಬಿಡಲಿಲ್ಲ. ವಡಾಲಾ ಉಪ್ಪಿನ ಕಾರ್ಖಾನೆಯ ಮೇಲೆ ದಾಳಿ ಮಾಡಿ, ಲಾಠಿ ಏಟು ತಿಂದವರಲ್ಲಿ ಇವನೂ ಒಬ್ಬ. ಅಂದಿನ ಮೆರವಣಿಗೆಗಳಲ್ಲಿ ಸೇರುವುದೆಂದರೆ ಜೀವದಾಸೆ ಬಿಟ್ಟೇ ಸೇರಬೇಕಾಗಿತ್ತು. ಅದು ಅಂದಿನ ಮೆರವಣಿಗೆಗಳ ಲಕ್ಷಣ. ಆದರೇನು ಪನ್ನಾಲಾಲ ಪ್ರತಿಯೊಂದು ಮೆರವಣಿಗೆಯಲ್ಲೂ ಇರುತ್ತಿದ್ದ. ಸತ್ತರೂ ಬದುಕಿದಾನೆ ಪನ್ನಾಲಾಲ. ಅಂಥ ಧೀರಪುತ್ರನನ್ನು ಪಡೆದ ಆ ಮಾತಾಪಿತೃಗಳನ್ನು ನಾನು ಅಭಿನಂದಿಸುತ್ತೇನೆ. ಸಾವು, ಅದರಲ್ಲೂ ಇಂಥ ಸಾವಿನ ಹಿಂದೆ ಯಾವ ವ್ಯಥೆಯೂ ಇರಬಾರದು. ಆ ದೇಹ ಬೂದಿಯಾಗಿದೆ. ಆ ಬೂದಿಯಿಂದಲೇ ನಿಜವಾದ ಐಕ್ಯತೆಯ ಅವತಾರವಾಗುತ್ತದೆ. ಈ ಸಾವಿಗಾಗಿ ನಾವು ಕೆರಳದಿದ್ದರೆ, ಅಗತ್ಯವಾದರೆ ಇಂಥ ಬಲಿದಾನ ಇನ್ನೂ ಕೊಡಲು ಸಿದ್ಧವಾದರೆ, ಐಕ್ಯತೆಯ ಅಮೃತ ದಿನ ಬರುವುದು ಬಹಳ ದೂರವಿಲ್ಲ; ನಾ ಬಲ್ಲೆ.

ಪನ್ನಾಲಾಲ ಬಿಟ್ಟು ಹೋದ ವಿಧವೆಯ ಬಗ್ಗೆ ನಾ ಇಷ್ಟು ಹೇಳಬಲ್ಲೆ: ಅವನ ತಂದೆ ತಾಯಿಗಳಿಗೆ ಅವನ ಮೇಲಿದ್ದ ಪ್ರೇಮ, ಈ ಹುಡುಗಿಗೆ ಆಕೆ ಬಯಸುವ ಶಿಕ್ಷಣ ಕೊಡಿಸಲು ಪ್ರೇರಕವಾಗಲಿ, ಆಕೆ ದೊಡ್ಡವಳಾದಾಗ ಮತ್ತೆ ಮದುವೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಡಲಿ. ಈ ಯುಗದ ಧರ್ಮ ಅವರಿಗೆ ಅರ್ಥವಾಗಿದ್ದರೆ, ವಿಧವೆ ಗಂಡನ ಮನೆಯ ಸೊತ್ತು, ಅವರ ಆಳಾಗಿರಬೇಕು ಎಂಬ ಕುರುಡು ನಂಬಿಕೆಯನ್ನು ಅವರು ಕಿತ್ತೊಗೆಯಬೇಕು. ವಿಧುರನಿಗಿದ್ದಷ್ಟೇ ಹಕ್ಕು ವಿಧವೆಗೂ ಇದೆ. ಗಂಡಿಗಿದ್ದಷ್ಟೇ ಸ್ವಾತಂತ್ರ್ಯ ಆಕೆಗೂ ಇದೆ ಎಂಬುದನ್ನು ಆಕೆಗೆ ಕಲಿಸಬೇಕು

ಇಂಥ ಕೊಲೆಯನ್ನು ಒಪ್ಪುವ ಮುಸಲ್ಮಾನರಿಗೆ ನಾನೇನು ಹೇಳಲಿ? ನರಹತ್ಯೆಯಿಂದ ಇಸ್ಲಾಂ ಮತಕ್ಕಾಗಲಿ, ಆ ಮಾತಿನ ಅರ್ಥವಾದ ಶಾಂತಿಗಾಗಲಿ ಏನೂ ಉಪಕಾರವಾಗದು. ನಿರಪರಾಧಿಗಳ ಪ್ರಾಣಹತ್ಯೆ ಸರಿಯಲ್ಲ; ಪನ್ನಾಲಾಲ ಏನೂ ತಪ್ಪು ಮಾಡಿರಲಿಲ್ಲ. ಯಾರ ಎದೆ ಇಂಥ ಕೊಲೆಯನ್ನು ಒಪ್ಪುತ್ತದೆಯೋ, ಯಾರಿಂದ

ಇಂಥ ಪಾತಕಕೃತ್ಯ ಸಾಧ್ಯವಾಗಿದೆಯೋ, ಅಂಥವರ ಮೆಚ್ಚಿದ ಕಣ್ಣು ಪನ್ನಾಲಾಲನ ಬಲಿದಾನದಿ ದಲಾಪರ ತೆರೆದೀತೆಂದು ನನಗೆಷ್ಟೋ ಆಸೆಯಿದೆ. ಈ ನರಬಲಿ ನಡೆದ ಸ್ಥಳದಲ್ಲಿಯೆ ಹಿಂದೂ ಮುಸಲ್ಮಾನರಿಬ್ಬರೂ ಒಟ್ಟಾಗಿ ಸಭೆ ಸೇರಿ, ರಾಜಕೀಯ ಐಕ್ಯತೆ ಸಾರುವುದು ಸಾಧ್ಯವಿಲ್ಲವಾದರೆ ಹೋಗಲಿ, ಇಂಥ ಕೊಲೆ ಇನ್ನು ಮೇಲೆ ನಡೆಯದೆಂದಾದರೂ ಸಾರಲಾರರೇ? ಇಂಥ ಸಭೆ ಸೇರಿಸುವುದು ಅಸಾಧ್ಯವೇನೂ ಅಲ್ಲ. ಪನ್ನಾಲಾಲನ ತಾಯಿ ತಂದೆ, ಮನೆಯವರು ಈ ತಪ್ಪನ್ನು ಕ್ಷಮಿಸಿದಾರೆ; ನನಗೆ ಗೊತ್ತಿದೆ. ದ್ವೇಷದ ಕಿಡಿ ಹೊತ್ತಬಾರದೆಂದೇ ಕಾಂಗ್ರೆಸ್ ಕಮಿಟಿ ಬಹಿರಂಗ ಶವ ಸಂಸ್ಕಾರವನ್ನು ತಡೆಯಿತು. ಆ ಊರಿನಲ್ಲಿ ಅಂಥ ಸಭೆ ಸೇರಿಸುವುದು ಅನುಚಿತವಾಗಬಹುದಾದರೂ, ದೇಶದ ಬೇರೆ ಕಡೆ ಸಭೆ ಸೇರಿಸಿ, ನಿರ್ಭೀತಿಯಿಂದ ನಮ್ಮ ಭಾವನೆಯನ್ನು ಹೊರ ಸಾರಲು ನಮಗೆ ಸಾಧ್ಯವಾಗಲೇಬೇಕು.

೨೫-೬ ೧೯೪೧

# ದ್ವಿಜೇಂದ್ರನಾಥ ಠಾಕೂರ್

ದ್ವಿಜೇಂದ್ರನಾಥ ಠಾಕೂರರು* ಇನ್ನಿಲ್ಲವೆಂದು ನಂಬುವುದು ಕಷ್ಟ. ಬಡೋ ದಾದಾ ಅನಂತ ಶಾಂತಿಯನ್ನು ಹೊಂದಿದರೆಂದು ಶಾಂತಿನಿಕೇತನದಿಂದ ದುಃಖ ವಾರ್ತೆ ಬಂದಿದೆ. ದಾದಾಗೆ ೯೦ರ ಸನಿಯ. ಆದರೂ ಅವರ ಹುರುಪವೇನು, ಕಳೆಯೇನು! ಅವರ ಬಳಿ ಕೂತಾಗ ಇಷ್ಟು ಬೇಗ ಅವರ ಬಾಳು ನಂದಿಹೋದೀತು ಅನಿಸಲು ಸಾಧ್ಯವೆ ಇರಲಿಲ್ಲ. ಬಡೋ ದಾದಾರ ಮನೆತನ ಪ್ರತಿಭಾವಂತರ ಮನೆತನ. ಆ ವಂಶದಲ್ಲಿ ಅವರೂ ಹೆಸರಾದ ವ್ಯಕ್ತಿ. ಇಂಗ್ಲೀಷಿನಲ್ಲಿ ಹೇಗೋ ಹಾಗೆ ಸಂಸ್ಕೃತದಲ್ಲೂ ಸಮಾನ ಪಾಂಡಿತ್ಯ. ಬರೀ ಪಂಡಿತರೇ ಅಲ್ಲ - ವಿಶಾಲ ರಸಪ್ರವೃತ್ತಿಯ ಗಾಢ ಧಾರ್ಮಿಕ ವ್ಯಕ್ತಿ. ಉಪನಿಷತ್ತೇ ಅವರಿಗೆ ಪರಮ ಪ್ರಮಾಣ. ಉಪನಿಷದ್ವಾಕ್ಯಗಳಲ್ಲಿ ಅಷ್ಟು ಗಾಢ ವಿಶ್ವಾಸವಿದ್ದರೂ ಜಗತ್ತಿನ ಇತರ ಧರ್ಮಗ್ರಂಥಗಳ ಬೆಳಕು ಪಡೆಯಲೂ ಸಿದ್ಧರಾಗಿದ್ದರು. ತಾಯಿನಾಡೆಂದರೆ ಅವರಿಗೆ ಬಹು ಗೌರವ; ಪರಮ ಭಕ್ತನಿಗಿಂತ ಭಕ್ತರು. ಆದರೂ ಪರದೇಶ ದ್ವೇಷವಿರಲಿಲ್ಲ. ಅಹಿಂಸಾತ್ಮಕ ಅಸಹಕಾರದ ಆಧ್ಯಾತ್ಮಿಕ ಸೌಂದರ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಅದರ ರಾಜಕೀಯ ವೈಶಿಷ್ಟ್ಯವನ್ನೂ ಮೆಚ್ಚದಿರಲಿಲ್ಲ. ರಾಟೆಯನ್ನು ಪೂರ್ಣ ಮನಸ್ಸಿನಿಂದ ನಂಬಿದ್ದರು. ಆ ಹಣ್ಣು ಹಣ್ಣು ವಯಸ್ಸಿನಲ್ಲೂ

---

* ರವೀಂದ್ರನಾಥ ಠಾಕೂರರ ಹಿರಿಯಣ್ಣ. ಮೊದಲು ಉನ್ನತಾಧಿಕಾರದಲ್ಲಿದ್ದರು. ವೇದಾಂತಿ, ಯೋಗಿ. ರವೀಂದ್ರರ 'ಜೀವನಸ್ಮೃತಿ'ಯಲ್ಲಿ ಇವರ ವಿಷಯ ಬರುತ್ತದೆ.

ಖಾದೀ ಧರಿಸಿದ್ದರು. ಖರೆಯಾದ ಹುಡುಗಿಯರಂತೆ ಪ್ರಾಮಾಣಿಕ ವಿನಯ [illegible] ತೋರಿ
ಕೊಟ್ಟಿದ್ದರು. ಬರೇ [illegible] ಎಂದಾಗ ನನ್ನ [illegible]
ಮುಖರ್ಜಿ, ಶತ್ರುಘ್ನ, ದೇಶಸ್ಥೀಯ [illegible]
[illegible] ಗಳನ್ನು ಸನ್ಮಾನ [illegible] ಇತ್ತೇನೆ

[illegible]

---

# ಚಿತ್ತರಂಜನ ದಾಸ

ಚಿತ್ತರಂಜನ ದಾಸರು ಪವಿತ್ರಪುರದಲ್ಲಿ ಹುಟ್ಟಿದರು. [illegible] ದನ್ನು ಬಲ್ಲೆ. ಕಾಂಗ್ರೆಸಿನಿಂದ ದೊಡ್ಡ ಅವರನ್ನು ಬೀಳ್ಕೊಂಡು ಬಂಗಾಳ [illegible] ಗೊಟ್ಟಿರಿಗೆ ಹೇಳಿದೆ. ದಾಸರ ಪತ್ರ ಬಂದ ಕಾಗದ [illegible] ಹುಟ್ಟಿತು ಕಾಂಗ್ರೆಸಿನಲ್ಲಿದ್ದಾಗ [illegible] ಅವರ ಭಾವನೆಯನ್ನು ಕಂಡವರು [illegible] ಭಾರತ ಸ್ವಾತಂತ್ರ್ಯ, [illegible] ವಿಷಯ, ಬೇರಾವುದೂ ಇಲ್ಲ.

ಅವರನ್ನು [illegible] ದವರು [illegible], [illegible] ಉಂಟು; ಆದರೆ ಅವರ ಸ್ಥಾನಕ್ಕೆ ಬರಬಲ್ಲವರು [illegible] ಇಲ್ಲ. ದಾಸರು ನಿರ್ಭೀತರು; ಧೀರರು. ಬಂಗಾಲದ ಯುವಕರಲ್ಲಿ ಅವರಿಗೆ [illegible]. ದಾಸರನ್ನು ಬಿಟ್ಟು ಬರಿಗೈಯಲ್ಲಿ ಬಂದ ಎಂದು ಹೇಳಿದ [illegible] ನಾ ಕಂಡಿಲ್ಲ. ಲಕ್ಷ ಲಕ್ಷ ಗಳಿಸಿದರು; ಬಂಗಾಲದ [illegible] ಲಕ್ಷ ಲಕ್ಷ [illegible] ಅವರ ತ್ಯಾಗ ಸಾಟಿಯಿಲ್ಲದುದು. [illegible] ಬಗ್ಗೆ ಹೇಳಲು ನಾನಿನ್ನೇನನು?

ಒಂದಲ್ಲ, ಹಲವುಬಾರಿ ದಾಸರು ನನಗೆ ಹೇಳಿದರು: ‘ಭಾರತ [illegible], ಅಹಿಂಸೆಗಳೇ ಅಗತ್ಯವು.’ ಅವರ [illegible] ಇರಲಿಲ್ಲ. ಭಾರತದ [illegible] ಹೇಳಬಯಸುತ್ತೇನೆ. ದಾಸರಿಗೆ ಅವರ [illegible] ಸಿಗಲಿಲ್ಲ. ‘[illegible] ಸ್ವರಾಜ್ಯ; ಸತ್ಯರೂ ಸ್ವರಾಜ್ಯ’ ಎಂಬುದು ಅವರ [illegible]

ನನ್ನ [illegible] ಬಲು ದೂರ; ಬಲು [illegible] ಅವರ ನೆನಪಿಗಿಲ್ಲ. [illegible] ದಾಸರ [illegible] ಅದು [illegible]. ಅವರ [illegible]?

[illegible]

ಹೂಣವರೊಳಗಿನ ಗೋಮುಖೇಶ್ವರ ಮಹಾತ್ಮಾಗಿ ಹೋದ. ಬಂಗಾಳವಿಂದು ಗಂಡ ಸತ್ತ ವಿಧವೆಯಂತೆ ಆಗಿದೆ. ದೇಶಬಂಧುವನ್ನು ಟೀಕಿಸುತ್ತಿದ್ದವರೊಬ್ಬರು ಕೆಲವು ವಾರದ ಕೆಳಗೆ ನನಗೆ ಹೇಳಿದರು: 'ಅವರಲ್ಲಿ ತಪ್ಪು ಎಣಿಸುತ್ತೇವೆ. ಆದರೆ ಅವರ ಸ್ಥಾನಕ್ಕೆ ಇನ್ನೊಬ್ಬರು ಇಲ್ಲವೇ ಇಲ್ಲ ಎಂಬುದನ್ನು ಒಪ್ಪಬೇಕು.' ಈ ವಿಷಯವನ್ನು ಖುಲ್ನಾ ಸಭೆಯಲ್ಲಿ ಹೇಳಿದಾಗ-ಅಲ್ಲೇ ನನಗೀ ಸಿಗಲು ಸುದ್ದಿ ತಿಳಿಸಿದ್ದು-'ನಿಜ, ರವೀಂದ್ರನಂಥ ಕವಿ ಇನ್ನೊಬ್ಬನ ಹೆಸರು ಹೇಳಬಲ್ಲೆನಾದರೆ ದೇಶಬಂಧುವಿನಂಥ ಬೇರೊಬ್ಬ ನಾಯಕನ ಹೆಸರು ಹೇಳಬಲ್ಲೆ. ಬಂಗಾಳದಲ್ಲಿ ದೇಶಬಂಧುವಿನಂಥವರಿಲ್ಲ, ಆ ತರದವರು ಯಾರೂ ಇಲ್ಲ.' ಎಂದರು ಆಚಾರ್ಯ ರಾಯರು. ದಾಸರು ನೂರು ಕಡ ವಡ ಶೂರರು. ಇಷ್ಟು ಔದಾರ್ಯ ತಪ್ಪು, ಎನಿಸುವಷ್ಟು ಉದಾರರು. ವಕೀಲಿಯಲ್ಲಿ ಲಕ್ಷ ಲಕ್ಷ ಗಳಿಸಿದರೂ ಶ್ರೀಮಂತಿಕೆ ಇರಲಿಲ್ಲ. ಕೊನೆಗೆ ತಮ್ಮ ವಾಸದ ಮನೆಯನ್ನೇ ದಾನ ಕೊಟ್ಟುಬಿಟ್ಟರು.

೨೫-೬-೨೫.

—(೦)—

## ಲೋಕಮಾನ್ಯರ ನೆನಪು

ಲೋಕಮಾನ್ಯರು ಶ್ರೀ ಮಾಂಟೆಗೋರನ್ನು ಭೇಟಿಮಾಡಲು ದೆಹಲಿಗೆ ಹೋದಾಗ ಅವರ ಗೌರವಾರ್ಥವಾಗಿ ಯಾವ ಮೆರವಣಿಗೆಯನ್ನೂ ಮಾಡಕೂಡದೆಂದು ಸರಕಾರ ಪ್ರತಿಬಂಧಕಾಜ್ಞೆಯನ್ನು ಮಾಡಿತು. ಏನೂ ತಿಳಿಯದ ಅಜ್ಞ ಜನ ಬೀದಿಯಲ್ಲಿ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು: 'ಆಜ್ ಪೂನಾಕಾ ರಾಜಾ ಆನೇವಾಲಾ ಹೈ. ಸರ್ಕಾರ್ ಉಸ್ ಸೆ ಬಹುತ್ ಡರತೀ ಹೈ' (ಪೂನಾದ ರಾಜ ಈ ದಿನ ಇಲ್ಲಿಗೆ ಬರಲಿದ್ದಾನೆ. ಸರಕಾರಕ್ಕೆ ಅವರನ್ನು ಕಂಡರೆ ತುಂಬಾ ಹೆದರಿಕೆ.)

* * * *

ಒಮ್ಮೆ ತಿಲಕರು ತಮ್ಮ ಗೆಳೆಯರೊಬ್ಬರ ಜೊತೆಯಲ್ಲಿ ಮಾತಾಡುತ್ತಿದ್ದರು. ಆ ಗೆಳೆಯ ಕೇಳಿದ, 'ಬಲವಂತ ರಾಯರೆ, ಸ್ವರಾಜ್ಯ ಬಂದರೆ ನೀವು ಯಾವ ಅಧಿಕಾರ ವಹಿಸಿಕೊಳ್ಳುತ್ತೀರಿ? ಪ್ರಧಾನಿಗಳಾಗುತ್ತೀರೋ, ವಿದೇಶಾಂಗ ಸಚಿವರಾಗುತ್ತೀರೋ?' 'ಊಹು' ಯಾವುದೂ ಇಲ್ಲ, ಸ್ವರಾಜ್ಯ ಬಂದರೆ ನಾನು ಈ ಸಾರ್ವಜನಿಕ ಜೀವನವನ್ನು ಬಿಟ್ಟು ಯಾವುದಾದರೂ ಸ್ವದೇಶೀ ಕಾಲೇಜಿನಲ್ಲಿ ಗಣಿತದ ಅಧ್ಯಾಪಕನಾಗುತ್ತೇನೆ. ರಾಜಕೀಯವೆಂದರೆ ನನಗಾಗುವುದಿಲ್ಲ. ಈಗಲೂ ನನಗೆ 'ಡಿಫರೆನ್ಷಿಯಲ್ ಕ್ಯಾಲ್ಕುಲಸ್' ಪುಸ್ತಕ ಒಂದು ಬರೆಯಬೇಕೆಂಬ ಆಸೆ ಇದೆ. ದೇಶ ಹಾಳಾಗಿ ಹೋಗುತ್ತಾ ಇದೆ, ನಿಮಗೊಬ್ಬರಿಗೂ ಅದರ ಯೋಗಕ್ಷೇಮ ಬೇಕಾಗಿಲ್ಲ. ಎಂತಲೇ ನಾನದನ್ನು ನೋಡಿಕೊಳ್ಳಬೇಕಾಗಿದೆ' ಎಂದು ಉತ್ತರವಿತ್ತರು ತಿಲಕರು.

ಬೊಂಬಾಯಿಯಲ್ಲಿ ಒಂದು ದಿನ ತಿಲಕರ ಭಾಷಣವಾಯಿತು. ಮಹಾ ಮಹಾ ಪಂಡಿತರೆಲ್ಲಾ ಬಂದಿದ್ದರು. ಆ ದಿನ ತಿಲಕರು ಚಾಲ್ಡಿಯ, ನಾಗರೀಕತೆ, ಇರಾನೀ ಮತ್ತು ಭಾರತೀಯ ನಾಗರೀಕತೆಗಳಿಗಿರುವ ಹೋಲಿಕೆಯನ್ನು ಕುರಿತು ಪಾಂಡಿತ್ಯಪೂರ್ಣವಾದ ಅದ್ಭುತ ಭಾಷಣ ಮಾಡಿದರು. ಸಭೆ ಮುಗಿದ ಮೇಲೆ ಅಧ್ಯಕ್ಷತೆ ವಹಿಸಿದ್ದ ಪಾಶ್ಚಿಮಾತ್ಯರೊಬ್ಬರು 'ಮಿ. ತಿಲಕ್! ನಿಮ್ಮ ಬುದ್ಧಿಯನ್ನು ನೀವು ಸರಿಯಾಗಿ ಉಪಯೋಗಿಸುತ್ತಿಲ್ಲ. ಎಂಥ ಅದ್ಭುತ ಜ್ಞಾನ ನಿಮ್ಮದು! ಇತಿಹಾಸ ಸಂಶೋಧನೆ ಮಾಡಲು ನಿಮಗಿಂತ ಯುಕ್ತರಾದವರು ಸಿಗಲಾರರು. ಅದರಲ್ಲಿ ಶ್ರಮಿಸಿದರೆ ನೀವು ವಿಶ್ವವಿಖ್ಯಾತರಾಗಬಹುದು. ಅದನ್ನು ಬಿಟ್ಟು ಈ ರಾಜಕೀಯದ ಕುಸ್ತಿಯೊಳಗೇಕೆ ಒದ್ದಾಡುತ್ತೀರಿ' ಎಂದರು. ಅದಕ್ಕೆ ತಿಲಕರು ಹೇಳಿದರು 'ಭಾರತ ಮಾತೆ ಬಂಜೆಯಲ್ಲ. ಸ್ವರಾಜ್ಯ ಬಂದರೆ ನನ್ನಂಥ ಸಾವಿರಾರು ಪಂಡಿತರು ಹುಟ್ಟುತ್ತಾರೆ. ಈ ದಿನ ಎಲ್ಲರೂ ದೇಶದ ಬಿಡುಗಡೆಗೆ ಶ್ರಮಿಸಬೇಕಾಗಿದೆ, ಅದಕ್ಕಾಗಿ ನಮ್ಮೆಲ್ಲರ ಶಕ್ತಿಗಳನ್ನು ವಿನಿಯೋಗಿಸಬೇಕಾಗಿದೆ; ಸ್ವರಾಜ್ಯಕ್ಕಾಗಿ ನಮ್ಮ ಸರ್ವಸ್ವವನ್ನು ತ್ಯಾಗಮಾಡಲು ಸಿದ್ಧರಾಗಬೇಕಾಗಿದೆ.

*      *      *      *

ಬೊಂಬಾಯಿಯಲ್ಲಿ 'ರಾಷ್ಟ್ರಮತಾ' ಪತ್ರಿಕೆ ಆರಂಭಿಸಿದಾಗ, ಆಫೀಸಿಗೆ ಅಗತ್ಯದ ಕುರ್ಚಿ, ಮೇಜುಗಳ ಮಾತು ಬಂತು. ತಿಲಕರು ಹೇಳಿದರು ನಾವು 'ಕೇಸರಿ' 'ಮರಾಠಾ' ಆರಂಭಿಸಿದಾಗ ಇಂಥ ಸಂಪಾದಕರ ಗೌರವಕ್ಕೆ ಬೇಕಾದ ಸಾಮಾನು ಒಂದೂ ಇರಲಿಲ್ಲ. ಪತ್ರಿಕೆಗಳಿಂದ ನಮಗೆ ಒಂದು ಕಾಸೂ ಬರುತ್ತಿರಲಿಲ್ಲ. ಹಾಸಿಕೊಂಡಿದ್ದ ಹಾಸಿಗೆಯನ್ನು ಸುತ್ತಿ, ಅದನ್ನೇ ಮೇಜು ಮಾಡಿಕೊಂಡು ಬರೆಯುತ್ತಿದ್ದೆವು. ನೆಲಹಾಸಾದ ಹಾಸಿಗೆಯ ಮೇಲೆ ಬರೆದವಾದರೂ ನಮ್ಮ ಲೇಖನಗಳು ಬೇಕಾದಷ್ಟು ಜೋರಾಗಿರುತ್ತಿದ್ದವು, ಸಿಡಿಲಿನ ಹಾಗೆ ಇರುತ್ತಿದ್ದವು.

*      *      *      *

ನ್ಯೂ ಇಂಗ್ಲೀಷ್ ಸ್ಕೂಲನ್ನು ಆರಂಭಿಸಿದಾಗ ಮೊದಮೊದಲು ಅಂಥ ಒಳ್ಳೆ ಹುಡುಗರಿರಲಿಲ್ಲ. ಇದ್ದವರೆಲ್ಲಾ ದಡ್ಡರು, ಇಲ್ಲವೆ ತುಂಟರು. ಯಾರೋ ಒಬ್ಬರು ಇದರ ಬಗ್ಗೆ ನಿರಾಶೆ ವ್ಯಕ್ತಪಡಿಸಿದಾಗ ತಿಲಕರು ಹೇಳಿದರು: ಇಂಥವರೇ ನಮ್ಮ ಶಕ್ತಿಗೆ ಸರಿಯಾದ ಪರೀಕ್ಷೆ. ಇಂಥವರನ್ನು ತಿದ್ದಿ ಜಾಣರನ್ನಾಗಿ ಮಾಡಿದರೆಯೇ ಜನ ನಮ್ಮನ್ನು ನಂಬುವುದು.

*      *      *      *

ಶಾಲೆಯಿಂದ ತಿಲಕರಿಗೆ ತಿಂಗಳಿಗೆ ಮೂವತ್ತು ರೂಪಾಯಿ ಸಿಗುತ್ತಿತ್ತು ಅಷ್ಟೆ. ಅವರ ಸಹೋದ್ಯೋಗಿಗಳೊಬ್ಬರು ಇಷ್ಟು ಸಂಬಳ ಬಂದರೆ ಕಡೆಗಾಲಕ್ಕೆ ನಮಗೆ ಅಂತ್ಯ ಸಂಸ್ಕಾರಕ್ಕೆ ಬೇಕಾಗುವಷ್ಟು ಹಣ ಕೂಡಾ ಉಳಿಸಿಕೊಳ್ಳಲಾಗುವುದಿಲ್ಲ-ಎಂದರು.

ಕೆಲಸಗಳು ಹೊರಟಿವೆ ಉತ್ತರಕೊಟ್ಟಿದ್ದರು : 'ಅವರ ಯೋಜನೆ ಏನುಗೇಳಿ ? ಸಮಾಜದ ಗೃಹಚಾರ ಅದು ... ಹೊರಗಾಗಿ ಇಲ್ಲವಾದರೆ ಹೋಗಲಿ, ನಗರದ ನೈರ್ಮಲ್ಯದ ದೃಷ್ಟಿಯಿಂದಲಾದರೂ ನಮ್ಮ ಜನವನ್ನು ಸ್ನಾನಕ್ಕೆ ಹಾಗಿಸಿ ಉಪಯುಕ್ತರ ಯೋಜನೆ ನಡೆಯಬೇಕು.'

ಕಾಕಾ ಕಾಲೇಲಕರ್.

(ಗುಜರಾತಿ 'ನವಜೀವನ್' ದಿಂದ)

—(೦)—

# ಗುಜರಾತಿನ ವೃದ್ಧಪಿತಾಮಹ

ಶ್ರೀ ಅಬ್ಬಾಸ್ ತಾಯಬ್ಜಿಯವರನ್ನು ನಾನು ನೋಡಲಬಾರಿ ಕಂಡದ್ದು ೧೯೧೫ ರಲ್ಲಿ. ನಾನು ಎಲ್ಲಿಗೆ ಹೋದರೂ, ಎಲ್ಲೆಲ್ಲಿ ತಾಯಬ್ಜಿಯವರ ಮನೆಯವರು ಯಾರೇ ಇದ್ದರೂ,—ಹೆಣ್ಣಾಗಲೀ ಗಂಡಾಗಲಿ—ನನ್ನನ್ನು ತಮ್ಮ ಮನೆಗೆ ಸೇರಿದವನಂತೆಯೇ ಕಂಡಿದ್ದಾರೆ. ಅವರದು ತುಂಬಾ ದೊಡ್ಡಮನೆತನ; ವಿಶಾಲ ಸಂಸಾರ. ಈ ಗೆಳೆತನಕ್ಕೆ ಏನು ಕಾರಣವೋ ! ೧೯೧೫ ರಲ್ಲಿ ನಾನು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಬಂದಾಗ, ನನಗೆ ಇನ್ನೂ ಅವರ ಪರಿಚಯವಿರಲಿಲ್ಲ. ಅನೇಕರು ನನ್ನನ್ನು ಗುಜರಾತಿ ಭಟ್ಟನೆಂದೇ ತಿಳಿದಿದ್ದರು. ಆದರೂ ಆ ಪ್ರಖ್ಯಾತ ನ್ಯಾಯಾಧೀಶರು ನನಗೆ ತಮ್ಮ ಸ್ನೇಹವನ್ನು ನೀಡಿದರು. ಬೇರೇನೇ ಅಂದರೂ ಬದ್ರುದ್ದೀನ್ ತಾಯಬ್ಜಿಯವರು ಮಾತ್ರ ನನ್ನನ್ನು ಗುಜರಾತಿ ಭಟ್ಟನೆಂದು ನಂಬಿರಲಿಲ್ಲ; ಅವರ ಹಾಗೇ ಇನ್ನೂ ಕೆಲವರು.

ಅದು ಹಾಗಿರಲಿ. ಬರೋಡಾದ ಅಬ್ಬಾಸ್ ಮಿಯ್ಯಾರ ಮಾತಿಗೆ ಬರೋಣ. ಅವರನ್ನು ಆಲಿಂಗಿಸಿಕೊಂಡಾಗ, ಅವರ ಮುಖವನ್ನು ನೋಡಿದಾಗ, ನನಗೆ ದಿವಂಗತ ಬದ್ರುದ್ದೀನರ ನೆನಪಾಯಿತು. ಅಂದಿನ ಪರಿಚಯ ಚಿರಸ್ನೇಹದ ಅಂಗವಾಯಿತು. ಅವರು ಹರಿಜನರ ಸ್ನೇಹಿತರು ಮಾತ್ರವೇ ಆಗಿರಲಿಲ್ಲ; ತಾವೇ ಹರಿಜನರಾಗಿದ್ದರು. ಬಹುದಿವಸದ ಹಿಂದೆ ನಾನು ಗೋಧ್ರಾದಲ್ಲಿ ಭಾಷಣ ಮಾಡುವಾಗ ಅನಿರೀಕ್ಷಿತವಾಗಿ ಅದೇ ಸಂಜೆ ಹರಿಜನರ ಕೇರಿಯಲ್ಲಿ ಅಸ್ಪೃಶ್ಯತಾ ನಿವಾರಣೆಯ ಸಭೆ ಸೇರಿಸುವಂತೆ ಹೇಳಿದೆ. ಗೋಧ್ರಾದ ಧರ್ಮಿಷ್ಠ ಹಿಂದೂಗಳಂತೆ ಅಬ್ಬಾಸ್ ಮಿಯ್ಯಾ ಕೂಡಾ ಆ ಸಭೆಯಲ್ಲಿ ತುಂಬಾ ಆಸಕ್ತಿ ತೋರಿ, ಉತ್ಸಾಹದಿಂದ ಭಾಗ ವಹಿಸಿದರು. ಅಂದರೆ ಅವರು ಹೆಸರಿಗೆ ಮಾತ್ರ ಮುಸಲ್ಮಾನರಾಗಿದ್ದರೆಂತಲ್ಲ. ಇಸ್ಲಾಂನ ಅಭಿವೃದ್ಧಿಗಾಗಿ ಬೇಕಾದಷ್ಟು ದಾನಮಾಡಿದ್ದರು, ಎಷ್ಟೋ ಇಸ್ಲಾಮೀ ಸಂಸ್ಥೆಗಳನ್ನು ಪೋಷಿಸುತ್ತಿದ್ದರು. ಅವರ ಹರಿಜನ ಪ್ರೇಮದಲ್ಲಿ ಮಾನವ-ಸ್ವಾರ್ಥವೇನೂ ಇರಲಿಲ್ಲ. ಅವರ ಇಸ್ಲಾಂನಲ್ಲಿ ಜಗತ್ತಿನ ಎಲ್ಲ ಧರ್ಮ

ಗಳಿಗೂ ಎಡೆಯಿತ್ತು. ಅವರೇ ಹಿಂದೂಮಿನಲ್ಲಿ ಉತ್ಸಾಹ, ಶ್ರದ್ಧೆಯಿಂದ ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡುತ್ತಿದ್ದರು. ಈ ಶ್ರದ್ಧೆ ಅವರ ಜೀವ ಇಹಲೋಕ ಬಿಡುವವರೆಗೂ ತಗ್ಗಲಿಲ್ಲ.

ಅರೆಮನಸ್ಸಿನಿಂದ ಅವರು ಎಂದೂ, ಯಾವ ಕೆಲಸವನ್ನೂ ಕೈಹಾಕುತ್ತಿರಲಿಲ್ಲ. ಅಬ್ಬಾಸ್ ಸಾಹೇಬರ ಮನಸಿನಲ್ಲಿ ಅಂಥ ಅಡ್ಡಗೋಡೆ ಇರಲೇ ಇಲ್ಲ. ಪಂಜಾಬಿನ ಕರೆ ಬಂದಾಗ ಒಂದೇ ಗಳಿಗೆಯಲ್ಲಿ 'ಓ' ಕೊಟ್ಟರು. ಅವರ ವಯಸ್ಸಿನಲ್ಲಿ, ಅವರಷ್ಟು ಸುಖದಲ್ಲಿ ಬೆಳೆದವರಿಗೆ ಸೆರೆಮನೆಯ ಕಷ್ಟ ಸಹಿಸುವುದೆಂದರೆ ಸುಲಭವಲ್ಲ. ಆದರೆ ಅವರ ಅಜೇಯ ವಿಶ್ವಾಸದಿಂದ ಯಾವ ಅಡ್ಡಿ ತಾನೆ ನಿಂತೀತು? ಸದಾ ಇತರರನ್ನು ನಗಿಸುವ ನಗೆಮುಖಿಯಾಗಿರುತ್ತಾ ಸೇವಾವ್ರತನ ಜೀವನ—ಅನಂತರ ಊಟ, ಉಡಿಗೆ ಬಂಧಿಗಳಲ್ಲಿ ಪ್ರಯೋಗ ನಡೆಸಿ, ತಮ್ಮ ಶಕ್ತಿಯಿಂದ ಯುವಕರನ್ನೆಲ್ಲಾ ನಾಚಿಸಿಬಿಟ್ಟರು ಅಬ್ಬಾಸ್ ಮಿಯ್ಯಾ. ನಿವಾರಿಸಬಹುದಾದ ಅನಾನುಕೂಲ ಅವಾಗ್ಯವೂ, ಅವರು ಗೊಣಗಿದ್ದನ್ನು ನಾನೆಂದೂ ಕಂಡಿಲ್ಲ. 'ಹೇಳುವುದಕ್ಕವನಲ್ಲ, ಕೇಳುವುದಕ್ಕವನಲ್ಲ; ಮಾಡಿ ಮಡಿವುದಕ್ಕವನು' ಹಿಂದೆ ನ್ಯಾಯಾಧಿಕಾರಿಯಾಗಿದ್ದಾಗ ಯಾರಿಗೆ ಬೇಕಾದರೂ ಮರಣಶಿಕ್ಷೆ ವಿಧಿಸಬಲ್ಲ, ಎಲ್ಲರಿಂದಲೂ ಸೇವೆಮಾಡಿಸಿಕೊಳ್ಳಬಲ್ಲ ಅಧಿಕಾರ ನಡೆಸಿದವರು ಶಿಸ್ತಿಗೆ ಮಣಿಯುವಾಗ ತಲೆಬಾಗುತ್ತಿದ್ದರು. ಅಬ್ಬಾಸ್ ಮಿಯ್ಯಾ ಅಪೂರ್ವ ಮಾನವ ಸೇವಕರು. ಮಾನವನ ಸೇವಕರಾಗಿದ್ದರಿಂದಲೇ ಭಾರತದ ಜೀವನದ ಅಂಗವಾಗಿದ್ದರು. ಅವರ ದೇವರು ದರಿದ್ರ ನಾರಾಯಣ. ಬಡವರ ಗುಡಿಸಲಿನಲ್ಲಿ, ದೀನ ದಲಿತರ ಹೃದಯದಲ್ಲಿ ಪರಮಾತ್ಮನಿದ್ದಾನೆಂದು ನಂಬಿದ್ದರು. ಅಬ್ಬಾಸ್ ಮಿಯ್ಯಾರ ದೇಹ ಗೋರಿಯಲ್ಲಿದ್ದರೂ ಅವರು ಮೃತರಾಗಿಲ್ಲ. ಅವರ ಬಾಳು ನಮ್ಮೆಲ್ಲರಿಗೂ ಸ್ಫೂರ್ತಿಕೊಡುವ ಅಮೃತ ಶಕ್ತಿ!

—(೧)—

## ಬಡೇ ಭಾಯಿ

'ಹೂವಿದರು ನಾಶ; ಇದ್ದದ್ದು ಮುಳುಗಿದರೆ, ಅದರ ನೆರಳು ಮರೆಯಾದರೂ ಅಳಬೇಕು' ಎಂದಿದ್ದಾನೆ ಒಬ್ಬ ಕವಿ. ಡಾ. ಜಾಕಿರ್ ಹುಸೇನರ ಹಿರಿಯ ಮೌಲಾನಾ ಷೌಕತಾಲಿಯವರ ನಿಧನದ ಸುದ್ದಿಯನ್ನು ತಂದಾಗ ಗಾಂಧೀಜೀ ಒಂದುಗಳಿಗೆ ಸ್ತಂಭಿತರಾದರು; ಕಣ್ಣಿನಿಂದ ಮುತ್ತಿನ ಹನಿಯುತ್ತಾ ಉರುಳಿದವು.

ನಾನು ಷೌಕತಾಲಿಯವರನ್ನು ನೆನೆದೊಡನೆ ಹಿಂದಿನ ನೆನಪುಗಳು ತುಂಬಿಬಂದವು. ಖಿಲಾಫತ್ ಚಳುವಳಿಯ ದಿನದಿನದ, ಗಳಿಗೆ ಗಳಿಗೆಯ ನೆನಪು; ಅವೋ ಬಹು

ಕಾಲದವರೆಗೂ ನಾವು ಅನ್ಯೋನ್ಯವಾಗಿದ್ದುದರ ನೆನಪು ಕವಿದುಬಂತು. ಅದಕ್ಕಿಂತ ಮೊದಲೇ ಷೌಕತಾಲಿ ರಾಂಪುರದಲ್ಲಿ ಮೊದಲು ಸಲ ಸ್ಥಾನಬದ್ಧರಾಗಿದ್ದಾಗ ಗಾಂಧೀಜೀಯ ಜೊತೆಯಲ್ಲಿ ನಾವೆಲ್ಲ ಮೊದಲು ಅವರನ್ನು ನೋಡಿಬಂದುದರ ನೆನಪೂ ಆಯಿತು. ಮೊದಲ ಸಲಕ್ಕೇ ನಾವೂ ಅವರ ಕುಟುಂಬದವರು ಅನಿಸುವ ಹಾಗೆ ನಡೆದುಕೊಂಡರು. ಗಾಂಧೀಜಿಯೊಡನೆ ಗಂಟೆಗಟ್ಟಲೆ ಅತಿಪುರಾತನ ಪರಿಚಿತರಂತೆ ಮಾತನಾಡುತ್ತ ನಮ್ಮ ಆತಿಥ್ಯಕ್ಕಾಗಿ ಚಿಕ್ಕ ಪುಟ್ಟ ವಿವರಗಳನ್ನೆಲ್ಲ ಅವರ ಪೂಜ್ಯಮಾತೆ ಬೀ ಅಮ್ಮನಿಗೆ ಹೇಳುತ್ತ, 'ಮಹಾತ್ಮಾಜೀ, ನಿಮಗಾಗಿ ನಮ್ಮ ಸಮಾಬರು ೧೮ ಮೇಕೆ ಕಳಿಸಿದ್ದಾರೆ' ಎಂದು ಹೇಳಿ ಹೇಳಿ ನಕ್ಕದ್ದು ನನಗೆ ನೆನಪಿದೆ

ಅಲ್ಲಿಂದ ಮುಂದೆ ಭೀಮಸೇನನಂತಾಗಿ ಭೂಮಿಯನ್ನು ಮೆಟ್ಟುತ್ತ, ತನ್ನ ಸಿಡಿಲು ಗರ್ಜನೆಗಳಿಂದ ವೇದಿಕೆಗಳನ್ನು ನಡುಗಿಸುತ್ತ, ದೇಶದಲ್ಲಿ ಓಡಾಡಿದುದು; ಆದರೂ ಎಷ್ಟೇ ಮೃದುವಾಗಿ ಸೂಚನೆ ಕೊಟ್ಟರೂ ಒಪ್ಪಿಕೊಳ್ಳುತ್ತಾ, ತಾನೊಪ್ಪಿದ ನಾಯಕ ಹೇಳಿದುದನ್ನು ಕುನ್ನಿಯಂತೆ ವಿಧೇಯವಾಗಿ ನಡೆಸುತ್ತಿದ್ದುದು ನೆನಪಾಯಿತು. ಗಾಂಧೀಜಿಯನ್ನು ಷೌಕತಾಲಿ ಪ್ರೀತಿಯಿಂದ 'ಸರಕಾರ್' ಎಂದು ಕರೆಯುತ್ತಿದ್ದರು. ಮಹಮ್ಮದಾಲಿ ಗಂಟೆ ಗಂಟೆಗಳ ವಾದ-ಚರ್ಚೆ ನಡೆಸಿದ ಮೇಲೆ ಷೌಕತಾಲಿ ಶಾಂತವಾಗಿ 'ಗಾಂಧೀಜೀ ಹೇಳಿದ ಹಾಗೆ ಮಾಡುವುದು ಒಳ್ಳೆಯದು' ಅನ್ನುತ್ತಿದ್ದರು. ಖಿಲಾಫತ್ ನಿಯೋಗ ಗೋಷ್ಠಿ ವೈಸರಾಯರ ಬಳಿ ಓದಬೇಕಾದ ಬಿನ್ನಹ ಪತ್ರಿಕೆಯಲ್ಲಿ ಅದರ ರೂಪವನ್ನೆ ಬದಲಿಸುವ ತಿದ್ದುಪಡಿಗಳನ್ನು ಗಾಂಧೀಜೀ ಸೂಚಿಸಿದರು. ಎಲ್ಲ ವಿರೋಧವನ್ನೂ ತಡೆದುನಿಂತು ಕಡೆಗೆ ಎಲ್ಲರೂ ಗಾಂಧೀಜಿಯ ಸೂಚನೆಗೆ ಒಪ್ಪುವಂತೆ ಮಾಡಿದುದು ಷೌಕತಾಲಿಯೇ. ಅಸಹಕಾರದ ಗೊತ್ತುವಳಿಯನ್ನು ಕಲಕತ್ತೆಯ ದಾರಿಯಲ್ಲಿ ಭಾಗಲ್ಪುರದಲ್ಲಿ ಒಂದುದಿನ ಬೆಳಗ್ಗೆ ಗಾಂಧೀಜೀ ಬರೆದರು. ಅದನ್ನು ಬರೆದಾಗ ಹೇಗೋ ಏನೊ ಅಹಿಂಸಾತ್ಮಕ ಎಂಬ ಮಾತು ಅದರಲ್ಲಿ ಬಿಟ್ಟುಹೋಯಿತು. ಮತ್ತೆ ಓದಿಕೊಂಡಾಗ ಆ ಲೋಪ ಕೂಡಲೆ ಕಾಣಬಂತು. 'ಅಸಹಕಾರ'ದ ಮುಂದೆ ಅಹಿಂಸಾತ್ಮಕ ಎಂಬ ಮುಖ್ಯ ವಿಶೇಷಣವನ್ನು ಸೇರಿಸಲು ಬಡೇಭಾಯಿ ಕೊಂಚವೂ ಸಂಕೋಚಗೊಳ್ಳಲಿಲ್ಲ.

'ಸರಕಾರ್ ನಿಮ್ಮನ್ನು ನನ್ನ ಜೇಬಿನೊಳಗೆ ಇಟ್ಟುಕೊಳ್ಳಬಲ್ಲೆ. ಆದರೆ ನೀವು ನನ್ನನ್ನು ನಿಮ್ಮ ಹೃದಯದಲ್ಲೇ ಹಿಡಿದಿಟ್ಟಿದೀರ್. ನಾನು ಸಿಪಾಯಿ; ನನಗೆ ಶಿಸ್ತು, ವಿಧೇಯತೆ ಎಂದರೆ ಪ್ರಾಣ' ಎನ್ನುತ್ತಿದ್ದರು. ಈ ಉತ್ತಮ ಮನೋಧರ್ಮದಿಂದಲೇ ೧೯೨೧ ರಲ್ಲಿ ಆ ಸುಪ್ರಸಿದ್ಧ ಕ್ಷಮಾಯಾಚನೆಯ ಬಗ್ಗೆ ಅವರು ಗಾಂಧೀಜಿಯ ಸಲಹೆಯಂತೆ ನಡೆದುದು. ಆಗಸ್ಟ್ ೧೯೨೪ ರಲ್ಲಿ ಗಾಂಧೀಜೀ ಹಿಂದೂ ಮುಸ್ಲಿಂ ಸೌಹಾರ್ದ

ಕ್ಕಾಗಿ ಅಲಿ ಸೋದರರ ಮನೆಯಲ್ಲಿ ಕೆಲದಿನ, ಲಾಲಾ ಸುಲ್ತಾನ ಸಿಂಗರ ಮನೆಯಲ್ಲಿ ಕೆಲ ದಿನ, ಹೀಗೆ ೨೧ ದಿನದ ಉಪವಾಸಮಾಡಿದುದು ನನಗೆ ಚೆನ್ನಾಗಿ ನೆನಪಿದೆ. ಉಪವಾಸ ಮಾಡುವ ನಿರ್ಧಾರವನ್ನು ಗಾಂಧೀಜೀ ನಮಗೆ ತಿಳಿಸಿದ ದಿನ ಸಂಜೆ ಕಿರಿಯ ಸೋದರ ನೆಲಕ್ಕೆ ಕುಸಿದುಬಿದ್ದರು; ಎರಡುದಿನ ಮಗುವಿನಂತೆ ಅಳತೊಡಗಿದರು. ಬಡೇಭಾಯಿ ಮಾತ್ರ ಧೀರರಾಗಿ ಇದ್ದರು. ಗಾಂಧೀಜಿಯೊಂದಿಗೆ ಹಕೀಂ ಸಾಹೇಬ (ಅಜಮಲ್ ಖಾನ್) ರೊಡನೆ ಎರಡು ಗಂಟೆ ಚರ್ಚೆಮಾಡಿದರು. ಇದು ಬುದ್ಧಿಯ ತರ್ಕವಲ್ಲ; ದೇವರಿಗಿದಿರು ನಿಂತು ಮಾಡಿದ ಶಪಥ; ಅನತಿಕ್ರಮವಾದುದು ಎಂದು ಗಾಂಧೀಜೀ ಹೇಳಿದನಂತರ ವಾದ ನಿಲ್ಲಿಸಿ ದೇವರು ಒಳಿತುಮಾಡಲಿ ಎಂದು ಹರಸಿದರು. ಎಷ್ಟೋ ಜನ ಹಿಂದೂ ಗೆಳೆಯರು ಅವರನ್ನು ಅಡಿಗೆಮನೆಗೆ ಕರೆದೊಯ್ದು ತಮ್ಮ ಪಂಕ್ತಿಯಲ್ಲಿ ಊಟಕ್ಕೆ ಕೂಡಲು ಆಗ್ರಹಪಡುತ್ತಿದ್ದರು. ಆದರೂ ಶೌಕತಾಲಿಗೆ ಹಿಂದೂಗಳ ಒಳಮನೆ ಹೊಗಲು ಬಲು ಸಂಕೋಚ. ಪರರ ಮನೋಭಾವನೆ ಎಂದರೆ—ವಕ್ರತೆ ಕೂಡ— ಅವರಿಗೆ ಬಲು ದಾಕ್ಷಿಣ್ಯ, ಗೌರವ. ನನಗೆ ಚೆನ್ನಾಗಿ ನೆನಪಿದೆ: ಗೋಷಾ ಸಭೆಗಳಿಗೆ ಆ ಅಣ್ಣತಮ್ಮಂದಿರು ಗಾಂಧೀಜಿಯ ಜೊತೆಯಲ್ಲಿ ಭಾಷಣಮಾಡಲು ಹೋದಾಗ ಇಬ್ಬರೂ ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುತ್ತಿದ್ದರು; 'ಸರ್ಕಾರ್, ನೀವು ಅತೀತರು, ನೀವು ಅವರನ್ನು ನೋಡಿದರೂ ಪರವಾಯಿಲ್ಲ, ನಾವು ಸಾಧಾರಣ ಮನುಷ್ಯರು' ಎನ್ನುತ್ತಿದ್ದರು.

ಬಡೇಭಾಯಿಗೆ ಕೊಂಚ ಮುಂಕೋಪ ಸ್ವಭಾವ. ಬಾಲಕನಂತೆ ಅವರು ಆಡಿದಾಗ ಹರ್ಷವಾಗುತ್ತಿತ್ತು, ಬಾಲಿಶವಾಗಿ ನಡೆದಾಗ ಸಿಟ್ಟುಬರುತ್ತಿತ್ತು. ಅವರ ಈ ಸ್ವಭಾವ ಇದನ್ನು ನೆನಪಿಟ್ಟರೆ ೧೯೨೪ ರ ತರುವಾಯದ ಇತಿಹಾಸ ಎಷ್ಟೋಮಟ್ಟಿಗೆ ಅರ್ಥವಾದೀತು. ಅದು ವಿಪರೀತ ಭಿನ್ನಾಭಿಪ್ರಾಯದ, ಕಟು ವೈಮನಸ್ಯದ ಕಾಲ. ಅಷ್ಟಾದರೂ ಗಾಂಧೀಜೀ ಯಾವ ಊರಿಗಾದರೂ ಬಂದಾಗ ತಾನು ಅಲ್ಲಿದ್ದರೆ ಬಡೇಭಾಯಿ ಅವರನ್ನು ಬಂದು ನೋಡದಿರುತ್ತಿರಲಿಲ್ಲ. ಅಂಥ ಸಂದರ್ಭ ಒಂದನ್ನೂ ಅವರು ಬಿಡುತ್ತಿರಲಿಲ್ಲ. ಏನೇನೋ ಮಾತಾಡಿದರು, ಬರೆದರು; ಆದರೆ ಪ್ರಾರಂಭದಲ್ಲಿ ರಾಷ್ಟ್ರಜೀವನದಲ್ಲಿ ತಾವು ವಹಿಸಿದ ಪಾತ್ರದ ಬಗ್ಗೆ ಎಂದೂ ಅವರು ಪಶ್ಚಾತ್ತಾಪಪಟ್ಟರೆಂದು ನನಗನಿಸಿಲ್ಲ. ಕಾಂಗ್ರೆಸ್ ಅಧ್ಯಕ್ಷ ಭಾಷಣದಲ್ಲಿ ಮೌಲಾನಾ ಮಹಮ್ಮದಾಲಿ ಹೇಳಿದ ಮಾತು ಅವರಿಬ್ಬರ ಪರವಾಗಿಯೂ ಹೇಳಿದ್ದು. ಇಂದಿಗೂ ಅದು ಆ ಸೋದರರು ರಾಷ್ಟ್ರಕ್ಕೆ ಕೊಟ್ಟ ದತ್ತಿ ಎನ್ನಬಹುದು.

ಅದರಲ್ಲಿ ಒಂದು ಭಾಗ ಹೀಗಿದೆ. 'ಹಿಂದೂ ಸೋದರರಿಗೆ ಗೋವು ಎಷ್ಟು ಪವಿತ್ರ ಜೀವವೋ ನಾ ಬಲ್ಲೆ. ಈಗ ಸೆರೆಯ ಮರೆಯಲ್ಲಿರುವ ನಮ್ಮ ನಾಯಕರಿಗೆ ಗೋರಕ್ಷಣೆಯಲ್ಲಿ ಎಷ್ಟು ಅಕ್ಕರೆಯೋ ನನಗಿಂತ ನಮ್ಮ ಅಣ್ಣನಿಗಿಂತ ಹೆಚ್ಚು ಬಲ್ಲವರು ಯಾರು?

ಖಿಲಾಫತ್ ಚಳುವಳಿಯ ನಾಯಕತನವನ್ನು ಅವರು ನಿಸ್ವಾರ್ಥತೆಯಿಂದ ವಹಿಸಿದುದು ಅವರ ಔದಾರ್ಯದ, ಪರೋಪಕಾರ ಬುದ್ಧಿಯ ಲಕ್ಷಣ. ಆದರೂ ಖಿಲಾಫತ್ ಮುಸ್ಲಿಮರ ಆಕಳು, ಅದನ್ನು ಕಾಪಾಡಿದರೆ ದಯೆಗೆ ದಯೆಯೇ ಪ್ರತಿ ಎಂಬುದನ್ನು ತಮ್ಮ ಧರ್ಮಗ್ರಂಥಗಳಿಂದ ಕಲಿತ ಮುಸ್ಲಿಮರು ನಮ್ಮ ಹಸುವನ್ನು ಅದಕ್ಕೆ ಪ್ರತಿಯಾಗಿ ಕಾಪಾಡಿಯಾರು ಎನ್ನುತ್ತಿದ್ದರು ಮಹಾತ್ಮಾ ಗಾಂಧೀಜೀ. ತಮ್ಮ ಗೋಪ್ರೇಮವನ್ನು ಅವರು ತಿಳಿಸುತ್ತಿದ್ದ ರೀತಿ ಇದು. ಖಿಲಾಫತನ್ನೂ ಹಸುವೆಂದು ಅಲಂಕಾರದ ನುಡಿಯಲ್ಲಿ ಗಾಂಧೀಜೀ ಕರೆವ ಮೊದಲೇ ನಾನೂ ನನ್ನವರೂ ಗೋವಧೆಯಲ್ಲಿ ನಾವು ಪಾಲುಗೊಳ್ಳಬಾರದೆಂದು ನಿರ್ಧರಿಸಿದ್ದೆವು. ಅವತ್ತಿನಿಂದ ನಮ್ಮ ಮನೆಯಲ್ಲಿ ಗೋಮಾಂಸ ವರ್ಜ್ಯ; ಆಳುಗಳಿಗೆ ಕೂಡ. ನಮ್ಮ ಸಧರ್ಮಿಗಳೆಲ್ಲರನ್ನೂ ಹೀಗೆ ಮಾಡಿರೆಂದು ಕೇಳಿಕೊಳ್ಳುವುದು ನಮ್ಮ ಕರ್ತವ್ಯವೆಂದು ತಿಳಿದಿದೇವೆ. ಗೋವಧೆಯನ್ನಂತೂ ನಾನೂ ನಮ್ಮವರೂ ಎಂದೂ ಮಾಡಿಲ್ಲ. ಅಂಥದೊಂದು ಪಶುಬಲಿ ನಮಗೆ ಧರ್ಮಶಾಸ್ತ್ರ; ಅದ್ದರಿಂದ ನಾವು ಯಾವಾಗಲೂ ಕುರಿಯನ್ನೆ ಬಲಿ ಕೊಟ್ಟಿದೇವೆ. ಈ ದಾರಿಯಲ್ಲಿ ಇನ್ನೂ ಎಷ್ಟೋ ಹೆಜ್ಜೆ ಹಾಕಬಹುದು. ಹಿಂದೂ ಮುಸ್ಲಿಂ ಸೌಹಾರ್ದ ಸಹಕಾರಗಳ ಈ ನಾಲ್ಕು ವರ್ಷದ ಅನುಭವದಿಂದ ಸ್ವರಾಜ್ಯ ಸಿಗುವ ಮೊದಲೇ ಗೋವಧೆಯನ್ನು ಬಹಳ ಮಟ್ಟಿಗೆ ತಗ್ಗಿಸಬಹುದು ಅನಿಸಿದೆ."

ಇನ್ನೊಂದು ಕಡೆ:

"ಹಿಂದು ಮುಸ್ಲಿಂ ಐಕ್ಯ. ಹಿಂದೂಗಳು ಮುಸ್ಲಿಮರನ್ನು ನುಂಗಿಹಾಕುವುದೂ ಸಾಧ್ಯವಿಲ್ಲ; ಮುಸ್ಲಿಮರು ಹಿಂದೂಗಳನ್ನು ನಿರ್ನಾಮಮಾಡುವುದೂ ಶಕ್ಯವಲ್ಲ. ಹಿಂದೂಗಳಿಗೆ ಅಂಥ ಯೋಚನೆಯೇನಾದರೂ ಇದ್ದರೆ, ೧೨೦೦ ವರ್ಷದ ಹಿಂದೆ ಮಹಮದ್ ಬಿನ್ ಕಾಸಿಮ ಸಿಂಧು ದೇಶದಲ್ಲಿ ಕಾಲಿಟ್ಟಾಗಲೇ ಆ ಅವಕಾಶ ಕಳೆದುಹೋಯಿತೆಂಬುದನ್ನು ನೆನಪಿಡಬೇಕು. ಆಗ ಮುಸ್ಲಿಮರು ಬರೀ ಒಂದು ಹಿಡಿ ಜನ; ಈಗ ೭ ಕೋಟಿ ಮುಸ್ಲಿಮರಿಗೂ ಅಷ್ಟೆ. ಹಿಂದೂಗಳನ್ನು ಅಳಿಸಿಹಾಕುವ ಪ್ರಸಂಗ ಕಳೆದುಹೋಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಕರಾಚಿಯಿಂದ ಚಿತ್ತಗಾಂಗಿನವರೆಗೆ ತಮ್ಮ ದರಬಾರು ನಡೆದ ಕಾಲದಲ್ಲಿ ಹಿಂದೂ ಜಾತಿಯನ್ನೇ ನಿರ್ನಾಮ ಮಾಡಬಹುದಾಗಿತ್ತು. ನನ್ನ ಪಾಲಿಗಂತೂ ಈ ಪರದೇಶಿಯ ಗುಲಾಮಗಿರಿಗಿಂತ ಹಿಂದೂಜನರ ಗುಲಾಮಗಿರಿ ಸಾವಿರಪಾಲು ಮೇಲು. ಇದರ ಬದಲು ಆ ಗುಲಾಮಗಿರಿಯನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಅದರಿಂದ ನನ್ನ ಸಧರ್ಮಿಗಳು ೨೫ ಕೋಟಿ ಜನರ ಗುಲಾಮಗಿರಿ ತಪ್ಪೀತು."

ಬಡೇಖಾನರ ವ್ಯಕ್ತಿತ್ವವನ್ನು ನೆನೆದಾಗ, ನಾವು ಅವರ ನಿಷ್ಕಾಮವಾದ ದೇಶಪ್ರೇಮವನ್ನು, ಅವರ ಹುಡುಗುತನದ ಹಟವನ್ನೂ, ಒರಟು ಹಾಸ್ಯವನ್ನೂ, ಸ್ವಭಾವದ

ಅತಿಯನ್ನೂ ಮರೆಯುತ್ತೇನೆ. ಅವರು ಗಂಭೀರವಾಗಿದ್ದಾಗಿನ ಎರಡು ಪ್ರಸಂಗ ನನಗೆ ನೆನಪಿವೆ. ಒಂದುಸಲ ಪೈಗಂಬರರ ಸುದ್ದಿ ಮಾತಾಡುತ್ತ ನನಗೆ ಹೇಳಿದರು. 'ಮಹಾದೇವ, ನಿನಗೆ ಗೊತ್ತೆ ? ಪೈಗಂಬರರ ವಚನವೊಂದು ನನಗೆ ಹೆಂಗಸರ ಸಭೆಗೆ ಹೋದಾಗೆಲ್ಲ ನೆನಪಾಗುತ್ತದೆ. ನಿಮಗೆ ಯಾವುದು ಹೆಚ್ಚು ಇಷ್ಟ ಎಂದು ಪೈಗಂಬರರನ್ನು ಕೇಳಿದರಂತೆ. ಅದಕ್ಕೆ ಅವರು 'ಹೆಂಗಸರು, ಹೂ, ಧ್ಯಾನ' ಎಂದರಂತೆ. ನಿಷ್ಕಳಂಕತೆಯ ಗುರುತಾದ ಹೂ, ದೈವೋಪಾಸನೆಯಾದ ಧ್ಯಾನ, ಇವುಗಳ ಜೊತೆಗೆ ಹೆಣ್ಣನ್ನು ಗಣಿಸಿದವರು ಹೆಣ್ಣನ್ನು ಕಾಮದ ಗೊಂಬೆಯೆಂದು ತಿಳಿಯಬಲ್ಲರೆ ? ಅದು ಸಾಧ್ಯವೆ ?'

ಇನ್ನೊಂದು ಸಂದರ್ಭ ಸಾವಿನ ಬಗ್ಗೆ ಬಡೇ ಭಾಯಿಗಿದ್ದ ಭಾವನೆಯನ್ನು ತಿಳಿಸುತ್ತದೆ. ೧೯೩೧ ರಲ್ಲಿ ನಾವು ಇಂಗ್ಲೆಂಡಿನಲ್ಲಿದ್ದಾಗ ಅವರ ಮಗಳೊಬ್ಬಳು ತೀರಿಕೊಂಡಳು ಅವರಿಳಿದುಕೊಂಡಿದ್ದ ಹೋಟೆಲಿಗೆ ತೀರ ಸಂಜೆಗತ್ತಲಲ್ಲಿ ಅವರನ್ನು ಕಾಣಲು ಹೋದೆವು ಒಂದುಗಳಿಗೆ ಎಲ್ಲರೂ ಮೌನವಾಗಿದ್ದೆವು. ಮಾತಾಡಲು ನಮಗೆ ಬಾಯಿಲ್ಲವೆಂಬುದು ಅವರಿಗೆ ಗೊತ್ತು. ಅವರೇ ಆ ಮೌನ ಮುರಿದು ಮಾತಾಡಿದರು 'ಅಫ್‌ಸೋಸ್‌ಸೆ ಕ್ಯಾ ಹೋಗಾ ? ಹಂ ಸಬಕೊ ಚಲೇಜಾನಾ ಹೈ ?' ಆ ಮನೋಧರ್ಮದಲ್ಲಿ ಅಲ್ಲಾನ ಸಂಕಲ್ಪಕ್ಕೆ ಸಂಪೂರ್ಣ ಶರಣಾಗತಿಯಿತ್ತು. ಇನ್ನೊಂದು ಸಂದರ್ಭದಲ್ಲಿ ಬರೀ ವೈರಾಗ್ಯವೇ ಅಲ್ಲ, ಸಾವಿನ ವಿಷಯದಲ್ಲಿ ನಿರ್ಭಯ. ಕೊಂಚಮಟ್ಟಿಗೆ ಹರ್ಷ ಕೂಡ ಕಂಡುಬಂತು ಆಗ ಅವರು ಅದೇತಾನೆ ಸೆರೆಮನೆಯಿಂದ ಬಿಡುಗಡೆಯಾಗಿದ್ದರು. ತಮ್ಮ ಸೆರೆಮನೆ ಅನುಭವವನ್ನು ವರ್ಣಿಸಲು ನಾ ಕೇಳಿದೆ ಅವರ ಸ್ವಾಭಾವಿಕ ಸೆರೆಮನೆಯ ಕಾವಲುಗಾರರೊಡನೆ ನಡೆದ ವಿನೋದ ಪ್ರಸಂಗಗಳಿಂದ ಮಾತು ಮೊದಲುಮಾಡಿದರು. ತಾನು ಅವರಿಗೆ ಹೇಗೆ ಟೋಪಿ ಹಾಕಿದ್ದುದು, ಜೈಲಿನ ಉಗ್ರ ನಿಯಮಗಳನ್ನು ಮೀರಿ ಅವರು ತನಗೆ ತಂದುಕೊಟ್ಟ ಬುಟ್ಟಿಬುಟ್ಟಿ. ಮಿಠಾಯಿ ಹೇಗಿತ್ತೆಂದದ್ದು; ಕಟ್ಟಕಡೆಗೆ ಒಂದು ಗಂಭೀರ ವಾಕ್ಯ ಹೇಳಿದರು 'ಒಂದು ಸಂಗತಿ ಮಾತ್ರ ನನಗೆ ಸದಾ ನೆನಪಿದ್ದೀತು: ಮರಣ ಶಿಕ್ಷೆಯನ್ನು ಆ ಕೈದಿ ಎಷ್ಟು ಗಾಂಭೀರ್ಯದಿಂದ ಇದಿರುಗೊಂಡನೆಂಬುದು. ಮುನ್ನಾದಿನ ಸಂಜೆ ನನ್ನನ್ನು ಕಂಡು ತಾನು ಕೊಲೆಮಾಡಿದ್ದುದುಂಟೆಂದು ಒಪ್ಪಿಕೊಂಡ, ನನಗಾಗಿ ಅಲ್ಲಾನನ್ನು ನೀವು ಪ್ರಾರ್ಥಿಸಿ, ಕ್ಷಮೆಬೇಡಿ ಎಂದ. ಆಗಲಿ ಎಂದೆ ನಾನು. ಅವನು ಎಷ್ಟು ಭಕ್ತಿಯಿಂದ ಪ್ರಾರ್ಥನೆಮಾಡಿದನೋ ! ನಸುಕು ನಾಲ್ಕು ಗಂಟೆಯಿಂದ ಅವನ ಉಚ್ಚಕಂಠದ ಪಶ್ಚಾತ್ತಾಪದ ಪ್ರಾರ್ಥನೆ ನನ್ನ ಪಂಜರಕ್ಕೆ ಕೇಳಿಸುತ್ತಿತ್ತು. ಬೆಳಕು ಹರಿವಾಗ ಕಬೀರನ ಈ ಶ್ರೇಷ್ಠ ಕೀರ್ತನೆಯನ್ನು ಹಾಡುತ್ತಿದ್ದ

ಕರಲೇ ಸಿಂಗಾರ್ ಚತುರ ಅಲಬೇಲೀ !
ಸಾಜನಕೇ ಘರ್ ಜಾನಾ ಹೋಗಾ ।

ನ್ಹಾ ಲೇ ಧೋಲೇ ಸೀಸ ಗುಂಥಾಲೇ ।
ಸಾಜನಕೇ ಘರ್ ಜಾನಾ ಹೋಗಾ ।
ಮಿಟ್ಟೀ ಓಢಾವನ್, ಮಿಟ್ಟೀ ಬಿಛಾವನ್ ।
ಮಿಟ್ಟೀಕಾ ಸಿರಹಾನಾ ಹೋಗಾ ।
ಕಹತ ಕಬೀರ್ ಸುನೋ ಮೇರಿ ಸಜನೀ ।
ಫಿರ ವಹಾಸೆ ನಹಿ ಆನಾ ಹೋಗಾ ॥

‘ಅಣಿಯಾಗು ಒಲವೆ ; ಇನಿಯನ ಸೇರಲು ಅಣಿಯಾಗು. ಸಿಂಗಾರವಾಗು. ಮೈ ತೊಳೆ, ಸಿಂಧೂರ ಧರಿಸು ; ಇನಿಯನ ಮನೆಗೆ ಹೋಗಬೇಕು. ನೆಲಮಾಯಿಯ ತೊಡೆ ಮಡೆ ನಿನ್ನ ಹಸೆ ಮಣೆ. ಮಣ್ಣೇ ಹೊದಿಕೆ, ಮಣ್ಣೇ ತಲೆದಿಂಬು, ಮಣ್ಣೇ ಹಾಸಿಗೆ. ಏಳು, ಮತ್ತೆ ಅಲ್ಲಿಂದ ತಿರುಗಿ ಬರಲಾರದ ಸ್ಥಳಕ್ಕೆ ಹೋಗೋಣ.’

ಈ ಪದ ಹೇಳುತ್ತಿದ್ದಂತೆ ಅಗಲವಾದ ಅವರ ಆ ದೊಡ್ಡ ಮುಖದ ಮೇಲೆ ಕಂಬನಿಯೊಂದು ಜಾರುತ್ತಿತ್ತು. “ಇಂಥ ಮನೋಧೈರ್ಯದಿಂದ ನಾವೆಲ್ಲರೂ ಸಾವನ್ನು ಇದಿರಿಸುವ ಹಾಗಾದರೆ ಎಷ್ಟು ಚೆನ್ನಾಗಿದ್ದೀತು !” ಎಂದರು. ಅವರ ಬಾಯಿಂದಲೇ ನಾನೀ ಹಾಡನ್ನು ಮೊದಲು ಕೇಳಿದ್ದು.

ಕಬೀರನ ಅನುಭವ ಸವಿಯಾದುದು, ಶ್ರೇಷ್ಠವಾದುದು.

ಈ ಸಂಗತಿ ನಡೆದ ಕೆಲವು ದಿನದ ಮೇಲೆ ಆಶ್ರಮ ಭಜನಾವಳಿಯನ್ನು ಮತ್ತೆ ಅಚ್ಚಿಸಿದಾಗ ಈ ಹಾಡನ್ನು ಅದರಲ್ಲಿ ಸೇರಿಸಿದೆ. ಯಾವಾಗಲಾದರೂ ಪ್ರಾರ್ಥನೆಯಲ್ಲಿ ಈ ಹಾಡನ್ನು ಹಾಡಿದರೆ, ನನಗಿದನ್ನು ದಾನ ಮಾಡಿದ ಬಡೇಭಾಯಿಯನ್ನು ನೆನೆಯುತ್ತೇನೆ.

೨೬-೧೨-೩೮ ಮ. ದೇ.

---

# ಮೌಲಾನಾ ಸಾಹೆಬ್

ಎತ್ತರವಾದ ಆಳು. ಗಂಭೀರ ವಿಗ್ರಹ. ಬುದ್ಧಿ ಬೆಳಗುವ, ಭಯ ಭಕ್ತಿ ಮೊಳೆಸುವ ಕಣ್ಣು. ಮೌಲಾನಾ ಸಾಹೇಬರು ಇಸ್ಲಾಮೀ ಸಂಸ್ಕೃತಿಯ ಶ್ರೇಷ್ಠ ಗುಣದ ಮಾದರಿಗಳಂತಿದ್ದ ಹಕೀಂ ಅಜಮಲ್ ಖಾನ್, ಡಾ|| ಅನ್ಸಾರಿಗಳಂಥ ಶ್ರೇಷ್ಠ ವ್ಯಕ್ತಿಗಳ ಸಾಲಿಗೆ ಸೇರಿದವರು. ಹೋದಲ್ಲೆಲ್ಲ ತಪ್ಪದೆ ಗೌರವ ಸಲ್ಲಿಸಿ ಕೊಡುವ ಸಜ್ಜನಿಕೆ, ಶಿಷ್ಟಾಚಾರ ಇದೆ ಅವರಿಗೆ. ಅದರಂತೆ, ಸಹವಾಸ ಸುಲಭರಾಗಿ ಸಿಕ್ಕಿದವರೆಲ್ಲರ ಕೈಗೂ

ನಿದ್ದು, ತನಗೆ ಬೇಕಿತಲಿ ಬೇಡದಿರಲಿ ಜನರ ನಡುವೆ ಮುಳುಗಿ ಹೋಗಿ ಎಲ್ಲರಿಗೂ ಬೇಕಾದವರಾಗುವ ನಾಯಕನಿಗಿಲ್ಲದ ಗಾಂಭೀರ್ಯವೂ ಬಂದಿದೆ. ಅವರ ಅಗಾಧ ಪಾಂಡಿತ್ಯ, ಅಪಾರವಾದ ಜ್ಞಾನದಾಹ, ಜೊತೆಗೆ ಅವರ ಆಲೋಚನಾಪರ ವೃತ್ತಿ – ಇವೆಲ್ಲ ಸೇರಿ, ಜನಗಡಲಿನ ಬಳಿ ಸಾರಿ ಅವರ ಸುಖದುಃಖದ ಕೊನೆಯಿಲ್ಲದ ಕತೆಗಳನ್ನು ಕೇಳಿ, ಅವರಿಗೆ ಸಮಾಧಾನ ಹೇಳುವ ಸ್ವಭಾವ ಮೌಲಾನರಿಗೆ ಸಾಧ್ಯವಿಲ್ಲದಂತೆ ಮಾಡಿವೆ. ದೇಶದ ದಲಿತ ಜನರ ವಿಷಯದಲ್ಲಿ ಅವರಿಗೆ ಕುರುಕ ಇಲ್ಲವೆಂದಲ್ಲ; ಸಹಾನುಭೂತಿಯಿಲ್ಲದಿಲ್ಲ. ಖಾದಿಯ ಭಾವಾರ್ಥವನ್ನು ಅವರು ಮೊನ್ನೆ ವಿವರಿಸುತ್ತಿದ್ದಾಗ ಕೇಳಿದೆ. ಹಾಗೇ ಇನ್ನೂ ಗಂಟೆ ಗಂಟೆ ಮಾತಾಡಬಾರದೆ ಇವರು ಅನಿಸಿತು. ಅವರು ಹೇಳಿದರು: "ಬಡವರಿಗೂ ಬಲ್ಲಿದರಿಗೂ ನಡುವೆ ಇರುವ ಹಳ್ಳದಂಥ ಈ ಅಗಾಧವಾದ ಭೇದವನ್ನು ನಾಶ ಮಾಡಿದರೆ ಅದು ಸ್ವರಾಜ್ಯ; ಅಲ್ಲಿಯವರೆಗೆ ಅದು ಸ್ವರಾಜ್ಯವಲ್ಲ. ಇದಕ್ಕೆ ಖಾದಿಗಿಂತ ಉತ್ತಮೋಪಾಯ ನನಗೆ ತಿಳಿದಿಲ್ಲ. ಸಾರ್ವತ್ರಿಕವಾಗಿ ಖಾದಿ ಬಳಸಿದರೆ ನಮ್ಮ ದಲಿತ ಕೋಟಿಯೊಡನೆ ಕೊಂಚವಾದರೂ ಸಮಾನಭಾವ ನಮಗೆ ಬಂದೀತು. ಯುಗ ಯುಗಾಂತರದಿಂದ ನಾವು ನಿಂತಿದ್ದ ಮೇಲುಮೆಟ್ಟಿಲಿಂದ ಇಳಿಯಬಯಸುತ್ತೇವೇನು ನಾವು? ನಮಗಿಂತ ಅದೃಷ್ಟಹೀನರಾದ ನಮ್ಮ ಅಣ್ಣತಮ್ಮಂದಿರೂ ನಮ್ಮ ಜೊತೆಗೆ ನಿಂತು ಕೆಲಸ ಮಾಡಿ, ಸ್ವಾತಂತ್ರ್ಯ ಯೋಗ ಸಾಧನೆಯ ಹೆಮ್ಮೆ ಹಿಗ್ಗುಗಳನ್ನು ಪಡೆಯಲಿ; ನಮ್ಮಂತೆಯೇ ಸ್ವಾತಂತ್ರ್ಯದ ಬೆಳಕನ್ನು ಕಾಣಲಿ ಎಂದು ನಮಗನಿಸುತ್ತದೆಯೇನು? ಹಾಗಾದರೆ ಸಾರ್ವತ್ರಿಕ ಖಾದಿ ಉಪಯೋಗಕ್ಕಿಂತ ಬೇರೆ ಸಾಧನವಿಲ್ಲ' ಹೀಗಿದ್ದರೂ ಮೌಲಾನಾ ಸಾಹೇಬರು ಒಂದು ಸಳ್ಳಿಯಲ್ಲಿ ರಾಟೆ ತಿರುಗಿಸುತ್ತ ಕೂತಾರೆಂದು ನನಗನಿಸದು. ಅವರ ಸ್ವಭಾವಕ್ಕೆ ಅದು ಒಗ್ಗದು. ಅವರಿಗಿದು ಗೊತ್ತಿದೆ. ಅವರ ಹಾಗೆ ತಮ್ಮ ಮಿತಿಯನ್ನು ಕಂಡುಕೊಂಡ ನಾಯಕರು ಬಹಳ ಕಡಮೆ. ಕಾಂಗ್ರೆಸ್ ಗುಂಪಿನಲ್ಲಿ ಅನೇಕರಿಗಿಂತ ಅವರ ಬುದ್ಧಿಶಕ್ತಿ ಉತ್ತಮವಾದುದು. ಯಾವುದಾದರೂ ಕಾರ್ಯನೀತಿಯನ್ನು ಅವರು ವಿವರಿಸುವ ರೀತಿಯಲ್ಲಿ. ಕಾಂಗ್ರೆಸ್ ಪಡೆಯಲ್ಲಿ ಮೌಲಾನಾರನ್ನು ಮೀರಿಸಿದ ಚಾಣಾಕ್ಷರಿಲ್ಲ. ಒಂದು ಸಲ ಅವರಿಗೆ ಒಂದು ನೆಲೆ ಮನವೊಪ್ಪಿದರೆ ಸಾಕು, ಅವರ ಹಾಗೆ ಅದನ್ನು ಸರ್ವ ದೃಷ್ಟಿಕೋನದಿಂದಲೂ, ಸಕಲಾರ್ಥದಿಂದಲೂ ನಿರ್ವಚನ ಮಾಡುವ ಸಮಯಸ್ಫೂರ್ತಿ ಮತ್ತಾರಿಗೂ ಇಲ್ಲ. ಇದೇ ಅನೇಕ ಸಲ ಕ್ಲಿಷ್ಟಪ್ರಸಂಗ ಬಂದಾಗ ಗಾಂಧೀಜೀ ಮೌಲಾನಾರ ಕಡೆ ತಿರುಗುವಂತೆ ಮಾಡುವ ಶಕ್ತಿ. ಗಾಂಧೀಜಿಯಲ್ಲಿ ನಿಮಗಿರುವ ವಿಶ್ವಾಸಕ್ಕೆ ಏನು ಕಾರಣ ಎಂದು ಮೌಲಾನಾ ಸಾಹೇಬರನ್ನು ಒಮ್ಮೆ ನಾ ಕೇಳಿದೆ. "ಅವರ ಶ್ರೇಷ್ಠ ಬುದ್ಧಿಯಂತೂ ಹರಿಯೇ ಸರಿ. ಅವರ ನಿಷ್ಕಳಂಕ ಸತ್ಯಸಂಧತೆ ನನ್ನನ್ನು ಅವರ ಕಡೆ ಸೆಳೆಯಿತು. ಅದರ ಗೀತಿ ರವರೆಗೆ ನಾನು ಕೊಂಚ ಟೀಕಾಚಾರ್ಯನಾಗಿಯೇ ಇದ್ದೆ.

ಆಮೇಲೆ ಅವರು ಯಂಗ್ ಇಂಡಿಯಾದಲ್ಲಿ ಬರೆದ ಲೇಖನ ಒಂದನ್ನು ಓದಿದೆ. ಅದರಲ್ಲಿ ಕಸ್ತೂರ ಬಾ ಮಾಡಿದ ಒಂದು ಅಲ್ಪಲೋಪಕ್ಕಾಗಿ ಆಕೆಯನ್ನು ತೀವ್ರವಾಗಿ ಟೀಕಿಸಿದ್ದರು. ಆಶ್ರಮಕ್ಕೆ ಬಂದಿದ್ದವರು ಯಾರೋ ಒಬ್ಬರು ಕೊಟ್ಟ ಕಾಣಿಕೆಯನ್ನು ವ್ಯವಸ್ಥಾಪಕರ ಕೈಗೆ ಕೊಡಬೇಕಾಗಿತ್ತು ; ಆಕೆ ಅದನ್ನು ಮರೆತಿದ್ದರು. ಅದನ್ನೋದಿ ನಾನಂದುಕೊಂಡೆ : 'ಈತ ಸರಿ ಸತ್ಯವಂತ ; ಹಗೆಗಳು ಕೂಡ ಈತನ ಸತ್ಯವಂತಿಕೆಯನ್ನು ಸಂಶಯಿಸಲಾರರು ; ಅವರ ಸತ್ಯವಂತಿಕೆ ಅವರನ್ನು ಎಷ್ಟು ದೂರ ಸೆಳೆದೊಯ್ಯುತ್ತಿತ್ತೋ ನೋಡಿ ನನಗೆ ಅಚ್ಚರಿಯಾಯಿತು ?''

ಕಾಂಗ್ರೆಸ್ ಕಾರ್ಯಕಲಾಪಗಳಲ್ಲಿ ಮೌಲಾನಾರಿಗು ವಿಶಿಷ್ಟ ಸ್ಥಾನ ರಾಷ್ಟ್ರಪತಿಯಾಗಿರಲಿ ಅಲ್ಲದಿರಲಿ, ಆ ಸ್ಥಾನ ಅವರಿಗಿದ್ದೇ ಇದೆ ಇಷ್ಟು ಕಾಲವೂ ಹಾಗೆ ನಡೆದಿದೆ. ಮುಂದೆಯೂ ಅವರಿಗೆ ದೇವರು ದೇಹದಾರ್ಢ್ಯ ಕರುಣಿಸಿದಷ್ಟು ದಿನ ಆ ಸ್ಥಾನ ಅವರಿಗಿದ್ದೇ ಇರುತ್ತದೆ

ಹೀಗಿದ್ದರೂ ಅವರಿಗೆ ಪದವಿ, ಅಧಿಕಾರವೆಂದರೆ ಬಲು ಸಂಕೋಚ ಪ್ರಾಂತೀಯ ಸ್ವರಾಜ್ಯಕ್ಕೆ ಹಿಂದಿನ ಕಾಲದಲ್ಲೂ ಆಮೇಲೂ ಯಾವ ಶಾಸನ ಸಭೆಯಲ್ಲಾದರೂ ಪಕ್ಷನಾಯಕರಾಗಿರಬಹುದಾಗಿತ್ತು ಆ ಸುಳಿಗೆ ಸಿಕ್ಕದಂತೆ ತಮ್ಮ ದೋಣಿ ನಡೆಸಿದರು. ದೇಶಬಂಧು ದಾಸರ, ಪಂಡಿತ ಮೋತೀಲಾಲರ ಮಂತ್ರಾಲೋಚನಾ ಗೋಷ್ಠಿಗೆ ಸೇರಿದಿದ್ದರು ; ಇವರ ಸಲಹೆ ಕೇಳದೆ ಯಾವ ಮುಖ್ಯ ಕಾರ್ಯವನ್ನೂ ಅವರು ಮಾಡುತ್ತಿರಲಿಲ್ಲ. ಹೀಗೆ ಸಲಹೆಗಾರರಾಗಿರುವುದರಲ್ಲೇ ಅವರಿಗೆ ಇಷ್ಟ. ರಂಗಕ್ಕೆ ಬಂದು ನಿಲ್ಲುವ ಯೋಚನೆಯು ಇಲ್ಲ.

ಪುಸ್ತಕರಾಶಿಯ ನಡುವೆ, ಬುದ್ಧಿಯ ವ್ಯವಸಾಯದಲ್ಲಿ ಅವರ ಮನಸ್ಸು ತುಂಬಿ ಬರುತ್ತದೆ. ವಿದ್ಯಾದೇವಿಗೆ ಸಲ್ಲಿಸಬೇಕಾದ ಕಾಣಿಕೆಯನ್ನು ದೇಶಕ್ಕೆ ನಾ ಕೊಡಬೇಕಾಗಿ ಬಂತು ಎಂದು ಲೋಕಮಾನ್ಯರು ತಮ್ಮ ಬಗ್ಗೆ ಹೇಳುತ್ತಿದ್ದರು ಸೆರೆಯ ಹೊರಗೆ ಅವರಿದ್ದ ಕಾಲವೆಲ್ಲ ತಾಯಿನಾಡಿನ ಸೇವೆಗೆ ಸಲ್ಲದಿದ್ದರೆ, ಗೀತಾರಹಸ್ಯ, ವೇದಗಳ ಉತ್ತರಧ್ರುವ ನಿವಾಸಗಳಂಥ ಪ್ರೌಢಪಾಂಡಿತ್ಯದ ಗ್ರಂಥ ಎಷ್ಟೋ ಬರೆಯಬಹುದಾಗಿತ್ತು. ಮೌಲಾನಾರ ವಿಷಯವೂ ಹಾಗೇ. ತಿಲಕರು ಉತ್ತಮ ಭಾಷಾ ಶಾಸ್ತ್ರ ಪಂಡಿತರಾಗಿದ್ದರೆಂಬುದು ಅನೇಕರಿಗೆ ಗೊತ್ತಿಲ್ಲ. ಮೌಲಾನಾರೂ ಹಾಗೇ; ಭಾಷಾಶಾಸ್ತ್ರ ಕೋವಿದರು. ಆ ಪಾಂಡಿತ್ಯವೆಲ್ಲ ಈಗ ಊಟದ ಹೊತ್ತಿನ ವಿನೋದವಾಗಿದೆ. ಭಾರತೀಯ ಭಾಷೆಗಳಲ್ಲಿ ಏಕಾರ್ಥದ ಶಬ್ದಗಳನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಯಾವುದಾದರೊಂದ ಶಬ್ದ ಅವರ ಮನಸ್ಸಿಗೆ ರುಚಿಸಿದರೆ ಹಿಗ್ಗಿ ಹೀರೇಕಾಯಾಗುತ್ತಾರೆ. Post Script

ಎಂಬ ಇಂಗ್ಲೀಷ್ ಪದಕ್ಕೆ ಗುಜರಾತಿನಲ್ಲಿ ಸಾಮಾನ್ಯವಾಗಿ ಬಳಸುವ ಪದ ಒಂದನ್ನು ನಾನೊಮ್ಮೆ ಹೇಳಿದೆ. ಆ ಪದ ಗುಜರಾತಿಯದಲ್ಲ, ಎರಡು ಪಾರ್ಸಿ ಪದಗಳ ಸಮಾಸ. ಗುಜರಾತಿಯಲ್ಲಿ ಬಳಕೆಗೆ ಬಂದಿದ್ದರೂ ಫಾರಸಿಯಲ್ಲಿ ಬಳಕೆಯಿರಲಿಲ್ಲ. ಆಮೇಲೆ ಎಷ್ಟೋ ಸಲ 'ತಾಜಾ ಕಲಂ'ಶಬ್ದ ಬಲು ಚೆನ್ನಾಗಿದೆ. ಅದನ್ನ ನಾವು ಬಳಸಬೇಕು' ಎನ್ನುತ್ತಿದ್ದರು. ವರ್ಕಿಂಗ್ ಕಮಿಟಿ ಸದಸ್ಯರು ಊಟಕ್ಕೆ ಕೂತಾಗ ತಮ್ಮ ಸೀದಾ-ಒಮ್ಮೊಮ್ಮೆ ಪರಸ್ಪರ ನಿಂದನೆ ತುಂಬಿದ-ಚರ್ಚೆಯ ಬೇಸರವನ್ನು ಕಳೆಯಲು ಕೇವಲ ಹುಡುಗಾಟವಾಡುವುದುಂಟು. ಇದರಲ್ಲಿ ಮೌಲಾನಾರ ರೀತಿ-ಬೇರೆ ಬೇರೆ ದೇಶಗಳ, ಬೇರೆ ಬೇರೆ ಯುಗಗಳ ಆಹಾರದ ಚರ್ಚೆ. ಅವರಿಗೆ ಅದೆಲ್ಲ ನಿಕರವಾಗಿ ಗೊತ್ತು. ಜೊತೆಗೆ ಅವರ ಭಾಷಾ ಶಾಸ್ತ್ರದ ತಳುಕು-ಮಿಣುಕು ಬೇರೆ, ಸಾಹಿತ್ಯದಲ್ಲಿ ವಿನೋದ, ಕೊಂಚ ವಿಷಯ ಜ್ಞಾನ ಆಗಲಿಕ್ಕೆ, ಯಾರೋ ಇಂಗ್ಲೀಷಿನ ರಿಲಿಜನ್ (ಧರ್ಮ) ಪದ ಬಳಸಿದರು. ಒಡನೆಯೇ ಮೌಲಾನಾ 'ಮಝಬ್' 'ದೀನ್'ಗಳ ಭೇದವನ್ನು ತಿಳಿಸಿದರು. "ಮಝಬನ್ನ ಸಾಮಾನ್ಯವಾಗಿ ಧರ್ಮ ಎನ್ನುತ್ತಾರೆ. ನಿಜವಾಗಿ ಅರಬ್ಬೀ ನುಡಿಯಲ್ಲಿ ಧರ್ಮಕ್ಕೆ ದೀನ್ ಎಂದು. ಮಝಬ್ ಎಂದರೆ ದಾರಿ. ಈ ದೀನ್ ಅನೇಕಾರ್ಥದ ವಿನಯ-ನಿಯಮ, ಕರ್ತವ್ಯ ಎಂದು ಅರ್ಥ ಆಗಿದೆ. ದೀನ್‌ಗೂ ಅದೇ ಅರ್ಥ. ಅವೆಸ್ತಾದಲ್ಲಿದ್ದ ಹಾಗೆ ಸಂಸ್ಕೃತದಲ್ಲೂ ಇರಬೇಕು. ಧರ್ಮವೂ ಅದೇ ಗೋತ್ರ ಎನ್ನುವ ಸಾಹಸ ಮಾಡಲಾರೆ. ಧರ್ಮಕ್ಕೂ ಅದೇ ಅರ್ಥವಿದೆ. ಯುಗದಿಂದ ಯುಗಕ್ಕೆ, ದೇಶದಿಂದ ದೇಶಕ್ಕೆ ಶಬ್ದಗಳು ಹೇಗೆ ಪರಂಪರಾಗತವಾಗಿ ಬರುತ್ತವೆಯೋ ಆಶ್ಚರ್ಯ! ಸಂಸ್ಕೃತದ ಸನ್ಯಾಸ ಶಬ್ದ ನೋಡಿ. ಹಾಗೆಂದರೆ-ಸಂಸಾರ ಬಿಟ್ಟು ಕಾಡಿಗೆ ಹೋಗುವುದು. ಹಳೇ ಫಾರಸಿಯಲ್ಲಿ ಸನ್ಯಾಸವು ಸಾಸಾನ್ ಆಗಿದೆ. ಒಂದು ಫಾರಸೀ ಅರಸು ಮನೆತನಕ್ಕೆ ಸಾಸಾನಿದರೆಂದು ಹೆಸರಿದೆ. ಅವರಲ್ಲಿ ಮೊದಲ ದೊರೆ ಪಟ್ಟಾಭಿಷೇಕಕ್ಕೆ ಮೊದಲು ಸನ್ಯಾಸಿ ಜೀವನ ನಡೆಸಿದ್ದನಂತೆ. ಆಗಿನ ಕಾಲದಲ್ಲಿ ದೊರೆಗಳಾಗುವುದು ಎಷ್ಟು ಸುಲಭವಾಗಿತ್ತೋ; ಮಕ್ಕಳಿಲ್ಲದೆ ದೊರೆ ಸತ್ತರೆ ಬೆಳಿಗ್ಗೆ ಊರ ಬಾಗಿಲು ತೆರೆದಾಗ ಮೊದಲು ಕಣ್ಣಿಗೆ ಬಿದ್ದವರಿಗೆ ಪಟ್ಟ ಕಟ್ಟಿಯೆಂದು ಹೇಳಿ ಸಾಯುತ್ತಿದ್ದ.'

ಮೌಲಾನಾರ ಅರಬ್ಬೀ ಫಾರಸೀ ಪಾಂಡಿತ್ಯ ಪೂರ್ಣವಾದುದು. ಆದರೂ ಅವರು ಆಡುವ ಉರ್ದು ತುಂಬಾ ಶುದ್ಧ, ಸುಲಭ. ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತದೆ. ಗಾಂಧೀಜೀ ಅನ್ನುವಂತೆ ಅವರ ಭಾಷೆ ಹಿಂದುಸ್ತಾನಿ, ಹಿಂದುಸ್ಥಾನದ ರಾಷ್ಟ್ರ ಭಾಷೆ. ಸಮಯೋಚಿತ ಪದಕ್ಕಾಗಿ, ಅವರು ತಡಕಾಡುವುದೇ ಇಲ್ಲ; ಸಿದ್ಧವಾಗಿರುತ್ತದೆ. ಒಮ್ಮೊಮ್ಮೆ ಅವರ ದಿನ ಬಳಕೆಯ ಉಪಮೆಗಳಿಂದ ವಿಷಯ ಮನಸ್ಸಿಗೆ ನಾಟುವಹಾಗೆ ಮತ್ತಾವುದರಿಂದಲೂ ಆಗದು. ೧೯೪೬ ರಲ್ಲಿ ಒಮ್ಮೆ ಅವರೊಡನೆ ಮಾತಾಡುತ್ತಿದ್ದೆ. ನಮ್ಮ ಜನತೆಯ ಭಕ್ತಿ ಶ್ರದ್ಧೆಗಳ ಮಾತು ಬಂತು.

‘ಆ ಶ್ರದ್ಧಾ ಭಕ್ತಿಗಳಿದ್ದುದರಿಂದಲೇ ನಾವು ಹಲವು ಕದನ ನಡಸಿ ಕೆಲಮಟ್ಟಿಗೆ ಗೆಲವುಗಳಿಸಿದ್ದು’ ಎಂದೆ ನಾನು. ಈ ಪ್ರಾಸಂಗಿಕ ವಾಕ್ಯಕ್ಕೆ ಮೌಲಾನಾ ದೀರ್ಘ ವ್ಯಾಖ್ಯಾನವನ್ನೇ ಮಾಡಿದರು. ಅದೊಂದು ಪ್ರವಚನ. ಅವರ ಮಾತಿನಲ್ಲೆ ಹೇಳ ಬಯಸುತ್ತೇನೆ

‘ನಿಜ. ಅಷ್ಟೆಲ್ಲ ಮಾಡಿತು ಆ ಶ್ರದ್ಧೆ. ಮುಂದೆಯೂ ಮಾಡಬಲ್ಲದು. ಇರುವ ಕಷ್ಟ ಇದು: ಧರ್ಮ ಅಗಾಧ ಶಕ್ತಿ. ಅದರ ಆಳ ಅರಿಯಲಳವಲ್ಲ. ಮೂರ್ಖನ ಕೈಗೆ ಎತ್ತಿನ ಗಾಡಿ ಕೊಟ್ಟರೆ ಬಹಳವಾದರೆ ಗಾಡಿ ಮುರಿದು, ಕೆಡವಿ ಒಬ್ಬಿಬ್ಬರಿಗೆ ಗಾಯ ಮಾಡಿಯಾನು. ಅದೇ ರೈಲು ಬಿದ್ದರೆ? ನೂರಾರು ಪ್ರಾಣಹಾನಿ, ಎಷ್ಟೋ ನಷ್ಟ. ಧರ್ಮ ರೈಲುಯಂತ್ರದ ಹಾಗೆ. ಕುಶಲನಾದ ಜಾಗರೂಕನಾದ ಸಾರಥಿಯ ಕೈಯಲ್ಲಿರಬೇಕು. ಅಯೋಗ್ಯ ಸಾರಥಿಯಾದರೆ ಅನಾಹುತವಾದೀತು. ನಮ್ಮ ದುರದೃಷ್ಟ; ಧರ್ಮವಿಂದು ಅಯೋಗ್ಯರ ಕೈಗೆ ಸಿಕ್ಕಿದೆ. ಅವರು ಅದನ್ನು ಅಧರ್ಮ ಮಾರ್ಗಕ್ಕೆ ಸೆಳೆದಿದಾರೆ. ಎಲ್ಲಿಗೆ ಹೋಗಿ ಬೀಳುತ್ತೇವೋ ನಾನರಿಯೆ?

ಮೌಲಾನಾ ಇಂಗ್ಲಿಷ್ ಮಾತಾಡುವುದು ಬಹಳ ಕಡಮೆ. ಅವರ ಪುಸ್ತಕ ಸಂಗ್ರಹದಲ್ಲಿ ಇಂಗ್ಲಿಷಿನ, ಫ್ರೆಂಚಿನ ಉತ್ತಮ ಗ್ರಂಥಗಳಿವೆ, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಷೆಲಿ ಮುಂತಾದ ಇಂಗ್ಲಿಷ್ ಕವಿಗಳ ಪರಿಚಯ ಇದೆ. ಆದರೆ ಅವರ ಮೆಚ್ಚಿನ ಕವಿ—ಅವರೇ ಹೇಳಿದರು—ಬೈರನ್. ಅವನಿಗೆ ಸಾಟಿಯಾದ ಕವಿ ಇಂಗ್ಲೀಷಿನಲ್ಲಿಲ್ಲ ಎಂದು ಗಯಟೆ ಕವಿ ಹೇಳಿದ್ದು ಅವರಿಗೆ ಸಮ್ಮತ. ಬೈರನ್ನನ ಕಾವ್ಯವಲ್ಲದೆ, ಗ್ರೀಸಿನ ವಿಮೋಚನೆಗಾಗಿ ಆತ ಮಾಡಿದ ಸಾಹಸ, ಆ ಯುದ್ಧದಲ್ಲಿ ಕೊಟ್ಟ ಆತ್ಮಾಹುತಿ, ವಿಚಾರ ಸ್ವಾತಂತ್ರ್ಯಕ್ಕಾಗಿ ನಿರ್ಭಯವಾಗಿ ವಾದಿಸಿ ಎಲ್ಲೆಲ್ಲೂ ರಾಜಕೀಯ ಕ್ರಾಂತಿಯನ್ನೆ ಬೀರಿದ ಆತನ ವೀರ ವೃತ್ತಿ ಮೌಲಾನಾಗೆ ಹೆಚ್ಚು ಪ್ರಿಯ.

ವಿಶ್ವದ ಮಹಾಜ್ಞಾನಿಗಳೆಲ್ಲ ಅವರ ಗ್ರಂಥ ಸಂಗ್ರಹದಲ್ಲಿದ್ದಾರೆ. ಗಯಟೆ, ಸ್ಪಿನೋಜ, ರೂಸೋ, ಮಾರ್ಕ್ಸ್, ಹಾವೆಲಕ್ ಎಲ್ಲಿಸ್. ಉಪನಿಷತ್ತು ವೇದ ಇವೆ. ಆಧುನಿಕ ಗ್ರಂಥಗಳೂ ಇವೆ. ಇತಿಹಾಸ, ಅಂತರ ರಾಷ್ಟ್ರೀಯ ಸಾಹಿತ್ಯ ಸಂಗ್ರಹ—ಎಲ್ಲಾ ಇವೆ. ಅವರ ಹಿಂಗಲಾರದ ಪುಸ್ತಕದಾಹ ಎಲ್ಲ ವೇವರ್ಲಿ ಕಾದಂಬರಿ, ಡ್ಯೂಮಾಸ್, ಹ್ಯೂಗೋ ಗ್ರಂಥ, ಮುಖ್ಯವಾಗಿ ಫ್ರಾನ್ಸಿನ ಕ್ರಾಂತಿಯ ಎಲ್ಲ ಕಾದಂಬರಿಗಳನ್ನೂ ಓದಿಸಿದೆ. ಟಾಲ್‌ಸ್ಟಾಯ್, ರಸ್ಕಿನರ ಗ್ರಂಥಗಳನ್ನು ಹಲವು ಬಾರಿ ಓದಿದಾರೆ. ಇತಿಹಾಸ, ತತ್ವಶಾಸ್ತ್ರದ ಗ್ರಂಥಗಳಂತೂ ಅವರ ಎಡೆಬಿಡದ ಗೆಳೆಯರು, ಒಡನಾಡಿಗಳು. ಒಂದು ಸಲ ರೈಲು ಪ್ರವಾಸದಲ್ಲಿ ನ್ಯಾಯ ವೈಶೇಷಿಕವನ್ನು ಓದುತ್ತಿದ್ದುದನ್ನು ನೋಡಿದೆ. ಈ ಗಡಿಬಿಡಿಯ ಕಾಲದಲ್ಲೂ ಅವರಿಗೆ ಜೀನ್ ಪಾಂಪಡೋರ್ ಬಗ್ಗೆ ಒಂದು ಪುಸ್ತಕ

ಓದಿ ಹಿಗ್ಗುವಷ್ಟು ವಿರಾಮವಿದೆ. ಪೈಗಂಬರ್, ಉಮರರ ಬಗ್ಗೆ ಪ್ರಕಟವಾದ ತೀರ ಇತ್ತೀಚಿನ ಗ್ರಂಥ ಅವರ ಮೇಜಿನ ಇದಿರು ಪುಸ್ತಕದ ಬೀರುವಿನಲ್ಲಿದೆ. ಅವರ ಜೊತೆಗೆ ಫ್ಲಾಬರ್ಟ್‌ನ ಮ್ಯಾಡೆಮ್ ಬೊವರಿಯೂ ಇದೆ! ಸಾಲು ಸಾಲು ತುಂಬಿದ ಅರಬ್ಬೀ, ಫಾರಸೀ, ತುರ್ಕಿ ಗ್ರಂಥಗಳ ಬೀರುಗಳ ಮಾತು ಹೇಳಬೇಕಾಗಿಯೇ ಇಲ್ಲ. ಆ ಗ್ರಂಥಗಳ ಹೆಸರೂ ನಮಗೆ ಗೊತ್ತಿಲ್ಲ.

ಅವರ ಪತ್ರವ್ಯವಹಾರ ಒಂದು ಪರ್ವತ. ಇದರ ಮೂಲಕವೇ ಹೊರಗಿನ ಜಗತ್ತಿನ ಸಂಬಂಧ. ಜಗಲೂಲ್ ಪಾಷಾ, ಫತಿಬೇ, ಸಂಗಡ ಅವರ ಪತ್ರವ್ಯವಹಾರವಿತ್ತು. ಮುಸ್ತಾಫ್ ಕೆಮಾಲ್ ಪಾಷಾ, ತುರ್ಕಿಯ ಉಳಿದ ನಾಯಕರು ಅವರಿಗೆ ಪೂರ್ಣ ಪರಿಚಿತರು. ೧೯೦೮ರಲ್ಲಿ ತಮ್ಮ 'ಸಂಘಟನೆ-ಪ್ರಗತಿ'ಯ ಕಾರ್ಯಕ್ರಮದಿಂದ ಕ್ರಾಂತಿಯನ್ನು ತಂದ ತರುಣ ತುರ್ಕಿಪಕ್ಷದ ನಾಯಕರೆಲ್ಲ ಮೌಲಾನಾಗೆ ಅಂತರಂಗದ ಗೆಳೆಯರು. ಕಳೆದ ಯುರೋಪು ಯುದ್ಧದವರೆಗೆ ಈ ಪಕ್ಷ ಅಧಿಕಾರದಲ್ಲಿತ್ತು. ತುರ್ಕಿ ಶಾಸನ ಸಭೆಯ ಅಧ್ಯಕ್ಷ ಅಹಮದ್ ರೀದಾ, ಡಾ|| ಸಲಾಹುದ್ದೀನ್, ಎನ್ವರ್ ಪಾಷಾ, ಜವಾಡ್ ಬೆ ಇವರೊಡನೆ ಪತ್ರವ್ಯವಹಾರ ಮಾಡುತ್ತಿದ್ದರು. ಇರಾಸಿನ ಸುಪ್ರಸಿದ್ಧ ತಕಿ ಜದೇ ಕೂಡ ಮೌಲಾನಾರ ಗೆಳೆಯ.

ಅವರ ಗ್ರಂಥಾವಲೋಕನ ಪರತೆಯಿಂದ ಅವರಿಗೆ ಏಕಾಂತಪ್ರಿಯತೆ ಒಗ್ಗಿದೆ. ಅವರಷ್ಟು ಮೆದುವು, ಮರ್ಯಾದೆವಂತರು ಇಲ್ಲದಿದ್ದರೂ ಅವರಿಗೆ ಗೆಳೆಯರು ಕಡಮೆ. ಸೊಗಸಾಗಿ ಸಲ್ಲಾಪ ಮಾಡಬಲ್ಲವರಾದರೂ ಮೌನವೇ ಅವರಿಗೆ ಹೆಚ್ಚು ಇಷ್ಟ. ಅವರ ಸ್ವಭಾವ ತುಂಬಾ ಗಂಭೀರ. ಆದರಿಂದ ಅವರ ಬಾಳಿನ ವಿಷಯವೇ ನಮಗನೇಕರಿಗೆ ಹೆಚ್ಚು ಗೊತ್ತಿಲ್ಲ. ಚಹಾ ಕಂಡರೆ ಇಷ್ಟ; ಬಿಡದೆ ಸಿಗರೇಟು ಸೇದುವ ಚಟ ಇಷ್ಟೇ ಗೊತ್ತು.

ಅವರ ಬಾಳು ಬಲು ಸರಳ. ಅವರ ಕೋಣೆಯಲ್ಲಿ ಬರೀ ಪುಸ್ತಕ, ಬೇರೇನೂ ಕಾಣುವುದಿಲ್ಲ. ಚಿತ್ರಗಳು ಕೂಡ ಇಲ್ಲ. ನೀವು ಸೆರೆಗೆ ಹೋದಾಗ ಸಿಗರೇಟಿಗೆ ಏನು ಮಾಡಿದಿರಿ ಎಂದು ನಾ ಕೇಳಿದೆ. 'ಈ ಪ್ರಶ್ನೆ ಕೇಳಿದ್ದು ಒಳ್ಳೇ ಕೆಲಸವಾಯಿತು. ೧೯೨೧ರಲ್ಲಿ ಅಲೀಪುರ ಸೆರೆಮನೆಗೆ ನನ್ನನ್ನು ಕರೆದೊಯ್ದಾಗ ನನ್ನಲ್ಲಿ ಹತ್ತು ಸಿಗರೇಟು ಇದ್ದವು. ಎರಡು ಸೇದಿ ಉಳಿದವನ್ನು ಸೆರೆಮನೆ ದರೋಗನಿಗೆ ಕೊಟ್ಟೆ. ಒಳಗೆ ನಿನಗೆ ಬೇಕಾದೀತು ಎಂದು ದೇಶಬಂಧು ದಾಸರು ಅಣಕಿಸಿದರು. ಬಿಡುಗಡೆಯಾಗುವತನಕ ನನಗೇನು ಬೇಡ ಎಂದೆ. ನಿಜವಾಗಿ, ಒಂದೆರಡುದಿನದಲ್ಲಿ ಸಿಗರೇಟು ಮರತೇಹೋಯಿತು!' ಎಂದು ಹೇಳಿದರು. ಈ ವಿಷಯದಲ್ಲಿ ಅವರು ಪಂಡಿತ ಮೋತೀಲಾಲ ನೆಹರು ಇದ್ದಂತೆ. ಒಂದು ಸಲ

ಮೋತೀಲಾಲರು ನನಗೆ ಹೇಳಿದರು ' ನನಗೆ ಒಳ್ಳೊಳ್ಳೆ ವಸ್ತುಗಳ ಮೇಲೆ ಪ್ರೀತಿ. ಆದರೆ ಬೇಕೇಬೇಕೆಂಬ ಅಭ್ಯಾಸ ಚಪಲವಿಲ್ಲ. ಒಂದು ಗಳಿಗೆಯಲ್ಲಿ ಬೇಕಾದರೂ ಬಿಡಬಲ್ಲೆ.' ಅದೇ ಡಿ ವಲೆರಾ, ಸರದಾರ ವಲ್ಲಭಭಾಯಿಯವರ ಹಾಗಲ್ಲ ಮೌಲಾನಾ 'ನಿಮಗೆ ಚಿಲ್ಲರೆ ಚಪಲವೂ ಇಲ್ಲವಲ್ಲ' ಎಂದನಂತೆ ಥಾಮಸ್ ಡಿ ವಲೆರಾಗೆ ಒಮ್ಮೆ. ಅಂದರೆ ಸಿಗರೇಟು ಸೇದುವುದು ಕೂಡ ಇಲ್ಲವಲ್ಲ ಎಂತ. ಡಿ ವಲೆರಾ ಹೇಳಿದರಂತೆ. 'ಇಲ್ಲ ಥಾಮಸ್ ಅದಕ್ಕೆ ಕಾರಣ ನೀವು, ಇಂಗ್ಲಿಷರು. ಒಂದು ಸಲ—ನನಗೆ ಚಿರಸ್ಮರಣೀಯವಾದ ಒಂದು ಸಲ—ನನನ್ನು ಹಿಡಿದು ನಿಮ್ಮ ಲಿಂಕನ್ ಸೆರೆಮನೆಗೆ ಒಯ್ದರು. ಸೆರೆಮನೆಯ ಬಳಿ ಬಂದಾಗ ನನ್ನ ಜೊತೆಗಿದ್ದ ಸಿಪಾಯಿಗೆ ಒಂದು ಸಿಗರೇಟು ಬೇಕೆಂದು ಕೇಳಿದೆ. ಅವನು ಕೊಟ್ಟ. ನಾನು ಹಚ್ಚಿದೆ. ಸುಡುತ್ತಿದ್ದ ಆ ಸಿಗರೇಟಿನ ಕಡೆ ನೋಡಿ—ಈ ಬ್ರಿಟಿಷರು ನನ್ನನ್ನು ಗಲ್ಲಿಗೇರಿಸುತ್ತಾರೆ, ಹಾಗಿದ್ದರೆ ಇದೇ ಕೊನೆಯ ಸಿಗರೇಟು. ಒಂದುವೇಳೆ ಸೆರೆಯಿಂದ ಹೊರಗೆ ಹೋದರೆ ಇನ್ನೊಂದು ಸಿಗರೇಟು ಮುಟ್ಟುವುದಿಲ್ಲ. ಇದರ ನೆನಪೇ ಕೊನೆತನಕ ಇರಲಿ ಎಂದುಕೊಂಡೆ. ಹೊರಗೆ ಬಂದೂ ಬಂದೆ: ಅಂದಿನಿಂದ ಹೊಗೆ ಸೇದಿಲ್ಲ. ಸರದಾರ ವಲ್ಲಭಭಾಯಿಯವರದೂ [illegible] ಅವರು ಮೊದಲು ಸೆರೆಯಾದಾಗ ಹೀಗೇ ಆಯಿತು. ಅವರಿಗೇನು ಗಲ್ಲಾಗಿರಲಿಲ್ಲ. ಅವರಿಗಾದ ಶಿಕ್ಷೆಯೂ ನಗುಪಾಟಲು ಅನ್ನುವಷ್ಟು ಅತ್ಯಲ್ಪ, ಮೂರೇ ತಿಂಗಳು. ತಮ್ಮ ಜೊತೆಗಿದ್ದ ಪೋಲೀಸ್ ಅಧಿಕಾರಿ ಕೊಟ್ಟ ಸಿಗರೇಟನ್ನು ಬೇಡವೆಂದರು. ಅದೇ ಕೊನೆ, ಮತ್ತೆ ಸಿಗರೇಟು ಮುಟ್ಟಲಿಲ್ಲ. ಮೌಲಾನಾ ಸಿಗರೇಟಿಲ್ಲದೆ ಹದಿನೈದು ತಿಂಗಳು ಇದ್ದರು. ಆದರೆ ಬಿಡುಗಡೆಯಾದೊಡನೆಯೆ ಸೇದಿದರು. ಮೀರತ್ ಸೆರೆಮನೆಯಲ್ಲಿ ಸಿಗರೇಟ್ ಸೇದುವ ಸ್ವಾತಂತ್ರ್ಯ ಕೊಟ್ಟಾಗ ಬೇಡವೆನ್ನಲಿಲ್ಲ.

ಅವರ ದಿನಚರಿಯಲ್ಲಿ ಕ್ರಮ—ನಿಯಮ ಹೆಚ್ಚು. ನಸುಕಿನಲ್ಲೇ ಏಳುತ್ತಾರೆ. ಸಿಗರೇಟು ವಿನಾ ಯಾವ ಚಿಲ್ಲರೆ ಚಪಲವೂ ಇಲ್ಲ. ನಾಟಕ ಸಿನಿಮಾಕ್ಕೆ ಎಂದೂ ಹೋದ ಹಾಗಿಲ್ಲ. ಮೆರವಣಿಗೆ ಜನಸಣೆ ಕಂಡರೆ ಅವರಿಗೆ ಒಗ್ಗುವುದಿಲ್ಲ. ರಾತ್ರಿ ಭೋಜನಾದಿಗಳಿಗೆ ಒಪ್ಪುವುದು ಬಹಳ ಅಪರೂಪ. ಒಳ್ಳೇ ನಯವಾದ ಚತುರರಾಗಿ ಮಾಗಿ. ಜನ ಜಂಗುಳಿಯ ಭಾಷಣಕಾರರ ಗಟ್ಟಿತನವೂ ಇಲ್ಲ, ಅವರ ಟೊಳ್ಳೂ ಇಲ್ಲ. ವಿಷಯ ಮಂಥನಕ್ಕೆ ಇಳಿದರೆ ಅವರ ಸಲಹೆ ಅತ್ಯಮೂಲ್ಯ. ಕಮಿಟಿ ಸಭೆಗಳಲ್ಲಿ ಅವರ ಕೈವಾಡ ನೋಡಬೇಕು. ಅವರ ಸ್ವಭಾವಕ್ಕೆ ಆ ಸಭೆಗಳೇ ಉತ್ತಮ ಅವಕಾಶ. ಮಾತಿಗೆ ನಿಂತರೆ ತಮ್ಮ ಸರಳವಾದ ನೇರವಾದ ಕೂರಾದ ವಕ್ತೃತ್ವದಿಂದ ಕೇಳುವವರನ್ನು ಮೈಮರೆಸಬಲ್ಲರು. ಆದರೂ ಜನಗಳ ಗುಂಪಿನಲ್ಲಿ ನಿಲ್ಲುವ ಜನನಾಯಕರಲ್ಲ.

ಅಂದವಾಗಿರಲು ನಿಮಗೆ ಇಷ್ಟವಿದೆಯೆ ?

ನಿಮ್ಮನ್ನು ಎಲ್ಲರೂ ಮೆಚ್ಚಬೇಡವೆ ?

ಹಾಗಾದರೆ ನಿಮಗೆ ಬೇಕಾದ

ರೇಶಿಮೆ ಬಟ್ಟೆಗಳು

ಸೀರೆಗಳು

ಬಾರ್ಡರುಗಳು

ಬ್ರೊಕೇಡುಗಳು

ಗಂಡಸರ ಉಡುಪು

ಮತ್ತು

ಮನೆಬಳಕೆ ಸಾಮಾನಿಗೆ

ದಿ ಇಂಡಿಯನ್ ಸಿಲ್ಕ್ ಸ್ಟೋರ್ಸ್

೧೩೩-೧೩೪ ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

ಯೋಗ್ಯವಾದ ನಿಗದಿ ಧಾರಣೆಗೆ ಹೆಸರಾದ ಒಂದೇ ಅಂಗಡಿ



ಮುದ್ರಕರು : ಹೆಚ್. ಎಸ್. ಮಂಜಯ್ಯ

[illegible]ಟಕ ಮುದ್ರಣಾಲಯ, ಬೆಂಗಳೂರು ನಗರ.

ಯಾವಾಗಲೂ

# ಚಂದೀರಾಮ್

ಬಳಿಗೆ ಬನ್ನಿ

**ರೇಶ್ಮೆಬಟ್ಟೆ, ಸೀರೆಗಳು ಹೊಸ ಹೊಸ ತರದ್ದು ಸಿಗುತ್ತವೆ**

**ಯೋಗ್ಯ ನಿಗದಿ ಧಾರಣೆ.**

ಹೊಸ ಹೊಸ ರೇಶ್ಮೆ

ಅಂದವಾದ ಸೀರೆ

ನಚ್ಚು ಮೆಚ್ಚಿನ ಅಂಚು

ವಿವಿಧ

ಬಣ್ಣಗಳ ಜೋಕೇನು

ಇನ್ನೂ ಎಷ್ಟೋ

ಕಾಣಿಕೆ

ಸಾಮಾನುಗಳು

ಕೈಚೀಲ, ದಂತ

ಬೆಳ್ಳಿ ಸಾಮಾನು

ಫರ್ನಿಷಿಂಗ್ ಫ್ಯಾಬ್ರಿಕ್ಸ್

ಇತ್ಯಾದಿ ಇತ್ಯಾದಿ

## ಚಂದೀರಾಮ್ ಬ್ರದರ್ಸ್

೪. ಸೌತ್ ಪೆರೇಡ್ ಬೆಂಗಳೂರು.